ಕಲ್ಯಾಣ ಕಿರಣ

ನವೆಂಬರ್–2008 ಬೆಲೆ–10.00



7ನೆಯ ಕಲ್ಯಾಣ ಪರ್ವ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು.ಮಾತೆ ಗಂಗಾದೇವಿಯವರು, ಚನ್ನ ಬಸವಾನಂದ ಸ್ವಾಮೀಜಿ.ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಶ್ರೀ ಕೆಂಚಮ್ಮನವರು, ಆರ್.ಬಿ.ಹೆಬ್ಬಳ್ಳಿ ಉಪಸ್ಥಿತರಿದ್ದರು




ಸಮುದಾಯ ಪ್ರಾರ್ಥನೆ



ಪೂಜ್ಯ ಮಾತಾಜಿಯವರಿಂದ ರುದ್ರಾಕ್ಷಿ ಮುಕುಟ ಧಾರಣೆ.









ಕಿರೀಟಾರೋಹಣ ನೆರವೇರಿಸಿದ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರಿಗೆ ಪುಷ್ಪವೃಷ್ಟಿ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-38 | ಬಸವ ಶಕೆ-875 | ಆಜೀವ ಸದಸ್ಯತ್ವ 1000 ರೂ.

ಸಂಬಿಕೆ-10 | ನವೆಂಬರ್ 2008 | ವಾರ್ಷಿಕ ಚಂದಾ 100/- ರೂ.

★ ಬಸವ ಧರ್ಮದ ಕಿರಣವಾಗಲು ಬಾ ★

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ ॥ ಪ ॥

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು ॥ 1 ॥

ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿಹುದು ॥ 2 ॥

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ ॥ 3 ॥

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥ 4 ॥

– ಮಾತಾಜಿ

ಶರಣ ಮೇಳ ಪ್ರಚಾರ – ಬ್ಯಾನರ್‌ಗಳ ಮೂಲಕ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 2009ರ ಜನವರಿ 11ರಿಂದ 15ರವರೆಗೆ 22ನೆಯ ಶರಣ ಮೇಳವು ಜರುಗಲಿದೆಯಷ್ಟೆ. ಊರಿನ ಸರ್ಕಲ್ ಮತ್ತಿತರ ಸ್ಥಳಗಳಲ್ಲಿ ಕಟ್ಟಲು ದೊಡ್ಡ ಸೈಜಿನ ಬ್ಯಾನರ್ ಮಾಡಿಸಿದರೆ ಚೆನ್ನಾಗಿರುತ್ತದೆ. ಆದ್ದರಿಂದ ಬೇರೆ ಬೇರೆ ಊರುಗಳವರು ತಮ್ಮ ಊರುಗಳ ಪ್ರಮುಖ ಸ್ಥಳದಲ್ಲಿ ಕಟ್ಟಲು ಫ್ಲೆಕ್ಸ್ ಬ್ಯಾನರ್ ಬಯಸಿದರೆ ಅತ್ಯಂತ ಯೋಗ್ಯ ಬೆಲೆಯಲ್ಲಿ ಮಾಡಿಸಿ ಕಳಿಸಲಾಗುವುದು. ಅದರಲ್ಲಿ ಬ್ಯಾನರ್ ಮಾಡಿಸಿದವರ ಭಾವಚಿತ್ರ ಸಹ ಹಾಕಿಸಿ ಕೊಳ್ಳಬಹುದು. ದಾನಿಗಳ ಹೆಸರು, ಭಾವಚಿತ್ರ ಮತ್ತು ವಿಳಾಸವನ್ನು ಫೋನ್ ನಂಬರ್ ಸಹಿತ ಕಳಿಸಿಕೊಡಬೇಕು. ಸೈಜ್ ಮತ್ತು ರೇಟ್ ಬಗ್ಗೆ ದೂರವಾಣಿಯಲ್ಲಿ ವಿಚಾರಿಸಬಹುದಾಗಿರುತ್ತದೆ.

(ವಿ.ಸೂಚನೆ : ರಾಷ್ಟ್ರೀಯ ಬಸವ ದಳದವರು ಅಂಥ ದಾನಿಗಳ ಫೋಟೋ ಪಡೆದು ಬೆಂಗಳೂರು ವಿಳಾಸಕ್ಕೆ ಕಳಿಸಬಹುದು ಮತ್ತು ಅಂಥ ದಾನಿಗಳಿಗೆ ಪ್ರೇರಣೆ ನೀಡಿ ಬಹಳಷ್ಟು ಬ್ಯಾನರ್ಸ್ ಮಾಡಿಸಿ ತಮ್ಮ ಊರುಗಳಲ್ಲಿ ಕಟ್ಟಬಹುದು.)

ಬಸವರಸ, ಬಸವ ಮಂಟಪ, 2035, 2ನೇ ಬ್ಲಾಕ್, 20ನೇ ಮೇನ್,
ರಾಜಾಜಿನಗರ, ಬೆಂ-10
ಫೋನ್ ನಂ. 9241220022/ 23131476/23325335

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಬಾ ಭಕ್ತ ಶರಣಾಗು	ಮಾತಾಜಿ	-1
2. 22ನೆಯ ಶರಣ ಮೇಳ		
3. ಸಂಪಾದಕೀಯ :	ಮಾತಾಜಿ	
1. ಸರ್ಕಾರ ಮತ್ತು ಮಠಗಳಿಗೆ ನೆರವು		-5
2. ಮತಾಂತರ ನಿಷೇಧ ಕಾನೂನು ಎಷ್ಟು ಸರಿ?		-6
3. ಲಿಂಗಾಯತರು ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರ		-13
4. ಸಿಖ್- ಅನುಕರಣೀಯ ಸಮಾಜ		-16
4. ಬಸವ ವಚನಾಮೃತ ಭಾಗ -6	ಮಾತಾಜಿ	-18
5. ಸಮಸ್ಯೆ ? - ಸಮಾಧಾನ !	ಮಾತಾಜಿ	- 29
6. ಶರಣ ವ್ರತ ಸ್ವೀಕಾರ	-	-31
7. ವಚನ ದುಂದುಭಿ	ಸಚ್ಚಿದಾನಂದ	-32
8. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಶರಣ ಮೇಳ ಪ್ರಚಾರ ಪ್ರವಾಸ		-33

ಅಕ್ಕನ ಅಮರವಾಣಿ

ಕಣ್ಗೆ ಶೃಂಗಾರ ಗುರು ಹಿರಿಯರ ನೋಡುವುದು
ಕರ್ಣಕೆ ಶೃಂಗಾರ ಪುರಾತರ ಸುಗೀತಂಗಳ ಕೇಳುವುದು
ವಚನಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು
ಜೀವಿಸುವ ಜೀವಿತಕ್ಕೆ ಶೃಂಗಾರ ಗಣಮೇಳಾಪ
ಇವಿಲ್ಲದ ಜೀವಿಯ ಬಾಳುವ ಏತಕ್ಕೆ ಬಾತೆಯಯ್ಯ
ಚನ್ನಮಲ್ಲಿಕಾರ್ಜುನ ?

ಕಲ್ಯಾಣ ಕಿರಣದ ಯಾವುದೇ ದೂರು/ವಿವರ ನೀಡಲು ಈ ನಂಬರಿಗೆ ಕರೆ ಮಾಡಿರಿ.

9620058492/9620057562

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೆರಡನೆಯ

ಶರಣ ಮೇಳ

2009ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾ ಭೂಮಿ, ತಪೋ ಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೆರಡನೆಯ ಶರಣ ಮೇಳವು 2009ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ

ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23131476

ಶರಣ ಮೇಳ ಉತ್ಸವ ಸಮಿತಿ
S.B.10818354899
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಕೂಡಲ ಸಂಗಮ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
C.A.04361010000248
ಸಿಂಡಿಕೇಟ್ ಬ್ಯಾಂಕ್, 2ನೇ ಸ್ಟೇಜ್
ರಾಜಾಜಿನಗರ, ಬೆಂಗಳೂರು

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268014/268007/268140

1. ಸರ್ಕಾರ ಮತ್ತು ಮಠಗಳಿಗೆ ನೆರವು

ಬಸವ ಕಲ್ಯಾಣದಲ್ಲಿ 7ನೆಯ ಕಲ್ಯಾಣ ಪರ್ವವು ವೈಭವ ಪೂರ್ಣವಾಗಿ ಜರುಗಿತು. ದಿ.12ರಂದು ಉದ್ಘಾಟನಾ ಸಮಾವೇಶ ನೆರವೇರಿದ ನಂತರ ಪತ್ರಿಕಾ ಪ್ರತಿನಿಧಿಗಳು ಸಂದರ್ಶನವನ್ನು ಬಯಸಿದರು. ಕಾರ್ಯಕ್ರಮದ ಮಧ್ಯದಲ್ಲೇ ಸ್ವಲ್ಪ ಕಾಲ ಬೇರೆ ಕಡೆ ಹೋಗಿ ಸಂದರ್ಶನದಲ್ಲಿ ಭಾಗಿಯಾದೆ. ಹಲವಾರು ಪ್ರಶ್ನೆಗಳನ್ನು ಕೇಳಿದರು. ಅದರಲ್ಲಿ ಒಂದು ಪ್ರಶ್ನೆ. ಈಗಿನ ಸರ್ಕಾರವು ಗುರುಗಳಿಗೆ, ಮಠಮಾನ್ಯಗಳಿಗೆ ಕೋಟಿಗಟ್ಟಳೆ ಧನ ಸಹಾಯ ನೀಡುತ್ತಿದೆಯಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

ತಟ್ಟನೆ ನನಗೆ ಧರ್ಮಪಿತ ಬಸವಣ್ಣನವರ ಜೀವಿತದ 2 ಪ್ರಸಂಗ ನೆನಪಿಗೆ ಬಂದವು.

1. ದೀಪದ ಉದಾಹರಣೆ (ಕ್ರಾಂತಿಯೋಗಿ ಬಸವಣ್ಣದಲ್ಲಿ ಚಿತ್ರೀಕರಿಸಲಾಗಿದೆ.)
2. ಬೊಕ್ಕಸದ ದುರುಪಯೋಗದ ಆರೋಪ ಬಂದಾಗ ಅವರು ಕೊಡುವ ಉತ್ತರ.(ಹರಿಹರ ಕವಿ ಚಿತ್ರಿಸಿದ್ದಾನೆ.)

ತಮ್ಮ ಮನೆಯಲ್ಲೇ ಕುಳಿತು ಬೊಕ್ಕಸದ ಕೆಲಸ ಮಾಡುವಾಗ ಉರಿಸುವ ದೀಪಕ್ಕೆ ಬೊಕ್ಕಸದ ಹಣದ ಎಣ್ಣೆಯನ್ನು ಉಪಯೋಗಿಸಿದರೆ, ವೈಯಕ್ತಿಕ ಕೆಲಸ ಮಾಡುವಾಗ ಬೇರೆ ದೀಪ ಹಚ್ಚಿಕೊಂಡು ಅದಕ್ಕೆ ತಮ್ಮ ಸಂಬಳದ ಎಣ್ಣೆ ಉಪಯೋಗಿಸುವುದು ಒಂದು ಪ್ರಸಂಗ. "ಬಸವಣ್ಣನವರನ್ನು ನಂಬಿದ ಅನುಯಾಯಿಗಳು ಹೊಟ್ಟೆ ತುಂಬ ಉಣ್ಣುವರು. ಮೈತುಂಬ ಬಟ್ಟೆ ತೊಡುವರು, ಅನುಭವ ಮಂಟಪಕ್ಕೂ ಕೊಡುವರು. ಮೊದಲು ದರಿದ್ರತನದಲ್ಲಿ ಇದ್ದವರು ಈಗ ಇಷ್ಟು ಚೆನ್ನಾಗಿರುವರು. ಇದಕ್ಕೆ ಹಣ ಎಲ್ಲಿಂದ ಬರುತ್ತದೆ? ಬಸವಣ್ಣನವರು ಭಂಡಾರಿ (ಅರ್ಥಮಂತ್ರಿ)ಯಾಗಿರುವುದರಿಂದ ಬೊಕ್ಕಸದ ಹಣವನ್ನು ಅನುಯಾಯಿಗಳಿಗೆ ಸೂರೆ ಮಾಡುತ್ತಿರುವರು." ಎಂದು ವಿರೋಧಿಗಳು ಆರೋಪ ಮಾಡುವರು. ಆಗ ಧರ್ಮಪಿತ ಬಸವಣ್ಣನವರು, "ಸೂರ್ಯನು ಕನ್ನಡಿಯ ಬೆಳಗನ್ನು ತಾನು ಬೆಳಗಲಿಕ್ಕೆ ತೆಗೆದುಕೊಳ್ಳುವನೆ? ಸಮುದ್ರ ನದಿಯ ನೀರನ್ನು ಕದಿಯುವುದೇ?" ಎಂದು ಕೇಳಿ, ಶರಣರು ತಮ್ಮ ಒಡೆಯಂ ತಾವು ಕೊಂಡರು! ಎಂದು ಹೇಳುವರು. ಅಂದರೆ ತಾವು ಕಾಯಕ ಮಾಡಿ ಗಳಿಸಿದ ಹಣವನ್ನು ತಾವು ಬದುಕಲು ಮತ್ತು ದಾಸೋಹ ಮಾಡಲು ಉಪಯೋಗಿಸಿಕೊಳ್ಳುವರು ಎಂದು ಬಿಜ್ಜಳ ಮಹಾರಾಜನಿಗೆ ಉತ್ತರಿಸುವರು. ಇದಕ್ಕೆ ಸಾಕ್ಷಿಯಾಗಿದೆ ಈ ಕೆಳಕಂಡ ವಚನ.

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲ್ಲಿ ಹರಿಯಲೇತಕ್ಕೆ
ಲಜ್ಜೆಗೆಡಲೇಕೆ, ನಾಣು ಗೆಡಲೇಕೆ?
ಲಿಂಗದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರ ಎನಗೇಕಯ್ಯ?

ಅಂದರೆ ಶರಣರು ಕಾಯಕದಿಂದ ಆರ್ಜಿಸಿದ್ದನ್ನು ಮಾತ್ರ ಬಳಸುತ್ತಿದ್ದರು. ಜಂಗಮನು ಶರಣರು ಕಾಯಕದಿಂದ ಗಳಿಸಿದ ಹಣದಿಂದ ಮಾಡಿದ ಧನ ದಾಸೋಹವನ್ನು ಮಾತ್ರ ಸ್ವೀಕರಿಸುತ್ತಿದ್ದನು.

ಧರ್ಮಪಿತರು ಬಿಜ್ಜಳನಿಗೆ ಅಪಾರ ಕಡವರವನ್ನು ಸಿಂಹಾಸನದ ಕೆಳಗಿನಿಂದ ತೆಗೆಸಿಕೊಟ್ಟರು. ಆಗ ಬಿಜ್ಜಳನು ಸಂತೋಷದಿಂದ ಬಹುಮಾನವಾಗಿ ನಿಧಿಯ ಒಂದು ಪಾಲು ಕೊಡಹೋದನು. ಧರ್ಮಪಿತರು ಅದನ್ನು ಸ್ವೀಕರಿಸದೆ, ನಿರಾಕರಿಸಿ ಹೇಳುತ್ತಾರೆ, "ಕೊಡಲು ನಿಮಗಾಗಲಿ, ತೆಗೆದುಕೊಳ್ಳಲು ನನಗಾಗಲಿ ಹಕ್ಕಿಲ್ಲ. ಸಂಪಾದಿಸಿದವರು ಹಿಂದಿನ ಚಕ್ರವರ್ತಿ, ಬಳಸಬೇಕಾದವರು ಪ್ರಜೆಗಳು; ನಾವು ನೀವು ಬರೀ ಯೋಜಕರು ಮಾತ್ರ."

ಗುರು ಬಸವಣ್ಣನವರ ಈ ತತ್ವಾದರ್ಶದ ಹಿನ್ನೆಲೆಯಲ್ಲಿ ಸರ್ಕಾರದ ಮುಖ್ಯಸ್ಥರು ಕಡ್ಲೆಪುರಿ ಹಂಚಿದಂತೆ ವಿವಿಧ ಮಠಗಳಿಗೆ, ಮಠಾಧಿಕಾರಿಗಳಿಗೆ ಕೋಟಿಗಟ್ಟಳೆ ಹಣ ಹಂಚುವುದು ನೋಡಿ ನಾನಂತೂ ಸ್ತಂಭೀಭೂತಳಾದೆ. ಗುರುಗಳಿಗೆ, ಗುರು ಮಠಕ್ಕೆ ಗೌರವ ಸಲ್ಲಿಸುವುದು, ಕಾಣಿಕ ಸಲ್ಲಿಸುವುದು ಆಯಾ ಗುರುಗಳ, ಮಠಗಳ ಭಕ್ತರ ಕರ್ತವ್ಯ, ರಾಜಕಾರಣಿಗಳಿಗೆ ಆಯಾ ಮಠಗಳ ಬಗ್ಗೆ ಭಕ್ತಿ-ಗೌರವ ಇದ್ದರೆ ತಮ್ಮ ವೈಯಕ್ತಿಕ ಕಾಣಿಕೆ ಸಲ್ಲಿಸಬಹುದು. ಸರ್ಕಾರದ ಹಣ ಏನಿದ್ದರೂ ಜನಪರ ಕಾರ್ಯಕ್ರಮಗಳಿಗೆ, ಜನರ ಉಪಯೋಗಕ್ಕೆ ವಿನಿಯೋಗವಾಗಬೇಕು.

ನಮ್ಮ ಅಭಿಮಾನಿಗಳಲ್ಲಿ ಕೆಲವರು (ಉದಾ: ಶ್ರೀಕಂಠ ಮೂರ್ತಿ) ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಹೋಗಿ 108 ಅಡಿ ಬಸವ ಪುತ್ಥಳಿ ನಿರ್ಮಾಣಕ್ಕೆ ಧನ ಸಹಾಯ ಯಾಚಿಸುವುದಾಗಿ ನಮ್ಮ

ಒಪ್ಪಿಗೆ ಕೇಳಿದರು. ನಾನು ಒಪ್ಪಿಗೆ ನೀಡಲಿಲ್ಲ. "ಧರ್ಮಗುರು ಬಸವಣ್ಣನವರಿಗೆ ಕೃತಜ್ಞತೆ ಸಲ್ಲಿಸುವುದು ಅನುಯಾಯಿಗಳ ಕರ್ತವ್ಯ; ಸಮತಾವಾದಿ ಬಸವಣ್ಣನವರಿಗೆ ಕೃತಜ್ಞತೆ ಸಲ್ಲಿಸುವುದು ನಾಡಿನ ಪ್ರಜ್ಞಾವಂತರ ಕರ್ತವ್ಯ. ಜನರೇ ಕೊಡಲಿ ನಿಧಾನವಾಗಿ ಆದರೂ ಪರವಾಗಿಲ್ಲ ಭಕ್ತರ ಕಾಣಿಕೆಯಿಂದಲೇ ಆಗಬೇಕು. ನೀವ್ಯಾರೂ ಹಾಗೆ ಕೇಳಲು ಹೋಗಕೂಡದು, ಸರ್ಕಾರದ ಹಣ ಜನತೆಯ ಹಿತಕ್ಕಾಗಿ ಬಳಕೆಯಾಗಬೇಕು." ಎಂದು ಸ್ಪಷ್ಟವಾಗಿ ತಿಳಿಸಿದೆ. ಧರ್ಮಗುರು ಬಸವಣ್ಣನವರ ಸಿದ್ಧಾಂತ, ಆದರ್ಶ ಕೇವಲ ಹೇಳಲು-ಕೇಳಲು ಅಲ್ಲ ಜೀವನದಲ್ಲಿ ಅನುಷ್ಠಾನ ಮಾಡಲು ತಾನೆ?

ಮಾಧ್ಯಮದ ಪ್ರತಿನಿಧಿಗಳು ಕೇಳಿದ ನೇರ ಪ್ರಶ್ನೆಗೆ ನಾನು ನೇರವಾಗಿ ಉತ್ತರಿಸಿದೆ, ಸರ್ಕಾರವು ಕ್ಷೇತ್ರಗಳ ಅಭಿವೃದ್ಧಿ ಮಾಡಲಿ. ಕೂಡಲ ಸಂಗಮ, ಬಸವ ಕಲ್ಯಾಣ, ಬಸವನ ಬಾಗೇವಾಡಿ, ತರೀಕರೆ (ಅಕ್ಕನಾಗಮ್ಮನ ಕ್ಷೇತ್ರ) ಉಡುತಡಿ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿ ಸರ್ಕಾರದ ಕರ್ತವ್ಯ. ಆದರೆ ಗುರುಗಳು, ಮಠಗಳಿಗೆ ಕೊಡುವುದು ತಪ್ಪು; ಏನಿದ್ದರೂ ಸರ್ಕಾರದ ಹಣ ಜನೋಪಯೋಗಿ ಕೆಲಸಗಳಿಗೆ ಮಾತ್ರ ವಿನಿಯೋಗವಾಗಬೇಕು.

2. ಮತಾಂತರ ನಿಷೇಧ ಕಾನೂನು ಎಷ್ಟು ಸರಿ?

ಇದ್ದಕ್ಕಿದ್ದಂತೆಯೇ ಮತಾಂತರದ ವಿಷಯ ಭುಗಿಲೆದ್ದು ಪತ್ರಿಕೆಗಳ ಮೂಲಕ ಬಹುಮುಖಿ ಚರ್ಚೆಯಾಗುತ್ತಿದೆ. ಒರಿಸ್ಸಾದಲ್ಲಿ ಬಹು ಉಗ್ರವಾಗಿ ಚರ್ಚ್ ಹಾಗೂ ಮತಾಂತರದ ವಿರುದ್ಧ ಹಿಂಸಾತ್ಮಕ ಪ್ರತಿಕ್ರಿಯೆ ದೊರೆತಿದೆ. ಕರ್ನಾಟಕದಲ್ಲಿ ಹಲವರು ಕಡೆ "ಗುಂಗಾರಿ ತಿಂದು ಕುಲಗೆಡಿಸಿಕೊಂಡರು", "ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡರು" ಎಂಬಂತೆ, ಚರ್ಚ್‌ಗಳ ಮೇಲೆ ದಾಳಿ ಮಾಡಿ ಕೆಲವು ಕಡೆ ಗಾಜು ಒಡೆಯುವ ಚಿಲ್ಲರೆ ಕೆಲಸ ಮಾಡಿ ಕೆಲವರು ಸಂಘ ಪರಿವಾರವನ್ನು ಟೀಕೆಗೆ ಗುರಿ ಮಾಡಿದರು. ಇದು ಅನಾಮಿಕ ದುಷ್ಕರ್ಮಿಗಳಿಂದ ಆದುದು ಎಂದು ಮುಖ್ಯ ಮಂತ್ರಿಗಳು, ಪೋಲೀಸ್ ಇಲಾಖೆ ಹೇಳಿಕೆ ನೀಡಿ ಮುಖ ಉಳಿಸಿಕೊಳ್ಳುತ್ತಿರುವಾಗ ಬಜರಂಗದಳದ ಮುಖ್ಯಸ್ಥರಾದ ಮಹೇಂದ್ರ ಕುಮಾರ್ "ಇದು ತಮ್ಮ ಸಂಘಟನೆಯದೇ ಕೆಲಸ, ಇದು ಇನ್ನೂ ತೀವ್ರವಾಗುತ್ತ ಹೋಗುತ್ತದೆ." ಎಂದು ಹೇಳಿಕೆಯನ್ನೂ ನೀಡಿ ಮುಖ್ಯ ಮಂತ್ರಿ, ಗೃಹ ಮಂತ್ರಿಗಳಿಗೆ, ಪೋಲೀಸ್ ಇಲಾಖೆಗೆ ಮುಜುಗರ ಉಂಟು ಮಾಡಿದರು. ಕ್ರೈಸ್ತ ಚರ್ಚುಗಳು, ಪಾದ್ರಿಗಳು ಬಹಳಷ್ಟು ಮತಾಂತರವನ್ನು ಮಾಡಿ ಕ್ರೈಸ್ತರ ಸಂಖ್ಯೆಯನ್ನು ಜಾಸ್ತಿ ಮಾಡಿ, ಹಿಂದುಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಿರುವುದಲ್ಲದೆ ದೇಶದ ಈಶಾನ್ಯ ರಾಜ್ಯಗಳಲ್ಲಿ ಅಶಾಂತಿಯನ್ನು ಉಂಟು ಮಾಡುತ್ತಿದ್ದಾರೆ ಎಂಬುದು ಈ ಉದ್ರಿಕ್ತತೆಯ ಹಿಂದಿರುವ ಪ್ರಶ್ನೆ. ಇದೇ ಹಿನ್ನೆಲೆಯಲ್ಲಿ ಮತಾಂತರ ನಿಷೇಧ ಕಾನೂನು ಜಾರಿಗೆ ಬರಬೇಕೆಂದು, ಕೇಂದ್ರ ಸರ್ಕಾರ ಅದನ್ನು ಜಾರಿಗೆ ತರಬೇಕೆಂದು ಕರ್ನಾಟಕದ ಬಿ.ಜೆ.ಪಿ ಸರ್ಕಾರದ ಆಗ್ರಹ ಮತ್ತು ಅನೇಕ ಹಿಂದೂ ವಾದಿಗಳ ಒತ್ತಾಯದ ಬೇಡಿಕೆ.

ಮತಾಂತರದ ಸಮಸ್ಯೆ ಭುಗಿಲೆದ್ದಿದೆ. ಸಂಘ ಪರಿವಾರದವರು ಯಾಕೋ ಕ್ರೈಸ್ತರ ಮತಾಂತರದ ಬಗ್ಗೆ ಮಾತ್ರ ಬುಸುಗುಡುತ್ತಿದ್ದಾರೆ. ಇಸ್ಲಾಮಿಕ್ ಮತಾಂತರದ ಬಗ್ಗೆ ಬಾಯಿಬಿಟ್ಟಿಲ್ಲ. ಏಕೆಂದರೆ ಹಿಂದೂ ಮನುವಾದಿಗಳಿಗೆ ಮುಖ್ಯ ಶತ್ರು ಇಸ್ಲಾಮೀಕರಣ. ಆದರೆ ಅದು ಬಹಳ ಬಲಿಷ್ಠ. ಅದು ಸೆಡ್ಡು ಹೊಡೆದು ನಿಂತರೆ ದೇಶದಲ್ಲೆಲ್ಲ ಹಿಂಸೆ ತಾಂಡವವಾಡುತ್ತದೆ ಎಂದು ಅಂಜಿಯೋ ಏನೋ ಕ್ರಿಸ್ತೀಕರಣದ ಬಗ್ಗೆ ಮಾತ್ರ ಸೆಟೆದು ನಿಂತಿದ್ದಾರೆ.

ಸನ್ನಿವೇಶದ ತೀವ್ರತೆ ಗಮನಿಸಿ ವಿಜಯ ಕರ್ನಾಟಕ ಪತ್ರಿಕೆ ಒಂದು ಸಂವಾದ ವೇದಿಕೆ ಸೃಷ್ಟಿಸಿದೆ. ಪ್ರಪ್ರಥಮವಾಗಿ ಹಿಂದೂ ವಾದವನ್ನು ಸಮರ್ಥಿಸಿಕೊಂಡು ಮತಾಂತರ ವಿರೋಧಿಸಿ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪನವರು ಅಗ್ರ (ಮತ್ತು ಉಗ್ರ) ಲೇಖನವನ್ನು ಬರೆದರು. ಅದನ್ನು ಬೆಂಬಲಿಸಿ ಅಥವಾ ಸಹಮತ ವ್ಯಕ್ತಪಡಿಸಿ ಹುಟ್ಟು ಲಿಂಗಾಯತರಾದರೂ (ಜನಿವಾರ ಧರಿಸಲು ಅವಕಾಶವಿಲ್ಲದೆ ಧರಿಸಿಲ್ಲವಾದರು ಬ್ರಾಹ್ಮಣೀಕರಣಗೊಂಡಿರುವ ಡಾ|| ಎಂ.ಚಿದಾನಂದ ಮೂರ್ತಿಯವರು ಒಂದು ವಿಸ್ತಾರವಾದ ಲೇಖನ ಬರೆದರು. ಹಿಂದೂ ಮನುವಾದವನ್ನು ಖಂಡಿಸಿ ಅಗ್ನಿ ಶ್ರೀಧರ್ ಮತ್ತು ಜಿ.ಕೆ.ಗೋವಿಂದರಾವ್ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿ ಲೇಖನಗಳನ್ನು ಬರೆದಿದ್ದಾರೆ. ಹೀಗೆ ಉಭಯ ಪಕ್ಷಗಳವರಿಂದ ಚಿಂತನೆಯು ನಡೆಯುತ್ತಲಿದೆ.

ವಿಜಯ ಕರ್ನಾಟಕ ಬಹಳಷ್ಟು ಸಲ ವಿಪ್ರ ಕರ್ನಾಟಕವಾಗಿಯೇ ತೋರಿಸಿಕೊಳ್ಳುತ್ತದೆಯಾದರೂ ಈ ಸಂವಾದವನ್ನು ನಡೆಸುವ ಎದೆಗಾರಿಕೆ ತೋರಿರುವುದು ನಿಜಕ್ಕೂ ಆಶ್ಚರ್ಯಕಾರಕ. ಏಕೆಂದರೆ, ಈ ಸಂವಾದ ಭೈರಪ್ಪ, ಡಾ|| ಚಿ.ಮೂರ ಅಂತರಂಗವನ್ನು ಬಯಲು ಮಾಡುವುದರ ಜೊತೆಗೆ ಹಿಂದು

ಧರ್ಮದ ಇತಿಹಾಸದ ತಿಪ್ಪೆಯನ್ನು ಕೆದರಿ ದುರ್ವಾಸನೆಯನ್ನು ಪಸರಿಸಿದ್ದೇ ಅಲ್ಲದೆ ಬಹುಜನರಲ್ಲಿ ಕ್ರೈಸ್ತ ಸಂಸ್ಥೆಗಳ ಬಗ್ಗೆ ಮೆಚ್ಚುಗೆ, ಕ್ರೈಸ್ತರ ಬಗ್ಗೆ ಅನುಕಂಪ ಹುಟ್ಟುವಂತೆ ಮಾಡಿತು.

ಶ್ರೀ ಭೈರಪ್ಪ, ಶ್ರೀ ಚಿ.ಮೂ ಬರೆದಿರುವ ಲೇಖನಗಳು ಪೂರ್ಣ ಸುಳ್ಳೇನಲ್ಲ, ಅವು ಕೆಲವು ಕಟು ಸತ್ಯವನ್ನು ಬಯಲಿಗೆ ಇಟ್ಟವೆ. ಆದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಭಾರತದಲ್ಲಿ ಬೇರು ಬಿಡಲು ಸ್ವದೇಶೀಯ ರಾಜರು, ಸಾಮಾಜಿಕ ವ್ಯವಸ್ಥೆಯಲ್ಲಿನ ಶ್ರೇಣೀಕೃತ ಪದ್ಧತಿಯೇ ಕಾರಣ ಎಂದರೆ ಸುಳ್ಳಲ್ಲ. ಇಸ್ಲಾಂಮಿಕ್ ದಾಳಿಕೋರರು ಕೇವಲ 27 ಜನರಿದ್ದರು. ಸೌರಾಷ್ಟ್ರ ಸೋಮನಾಥ ಲಿಂಗವನ್ನು ಛೇದಿಸುವಾಗ ದೇವಸ್ಥಾನದ ಸುತ್ತಲೂ ಇದ್ದ ಪೂಜಾರಿ ವರ್ಗ ಏನನ್ನೂ ಮಾಡಲಿಲ್ಲ, ಪ್ರತಿಭಟಿಸಲಿಲ್ಲ. ಬ್ರಾಹ್ಮಣರು ಕತ್ತಿ ಹಿಡಿಯುವವರಲ್ಲ, ಶೂದ್ರರು ಗುಡಿಯೊಳಗೆ ಬರುವಂತಿಲ್ಲ. ಐರೋಪ್ಯರು ಬಂದುದು ತಕ್ಕಡಿ ಹಿಡಿದು ವ್ಯಾಪಾರ ಮಾಡಲಿಕ್ಕೆ. ಅತ್ಯಂತ ಸ್ವಲ್ಪ ಸಂಖ್ಯೆಯಲ್ಲಿ ಬಂದರು. ಈ ದೇಶದ ಪ್ರಕೃತಿ ಸಂಪತ್ತು, ಸಾಂಬಾರು ಪದಾರ್ಥ, ಮುತ್ತುರತ್ನಗಳು ಉಭಯ ಧರ್ಮೀಯರ ಕಣ್ಮನಗಳನ್ನು ಸೆಳೆದರೆ, ಇಲ್ಲಿದ್ದ ಜಾತಿಪದ್ಧತಿ ವ್ಯವಸ್ಥೆ, ಘೋರವಾದ ಅಸ್ಪೃಶ್ಯತೆಯ ಆಚರಣೆ ಇಸ್ಲಾಂ, ಕ್ರೈಸ್ತ ಧರ್ಮಗಳನ್ನು ಹಬ್ಬಿಸಲು ಬಹು ಫಲವತ್ತಾದ ಭೂಮಿಯಾಗಿ ವಿದೇಶೀಯರಿಗೆ ಕಂಡಿತು. ಹಿಂದೂ ಸಮಾಜದ ದೃಷ್ಟಿಯಿಂದ ಕ್ರೈಸ್ತ ಧರ್ಮವು ಕ್ಷಯ ರೋಗದಂತೆ (ಒಳಗೇ ದುರ್ಬಲ ಗೊಳಿಸುತ್ತಿದ್ದು) ಇಸ್ಲಾಂ ಕುಷ್ಠ ರೋಗದಂತೆ (ದೇಶವನ್ನು ತುಂಡರಿಸುತ್ತ) ಕಾಡುತ್ತಿರುವುದು ನಿಜವಾದರೂ ಸ್ವದೇಶೀ ಧರ್ಮಗಳವರಲ್ಲಿ ವಿವೇಕ, ಎಚ್ಚರ ಮೂಡುತ್ತಿಲ್ಲ. ಎಚ್ಚರ ಮೂಡಿದವರಲ್ಲಿ ಪರಿಹಾರ ತೋಚುತ್ತಿಲ್ಲ. ಇಂದಿಗೂ ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆ ತೀರಾ ಭಯಂಕರವಾಗಿ ಅನುಷ್ಠಾನದಲ್ಲಿ ಇದೆ. ಡಾ|| ಬಿ.ಆರ್.ಅಂಬೇಡ್ಕರ್ ಅವರಿಗೆ ವಿದ್ಯೆ, ಹುದ್ದೆ, ಸಾಮಾಜಿಕ ಸ್ಥಾನ ಎಲ್ಲವೂ ಇದ್ದರೂ ಹುಟ್ಟಿನಿಂದ ಅಸ್ಪೃಶ್ಯರು ಎಂಬ ವಿಲಕ್ಷಣ ಪ್ರೈಲಿಗೆ ಅವರನ್ನು ಎಂತೆಂತಹ ಅವಮಾನಗಳಿಗೆ ದೂಡಿತು ಎಂಬುದನ್ನು ಚರಿತ್ರೆಯಿಂದ ನೋಡಬಹುದು. ಹೀಗಾಗಿ "ನಾನು ಅಸ್ಪೃಶ್ಯನಾಗಿ ಸಾಯಲಾರೆ." ಎಂದು ಅವರು ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿದರು. ನೊಂದವರ ನೋವ ನೋಯದವರು ಎತ್ತ ಬಲ್ಲರು? ಆ ಅವಮಾನ, ಸಂಕಟ ಎಷ್ಟು ಅಸಹನೀಯ. ಇದನ್ನು ತಾಳಲಾರದೆ ಹೊರಗೆ ಹೋದರೆ ಆಗಲೂ ಚಿತ್ರ ಹಿಂಸೆ ಕೊಟ್ಟರೆ ಹೇಗೆ? ಅಸ್ಪೃಶ್ಯತೆಯ ಆಚರಣೆ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಭಯಂಕರವಾಗಿದೆ. ಸೀಮಿತ ಪ್ರದೇಶದಲ್ಲಿ ವಾಸ ಮಾಡುವ ಗ್ರಾಮೀಣ ಜನರಿಗೆ ಯಾರು ಯಾವ ಜಾತಿಯವರು ಎಂಬ ಮಾಹಿತಿ ಇರುವುದರಿಂದ ಜಾತೀಯತೆ ಗ್ರಾಮಗಳಲ್ಲೇ ಜಾಸ್ತಿ.

ಬಹಳ ಹಿಂದೆ ಒಮ್ಮೆ ಒಂದು ಗ್ರಾಮದ ಮಠದಲ್ಲಿ ಪ್ರವಚನ ಮಾಡಲು ನಮ್ಮನ್ನು ಆಹ್ವಾನಿಸಿದ್ದರು. ಮಠದಲ್ಲಿ ಗದ್ದುಗೆ ಇತ್ತು. ಕೆಲವರು ಬಂದು ಬಾಗಿಲ ಹೊರಗೆ ಕುಳಿತು ಪ್ರವಚನ ಕೇಳುತ್ತಿದ್ದರು; ಇದನ್ನು ಗಮನಿಸಿ, ಒಳಗೆ ಪಡಸಾಲೆಯಲ್ಲಿ ಕುಳಿತು ಪ್ರವಚನ ಕೇಳ ಬನ್ನಿ ಎಂದು ನಾನು ಕರೆದೆ, ಅವರು ಬರಲಿಲ್ಲ. ಆಗ ಒಳಗೆ ಇದ್ದವರು, 'ಅವರು ಬರುವುದಿಲ್ಲೇಳ್ರಿ; ಅವರು ಹರಿಜನರು' ಎಂದರು. ನನಗೆ ಬಹಳ ನೋವಾಯಿತು. ಅವರೂ ಸಂಪ್ರದಾಯ ಬದ್ಧರಾಗಿ ಕೀಳರಿಮೆ ತುಂಬಿಕೊಂಡಿರುತ್ತಾರೆ. ಜೊತೆಗೆ ಸವರ್ಣೀಯರ ಭಯವೂ ಇರುತ್ತದೆ. ಅಸ್ಪೃಶ್ಯನು ಕೀಳು ಎಂದು ಮುಟ್ಟಲು ಹಿಂಜರಿಯುವ ಮೇಲ್ಜಾತಿ ಹಿಂದುಗಳು ಹೊಲೆಯರ ದಾಸಪ್ಪ ಹೋಗಿ ಕ್ರೈಸ್ತರ ಜೋಸೆಫ್ ಆಗಿ ಬಂದರೆ ಸಂಕೋಚವಿಲ್ಲದೆ ಒಡನಾಡುತ್ತಾರೆ. ಮರಿಯಮ್ಮ ಮೇರಿಯಮ್ಮ ಆಗಿ ಬಂದರೆ ಒಳಗೆ ಬರಮಾಡಿಕೊಂಡು ಕಾಫಿ ಕೊಡುತ್ತಾರೆ. ಹೀಗೆ ಹಿಂದುಗಳ ಮನದ ಪ್ರೈಲಿಗೆ ಕೆಲಸ ಮಾಡುತ್ತಿರುವಾಗ ದಲಿತರು ಸುಲಭವಾಗಿ ಹೊರಹೋಗುವುದರಲ್ಲಿ ಆಶ್ಚರ್ಯವೇನಿದೆ? ಯಾವ ಅಭಿಮಾನದಿಂದ ಅವರು ಹಿಂದು ಕಕ್ಷೆಯಲ್ಲಿರಲು ಇಷ್ಟಪಡಬೇಕು? ಈ ಕಟು ಸತ್ಯವನ್ನು ವಿಶ್ವಹಿಂದು ಪರಿಷತ್ತು ಮತ್ತು ಸಂಘ ಪರಿವಾರ ಅರಿಯುವುದು ಒಳ್ಳೆಯದು.

ಆಮಿಷ, ಬಲವಂತದ ಮತಾಂತರ?

"ತಾನು ಬಯಸಿದ ಧರ್ಮವನ್ನು ಆಯ್ದುಕೊಳ್ಳುವ, ಆಚರಿಸುವ ಸ್ವಾತಂತ್ರ್ಯವನ್ನು ಭಾರತದ ಸಂವಿಧಾನ ಕೊಡಮಾಡಿದೆ" ಎಂದು ಯಾರಾದರೂ ವಾದ ಮಾಡಿದರೆ ಹಿಂದೂ ವಾದಿಗಳು ಹೇಳುತ್ತಾರೆ, "ನಮಗೆ ಗೊತ್ತು, ಆದರೆ ಆಮಿಷ ತೋರಿಸಿ ಮಾಡುವ ಬಲವಂತದ ಮತಾಂತರ ಅಪರಾಧ." ವೈದಿಕ ಹಿಂದೂ ಧರ್ಮ, ಯಹೂದಿ ಧರ್ಮ, ಪಾರಸಿ ಧರ್ಮ - ಇವು ಹುಟ್ಟಿನಿಂದಲೇ ಧಾರ್ಮಿಕ ಅನುಯಾಯಿತ್ವವನ್ನು ನಿರ್ಧರಿಸುತ್ತವೆ. ಅನ್ಯರು ಒಳಬರಲು ಅವಕಾಶ ನೀಡುವುದಿಲ್ಲ. ವೈದಿಕ ಹಿಂದೂ ಧರ್ಮಕ್ಕೆ ಪ್ರತಿದ್ವಂದ್ವಿಯಾಗಿ ಹುಟ್ಟಿದವು ಜೈನ-ಬೌದ್ಧ, ಲಿಂಗಾಯತ -ಸಿಖ್ ಧರ್ಮಗಳು. ಈ

ನಾಲ್ಕು ಎಲ್ಲ ಮಾನವರಿಗೆ ದೀಕ್ಷೆಯನ್ನು ಕೊಡುತ್ತವೆ. ಅದೇ ರೀತಿ ಕ್ರೈಸ್ತ- ಇಸ್ಲಾಂ ಧರ್ಮಗಳು ಯಹೂದಿ ಧರ್ಮದ ಮತಾಂಧತೆಯನ್ನು ಪ್ರತಿಭಟಿಸಿ ಹುಟ್ಟಿದ ಧರ್ಮಗಳು; ಎಲ್ಲ ಮಾನವರಿಗೆ ತಮ್ಮ ಧರ್ಮದ ದೀಕ್ಷೆ ಕೊಡುತ್ತವೆ. ಬೌದ್ಧ ಧರ್ಮ ಒಂದು ಕಾಲದಲ್ಲಿ ವ್ಯಾಪಕವಾಗಿ ಬೆಳೆಯಿತಾದರೂ ಅಫ್ಘಾನಿಸ್ತಾನ ಮುಂತಾದಲ್ಲಿ ಇಸ್ಲಾಮಿನ ಬಲದ ಮುಂದೆ ಅದು ಕ್ಷೀಣಗೊಂಡಿತು. ಕ್ರೈಸ್ತ ಧರ್ಮ ಐರೋಪ್ಯ ದೇಶ ಆಸ್ಟ್ರೇಲಿಯಾ ಮತ್ತು ಆಫ್ರಿಕಾದ ಬಹಳ ಭಾಗವನ್ನು ಆಕ್ರಮಿಸಿಕೊಂಡು ಬೆಳೆಯಿತು. ಹಾಗೆಯೇ ಇಸ್ಲಾಂ ಕೂಡ ಮಧ್ಯ ಪ್ರಾಚ್ಯ, ಆಫ್ರಿಕಾದ ಬಹುಭಾಗ ಮುಂತಾಗಿ ವ್ಯಾಪಿಸಿಕೊಂಡಿತು. ಈ ಎರಡೂ ಧರ್ಮಗಳಿಗೆ ಭಾರತದಲ್ಲಿರುವ ತಿರಸ್ಕೃತ ಮತ್ತು ನಿರ್ಲಕ್ಷಿತ ಜಾತಿಗಳು, ಬುಡಕಟ್ಟುಗಳ ಮೇಲೆ ಕಣ್ಣು. ಹೀಗಾಗಿ ಪಾಶ್ಚಿಮಾತ್ಯ ರಾಷ್ಟ್ರಗಳು ಕ್ರೈಸ್ತ ಮತದ ವಿಸ್ತಾರಕ್ಕೆ ಕೋಟಿಗಟ್ಟಳೆ ಡಾಲರುಗಳನ್ನ, ಆಹಾರ ಪದಾರ್ಥಗಳನ್ನು ಕಳಿಸುತ್ತ ಚರ್ಚ್‌ಗಳ ಮೂಲಕ ವಿತರಿಸುತ್ತಲಿವೆ.

ಅದೇ ರೀತಿ ತೈಲ ರಾಷ್ಟ್ರಗಳ ಹಣ ಪ್ರವಾಹದೋಪಾದಿಯಲ್ಲಿ ಭಾರತದೊಳಕ್ಕೆ ಹರಿದು ಬರುತ್ತಲಿದ್ದು, ಎಂಥಾ ಕುಗ್ರಾಮಗಳಲ್ಲಿ ಸಹ ಮಸೀದಿ, ಮದರಸಾಗಳ ಭವ್ಯ ಕಟ್ಟಡಗಳು ತಲೆ ಎತ್ತುತ್ತಿವೆ. ಅದೇ ಒಂದು ಬಸವ ಮಂಟಪ ಕಟ್ಟಬೇಕಾದರೆ ಬಹು ಸಂಖ್ಯಾತ ಲಿಂಗಾಯತರಿರುವ ಊರುಗಳಲ್ಲಿ ಸಹ ಪಡಬಾರದ ಪಾಡು ಪಡಬೇಕು. ಕಟ್ಟಿದ ಮೇಲೆ ವಿವಿಧ ಬಣಗಳ ಮಧ್ಯೆ ಜಟಾಪಟಿ ಯುದ್ಧ. ಇವರುಗಳಿಗೆ ಹೊಣೆಗಾರಿಕೆ ಇಲ್ಲ, ಸಮ್ಯಕ್ ಪ್ರಜ್ಞೆ ಇಲ್ಲ.

ಕ್ರೈಸ್ತ ಪಾದ್ರಿಗಳು ಆಮಿಷ ಒಡ್ಡುತ್ತಾರೆ. ಬಲವಂತದ ಮತಾಂತರ ಮಾಡುತ್ತಾರೆ ಎಂದು ಸಂಘ ಪರಿವಾರದ ಹಿಂದುವಾದಿಗಳ ಆರೋಪ. ಹಾಗೆಂದರೇನು? ಹಸಿದವರಿಗೆ ಆಹಾರ ಪದಾರ್ಥ ನೀಡುವುದಾಗಲೀ, ಕಾಯಿಲೆಯಿಂದ ನರಳುವವರಿಗೆ ವೈದ್ಯಕೀಯ ಚಿಕಿತ್ಸೆ ಮಾಡುವುದಾಗಲಿ ಆಮಿಷವೆ? ಹಿಂದು ಸಮಾಜದಲ್ಲಿ ತಿರಸ್ಕೃತರಾದ ಜನರೊಡನೆ ಸ್ನೇಹದಿಂದ ವರ್ತಿಸಿದರೆ ಅವರು ಆಕರ್ಷಿತರಾಗುವುದು ಸಹಜ. ಮತಾಂತರ ಮಾಡಲೆಂದೇ ಹುಟ್ಟಿದ ಕ್ರೈಸ್ತ, ಇಸ್ಲಾಂ ಧರ್ಮಗಳವರನ್ನು ದೂಷಿಸುವುದಕ್ಕಿಂತಲೂ ತಾವೇಕೆ ತಮ್ಮವರೇ ಆದ ದಲಿತರನ್ನು ಆದರದಿಂದ ಕಾಣಬಾರದು ಎಂದು ಅಂತರವಲೋಕನ ಮಾಡಿಕೊಳ್ಳುವುದು ಒಳ್ಳೆತಲ್ಲವೆ? ತಿರುಪತಿ ದೇವಾಲಯಕ್ಕೆ ಬ್ರಹ್ಮೋತ್ಸವದ ದಿನ ಒಂದೇ ದಿನ 10 ಕೋಟಿ ರೂಪಾಯಿ ಕಾಣಿಕೆ ಸಂಗ್ರಹವಾಯಿತು. ಇಷ್ಟಕ್ಕೂ ಸಮಾಧಾನವಿಲ್ಲದೆ ವೆಂಕಟೇಶ, ಶ್ರೀದೇವಿ, ಭೂದೇವಿಯವರ ವಿವಾಹ ಮಾಡಿಸಲು ಮೂರ್ತಿಗಳನ್ನು ಹೊತ್ತು ದೇವಸ್ಥಾನ ಸಮಿತಿಯವರು, ಪೂಜಾರಿಗಳು ಊರೂರು ತಿರುಗುವರಲ್ಲ! ದೇವಾಲಯದ ಆದಾಯದ ಹಣವನ್ನು ಏಕೆ ಬಡ ಹಿಂದುಗಳ, ದಲಿತ ಹಿಂದುಗಳ ಕಲ್ಯಾಣಕ್ಕೆ ಬಳಸಬಾರದು?

ವೈದಿಕ ಮಠಗಳು ತಮ್ಮ ಜನಾಂಗದವರಿಗೆ ಭೂರಿ ಭೋಜನ, ದಕ್ಷಿಣೆ ಕಾಣಿಕೆ ಸಂಗ್ರಹದಲ್ಲಿ ಆಸಕ್ತಿ ಹೊಂದಿದ್ದರೆ, ವೀರಶೈವ ಸ್ವಾಮಿಗಳು ಕಿರೀಟ- ಪೀತಾಂಬರ ಧರಿಸಿ ಇನ್ನಿತರರ ಹೆಗಲ ಮೇಲೆ ಮೆರೆಯಲು ಆಸಕ್ತರಾಗಿದ್ದಾರೆ. ವಿರಕ್ತ ಮಠಗಳು ಇಂಜನಿಯರಿಂಗ್, ಮೆಡಿಕಲ್ ಕಾಲೇಜ್‌ದಿಂದ ಬರುವ ಸಂಪಾದನೆ ಬಾಚುವುದರಲ್ಲಿ ಏಕಾಗ್ರ ಚಿತ್ತರಾಗಿದ್ದಾರೆ. ಇಂಥ ನಿದ್ರಾಸ್ಥಿತಿಯಲ್ಲಿ ಕ್ರೈಸ್ತ , ಇಸ್ಲಾಂ ಧರ್ಮಗಳವರು ಗಪ್ಪನೆ ಜನರನ್ನು ಹಿಡಿದು ಮತಾಂತರಿಸುತ್ತಿದ್ದರೆ ಅದಕ್ಕೆ ಅವರನ್ನೇಕೆ ದೂಷಿಸಬೇಕು, ದ್ವೇಷಿಸಬೇಕು? ಅವರ ಗುರಿಯೇ ತಮ್ಮ ಧರ್ಮಗಳನ್ನು ವಿಸ್ತರಿಸುವುದು. ನಾವೂ ಅವರಿಂದ ಸ್ಫೂರ್ತಿ ಪಡೆದು ಧರ್ಮಪ್ರಚಾರ ಮಾಡಬೇಕು. ಅವರು ಹೇಗೆ ಶಿಕ್ಷಣ ಸಂಸ್ಥೆ, ಆಸ್ಪತ್ರೆಗಳನ್ನು ಬಳಸಿಕೊಂಡು ತಮ್ಮ ಧರ್ಮ ಪ್ರಚಾರ ಮಾಡುವರೋ ಹಾಗೆ ಹಿಂದು ಮತ್ತು ಲಿಂಗಾಯತ ಸಂಸ್ಥೆಗಳೂ ತಮ್ಮ ಧರ್ಮ ಪ್ರಚಾರ ಮಾಡಬೇಕು.

ಶ್ರೀ.ಎಸ್.ಎಲ್.ಭೈರಪ್ಪನವರು ಪೂಜ್ಯ ಸಿದ್ದಗಂಗಾ ಶ್ರೀಗಳನ್ನು ಉಲ್ಲೇಖಿಸಿ ಅವರು ಮತಾಂತರ ಮಾಡುವರೇ ಎಂದು ಉದಾಹರಿಸಿದ್ದಾರೆ. ಪ್ರತಿ ವರ್ಷವೂ ಆ ಸಂಸ್ಥೆಯಿಂದ ಸಾವಿರಾರು ಜನ ಹೊರಹೋಗುತಾರೆ. ಈವರೆಗೆ ಲಕ್ಷಾಂತರ ವಿದ್ಯಾರ್ಥಿಗಳು ಹೊರಹೋಗಿರಬೇಕು. ಉಳಿದವರಿಗೆ ದೀಕ್ಷೆ ಕೊಡುವುದತ್ತಲಿರಲಿ ಲಿಂಗಾಯತ ಮಕ್ಕಳಿಗೆ ಲಿಂಗಪೂಜಾ ನಿಷ್ಠೆ ಬೆಳೆಸಿದ್ದರೆ ಸಾಕಾಗಿತ್ತು, ಲಿಂಗಾಯತ ಸಮಾಜದಲ್ಲಿ ಇಷ್ಟಲಿಂಗಧಾರಿಗಳ ಸಂಖ್ಯೆ ನೂರ್ಮಡಿಗೊಂಡಿರುತ್ತಿತ್ತು. ಅದೇ ಕ್ರೈಸ್ತ ವಿದ್ಯಾಸಂಸ್ಥೆಗಳಲ್ಲಿ ಓದಿದವರಿಗೆ ಕ್ರೈಸ್ತೇತರರಿಗೆ ಸಹ ಕ್ರೈಸ್ತ ಧರ್ಮದ ಬಗ್ಗೆ ಅಭಿಮಾನ ಹುಟ್ಟಿರುತ್ತದೆ. ಕ್ರೈಸ್ತರು ಇತರರಿಗೆ ತಮ್ಮ ಧರ್ಮದ ಬಗ್ಗೆ ಅಭಿಮಾನ ಹುಟ್ಟುವಂತೆ ಬೋಧನೆ ನೀಡುವಾಗ ಇತರರು ತಮ್ಮ ತಮ್ಮ ಧರ್ಮದ ಬಗ್ಗೆ ಅಭಿಮಾನ ಹುಟ್ಟಿಸುವಂತೆ ಬೋಧನೆ ಮಾಡಿದರೆ ತಪ್ಪೇನೂ ಅಲ್ಲವಷ್ಟೆ?

ಮತಾಂತರ ನಿಷೇಧ ಕಾನೂನು ಜಾರಿಗೆ ತರಬೇಕೆಂದು ಆಗ್ರಹಿಸಿ ಅನೇಕ ವೈದಿಕ ಮಠಾಧೀಶರು ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು. ನಂತರ ಪ್ರತಿಭಟನಾ ಪ್ರದರ್ಶನ ಇಟ್ಟಿದ್ದರು. ವಿರಕ್ತ

ಮಠಾಧೀಶರೊಬ್ಬರ ನೇತೃತ್ವ ಎಂದು ಪ್ರಚಾರ ಸಹ ಮಾಡಲಾಗಿತ್ತು. ಕೇಳಿ ನಮಗೆ ಗಾಬರಿಯಾಯಿತು. ಏಕೆಂದರೆ ಲಿಂಗಾಯತ ಧರ್ಮ ಹುಟ್ಟಿದ್ದೇ ಧರ್ಮ ಸಂಸ್ಕಾರವಿಲ್ಲದ ಶೂದ್ರ, ಅಸ್ಪೃಶ್ಯ, ಮಹಿಳೆಯರಿಗೆ ದೀಕ್ಷೆ, ಸಂಸ್ಕಾರ ಕೊಡಲು. ``ಲಿಂಗಾಯತ ಸಮಾಜ ವಿವಿಧ ಮೂಲಗಳಿಂದ ಬಂದ ಜನರ ಒಂದು ಒಕ್ಕೂಟ. ಅಂದಾಗ ಮತಾಂತರ ನಿಷೇಧಕ್ಕೆ ಆಗ್ರಹಿಸುವುದು ಕಾಳಿದಾಸ ಪೂರ್ವಾಶ್ರಮದಲ್ಲಿ ಗಿಡದ ಕೊಂಬೆಯ ಮೇಲೆ ಕುಳಿತು ಟೊಂಗೆಯ ಬುಡ ಕಡಿದುಕೊಂಡಂತೆ.'' ಪೇಜಾವರ ಶ್ರೀಗಳು ಕೆಲವಾರು ತಿಂಗಳ ಹಿಂದೆ ಮೈಸೂರಿನಲ್ಲಿ ಭಾಷಣ ಮಾಡುತ್ತ, ``ಲಿಂಗಾಯತ ಸ್ವಾಮಿಗಳು ಸಹ ಲಿಂಗಧಾರಣೆ ಮೂಲಕ ಮತಾಂತರ ಮಾಡುತ್ತಾರೆ.'' ಎಂಬ ಸಂಕುಚಿತ ಭಾವವನ್ನು ಪ್ರದರ್ಶಿಸಿದ್ದರು. ಭಾರತ ದೇಶದ ಉಳಿವಿಗಾಗಿಯೇ ಬಸವಣ್ಣನವರು ಬ್ರಾಹ್ಮಣ್ಯವನ್ನು ತೊರೆದು ಬಂದು, ಹೊಸ ಧರ್ಮವನ್ನು ಕೊಟ್ಟು ಎಲ್ಲ ಜಾತಿಗಳವರಿಗೆ ಧರ್ಮ ಸಂಸ್ಕಾರ ಕೊಟ್ಟುದು. ನಾಳೆ ಮತಾಂತರ ನಿಷೇಧ ಕಾನೂನು ಜಾರಿಗೆ ಬಂದರೆ ಪೇಜಾವರ ಶ್ರೀಗಳ ಅನುಯಾಯಿಗಳಾದ ಮನುವಾದಿಗಳು ಲಿಂಗಾಯತೇತರರಿಗೆ ಲಿಂಗದೀಕ್ಷೆ ಕೊಟ್ಟರೆ ಅದು ಶಿಕ್ಷಾರ್ಹ ಅಪರಾಧ ಎಂದು ಕೋರ್ಟಿಗೆ ಹೋಗಬಹುದು. ನಮ್ಮ ಮಠಾಧಿಪತಿಗಳಿಗೆ ಮುಂದಾಲೋಚನೆ ಬೇಡವೆ?

ಮನುಧರ್ಮ ಶಾಸ್ತ್ರದ ಕಾನೂನಿನಿಂದಲೇ ಧರ್ಮಪಿತ ಬಸವಣ್ಣನವರು ಗಡಿಪಾರು ಆದುದು. ಹರಳಯ್ಯ -ಮಧುವರಸ-ಶೀಲವಂತರ ಬಲಿದಾನವಾದುದು. ಕಲ್ಯಾಣ ಕ್ರಾಂತಿಯಾಗಿ ಅಸಂಖ್ಯಾತರು ಬಲಿದಾನಗೊಂಡು ಹುತಾತ್ಮರಾದುದು. ನಮ್ಮ ಮಠಾಧೀಶರಿಗೆ ಅದರಲ್ಲಿಯೂ ವಿರಕ್ತರಿಗೆ ಇದರ ಅರಿವು ಬೇಡವೆ? ಪೂಜ್ಯ ದಯಾನಂದ ಸ್ವಾಮಿಗಳು ಅನೇಕ ಸ್ವಾಮಿಗಳಿಗೆ ದೂರವಾಣಿ ಮಾಡಿ ವಿಷಯ ವಿವರಿಸಿದರು. ನೇತೃತ್ವ ವಹಿಸಬೇಕಿದ್ದ ಸ್ವಾಮಿಗಳು ಪ್ರದರ್ಶನ ಪಾದಯಾತ್ರೆಯಲ್ಲಿ ಭಾಗವಹಿಸಲಿಲ್ಲ. ಪೇಜಾವರ ಸ್ವಾಮಿಗಳ ಮುಂದಾಳತ್ವ, ವಿಭೂತಿಪುರ ಮಠದ ಸ್ವಾಮಿಗಳ ನಾಯಕತ್ವ. ಚಿಂತೆಯಿಲ್ಲ. ಏಕೆಂದರೆ ವೀರಶೈವ ಪಂಚಾಚಾರ್ಯರು ಯಾವ ರೀತಿಯಿಂದಲೂ ವೈದಿಕ ಧರ್ಮದಿಂದ ಭಿನ್ನರಲ್ಲ. ವೀರಶೈವವು ಹಿಂದುದೊಳಗಣ ಒಂದು ಪಂಥ ಎಂಬ ನಮ್ಮ ವಾದಕ್ಕೆ ಇನ್ನಷ್ಟು ಪುಷ್ಟಿ ಸಿಗುತ್ತದೆ. ಲಿಂಗಾಯತವು ಸ್ವತಂತ್ರ, ಪರಿಪೂರ್ಣ, ಅಹಿಂದು ಧರ್ಮವಾದ್ದರಿಂದ ಲಿಂಗಾಯತ ಮಠಾಧೀಶರು ಭಾಗವಹಿಸಿದ್ದರೆ ಅದು ಸೈದ್ಧಾಂತಿಕವಾಗಿ ತಪ್ಪು ಮಾಡಿದಂತೆ ಆಗುತ್ತಿತ್ತು.

ಪ್ರದರ್ಶನದ ನಂತರ ಪೇಜಾವರ ಶ್ರೀಗಳನ್ನು ಮಾಧ್ಯಮದವರು ಪ್ರಶ್ನಿಸಿದರು. ``ಬಹಳಷ್ಟು ದಲಿತರು ಬೌದ್ಧ ಧರ್ಮ ಸ್ವೀಕಾರ ಮಾಡುತ್ತಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?'' ಎಂದಾಗ ಅದೂ ಮತಾಂತರವೆ! ಅದೂ ಆಗಬಾರದು ಎಂದರು. ಪೇಜಾವರ ಶ್ರೀಗಳ ಅಂತರ್ಯದಲ್ಲಿ ಕಟಕಟ ಸದ್ದು ಮಾಡುತ್ತಿದ್ದ ಇಲಿ ಹೊರಬಿತ್ತು! ``ಹಿಂದೂ ದಲಿತರು ವಿದೇಶಿ ಧರ್ಮಗಳಿಗೆ ಮತಾಂತರಗೊಂಡರೆ ಭಾರತ ದೇಶಕ್ಕೆ ಒಬ್ಬ ಶತ್ರು ಹೆಚ್ಚಾಗುತ್ತಾನೆ.'' ಎಂದು ಸಂಘ ಪರಿವಾರದವರು ಹೇಳುವರಲ್ಲವೆ? ಜೈನ -ಬೌದ್ಧ, ಲಿಂಗಾಯತ - ಸಿಖ್ ಧರ್ಮ ಸ್ವೀಕಾರ ಮಾಡಿದರೆ ಅವರು ಎಂದೂ ಭಾರತ ವಿರೋಧಿಯಾಗರು. ಏಕೆಂದರೆ ಭಾರತ ಹಿಂದೂ ಸೇರಿದಂತೆ ಈ ಐದು ಧರ್ಮಗಳಿಗೆ ಧರ್ಮಭೂಮಿ. ಈ ನಾಲ್ಕು ಧರ್ಮಗಳು ಹುಟ್ಟಿದ್ದೇ ಸಮಾನತೆ ಸಾರಲಿಕ್ಕೆ. ಹಿಂದೂವಾದಿಗಳಿಗೆ ಶೂದ್ರರು ಶೂದ್ರರಾಗಿಯೇ ಇರಲಿ, ಅಸ್ಪೃಶ್ಯರು ಅದೇ ಸ್ಥಿತಿಯಲ್ಲೇ ಇರಲಿ ಎಂಬ ಆಶಯ ಇದ್ದಂತೆ ತೋರುತ್ತದೆ. ಇದು ನಿಜಕ್ಕೂ ಕ್ರೂರ ಆಶಯ! ಕ್ರೈಸ್ತರು, ಮುಸಲೀಮರು ಭಾರತೀಯ ಸಂಸ್ಕೃತಿಗೆ ಎರವಾಗುವರು, ಮತ್ತೆ ಪ್ರತ್ಯೇಕಗೊಳ್ಳುವರು ಎಂಬ ಹಿಂದೂವಾದಿಗಳ ಮಾತನ್ನು ನಂಬುವುದೇ ಆದರೆ ನಂಬೋಣ. ದಲಿತರು, ಶೂದ್ರರು ಭಾರತೀಯ ಜನ್ಯ ಧರ್ಮವನ್ನು ಸ್ವೀಕರಿಸಿದರೆ ಭಾರತೀಯ ಸಂಸ್ಕೃತಿಯಿಂದ ಹೊರ ಹೋಗುವುದಿಲ್ಲವಷ್ಟೆ. ಆದ್ದರಿಂದ ಸಂಘ ಪರಿವಾರದವರು ಧೈರ್ಯ ಮಾಡಿ ಶೂದ್ರ, ದಲಿತ, ಮಹಿಳೆ ಇವರಿಗೆ ಜನಿವಾರ ಕೊಟ್ಟು ಗಾಯತ್ರಿ ಮಂತ್ರ ಉಪದೇಶ ಮಾಡಲಿ. ಇಲ್ಲವೆ ಇತರ ಭಾರತೀಯ ಧರ್ಮಗಳಿಗೆ ಅವಕಾಶ ಕೊಡಲಿ. ಬೌದ್ಧ ಧರ್ಮವು ಬುದ್ಧನ ಮೂಲ ಆಶಯ ಬದಲಿಸಿ ಅನಿವಾರ್ಯತೆಗೆ ಸಿಕ್ಕಿ ಮಾಂಸಾಹಾರಕ್ಕೆ ಅವಕಾಶ ನೀಡಿದೆ. ಬಸವ ಧರ್ಮ ಶುದ್ಧ ಸಸ್ಯಾಹಾರಿ ಧರ್ಮ. ಆದ್ದರಿಂದ ದಲಿತರು ಮಾಂಸಾಹಾರ ಬಿಡಲಾರದವರು ಬೌದ್ಧ ಧರ್ಮ ಸ್ವೀಕರಿಸಲಿ; ಶುದ್ಧ ಸಸ್ಯಾಹಾರಿಗಳಾಗಿ ಸಾತ್ವಿಕ ಜೀವನ ವಿಧಾನ ಸ್ವೀಕರಿಸಿ ಉತ್ಥಾನ ಹೊಂದಬೇಕು ಎನ್ನುವವರು ಬಸವ ಧರ್ಮ ಸ್ವೀಕರಿಸಿ ಶರಣಾಗಲಿ; ನಾವು ಸ್ವಾಗತಿಸೋಣ. ಅಸ್ಪೃಶ್ಯತೆ ನಿರ್ಮೂಲನೆ ಮಾಡೋಣ. ಇದು ಪರಿಹಾರವೇ ವಿನಾ ಮತಾಂತರ ನಿಷೇಧ ಪರಿಹಾರವಲ್ಲ, ಸಮಸ್ಯೆ ಇನ್ನಷ್ಟು ವಿಕೋಪಕ್ಕೆ ಹೋಗಿ ಅಂತರ್ಯುದ್ಧಕ್ಕೆ ಕಾರಣವಾಗುವುದಕ್ಕೆ ಮತಾಂತರ ನಿಷೇಧ ಪ್ರಚೋದನೆ ನೀಡುತ್ತದೆ. ಅದನ್ನು ಒಕ್ಕೊರಲಿನಿಂದ ವಿರೋಧಿಸೋಣ.

ಮತಾಂತರದ ವ್ಯಾಖ್ಯೆ ಏನು?

ಒಮ್ಮೆ ಪೂಜ್ಯ ಪೇಜಾವರ ಶ್ರೀಗಳು ಮೈಸೂರಿನಲ್ಲಿ ಮಾತನಾಡುತ್ತ ಲಿಂಗಾಯತ ಸ್ವಾಮಿಗಳು ಮತಾಂತರ ಮಾಡುತ್ತಿದ್ದಾರೆ ಎಂದರು. ಅವರ ಚಿಂತನೆ ಎಷ್ಟು ಸಂಕುಚಿತ ಅನ್ನಿಸದೆ ಇರದು. ಅವರ ಅರ್ಥಾತ್ ವಿಶ್ವ ಹಿಂದು ಪರಿಷತ್ ವ್ಯಾಖ್ಯಾನದ ಪ್ರಕಾರ ಹಿಂದು ಸಮಾಜ ಒಂದು ಅವಿಭಕ್ತ ಕುಟುಂಬದಂತೆ. ಅದರಲ್ಲಿ ವೈದಿಕರು, ಶೈವರು, ಲಿಂಗಾಯತರು, ಜೈನರು, ಬೌದ್ಧರು, ಸಿಖ್ಖರು ಎಲ್ಲರೂ ಬರುವರು. ಅಣ್ಣ ತಮ್ಮಂದಿರೆಲ್ಲ ಕೂಡಿಯೇ ಒಂದು ಭವ್ಯ ನಿವಾಸದಲ್ಲಿರುವರು. ಒಲೆ ಬೇರೆ ಬೇರೆ ಹೂಡಿ ಅಡಿಗೆ ಮಾಡಿಕೊಳ್ಳುವರು ಎಂದುಕೊಳ್ಳೋಣ. ಆಗ ಯಾರೊಬ್ಬರು ಇನ್ನೊಬ್ಬರ ಅಡಿಗೆಯ ಮನೆಯೊಳಗೆ ಉಂಡರೂ ಸ್ವಂತ ಮನೆಯಲ್ಲೇ ಉಂಡಂತೆ. ಅಂದಾಗ ಯಾರಾದರೂ ಹಿಂದುವು ಲಿಂಗಾಯತ ದೀಕ್ಷೆ ಪಡೆದರೆ ಪೇಜಾವರ ಶ್ರೀಗಳ ದೃಷ್ಟಿಯಲ್ಲಿ ಸ್ವಗೃಹ ಭೋಜನವಾಗಬೇಕೇ ವಿನಾ ಮತಾಂತರ ಆಗಬಾರದು.

ಮತ ಎಂದರೆ ವಿಶಿಷ್ಟ ನಂಬಿಕೆ. ಅಂತರ ಎಂದರೆ ಬದಲಾಯಿಸಿಕೊಳ್ಳುವುದು. ಒಂದು ವೇಳೆ ಯಾವುದಾದರೊಂದು ದೀಕ್ಷೆ ಹೊಂದಿದ್ದರೆ ಅವನು ಅದನ್ನು ಬಿಟ್ಟು ಬೇರೆಯೊಂದನ್ನು ಸ್ವೀಕರಿಸಿದರೆ ಅದನ್ನು ಮತಾಂತರ ಎಂದುಕೊಳ್ಳಬಹುದು. ಮನುಸಿದ್ಧಾಂತ ಆಧಾರಿತ ಸಾಮಾಜಿಕ ವ್ಯವಸ್ಥೆ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಉಪನಯನ ಉಂಟು, ಗಾಯತ್ರಿ ಮಂತ್ರೋಪದೇಶ ಉಂಟು, ಜನಿವಾರ ಉಂಟು ಮಿಕ್ಕಿದಂತೆ ಶೂದ್ರ, ಅಸ್ಪೃಶ್ಯ ಮತ್ತು ಮಹಿಳೆ - ಈ ಮೂವರಿಗೆ ದೀಕ್ಷಾ ಸಂಸ್ಕಾರ ಯಜ್ಞೋಪವೀತ ಧಾರಣೆಯೇ ಇಲ್ಲ ಎಂದರೆ ಅವರು ಯಾವೊಂದು ಮತದ ಅನುಯಾಯಿಗಳಲ್ಲ; ಅವರು ಲಿಂಗಾಯತ ಧರ್ಮ (ಅಥವಾ ಬೇರೆ ಯಾವುದೇ) ಸ್ವೀಕರಿಸಿದರೆ ಅದು ಮತಾಂತರವೇ ಆಗದು.

ಶ್ರೀ ಯಡೆಯೂರಪ್ಪ/ ಚಿದಾನಂದ ಮೂರ್ತಿ ಮತಾಂತರಿಗಳಲ್ಲವೆ?

ಹಿಂದುಗಳನ್ನು ಅನ್ಯರು ಮತಾಂತರ ಮಾಡುತ್ತಾರೆಂದು ಕೆಲವರು ವಾದ ಮಾಡುತ್ತಾರೆ. ಸೂಕ್ಷ್ಮವಾಗಿ ವಿಚಾರಮಾಡಿದರೆ ವೈದಿಕ ಪುರೋಹಿತರು ಎಲ್ಲರಿಗಿಂತ ಹೆಚ್ಚಾಗಿ ಮತಾಂತರ ಮಾಡುತ್ತಾರೆ ಎನ್ನಿಸದೆ ಇರದು. ಡಾ|| ಚಿದಾನಂದ ಮೂರ್ತಿ ಹುಟ್ಟಿನಿಂದ ಲಿಂಗಾಯತರು. ಅವರ ವಾದದ ಪ್ರಕಾರ ಧರ್ಮವು ಹುಟ್ಟಿನಿಂದ ಬರುತ್ತದೆ ಮತ್ತು ಸ್ವಧರ್ಮೇ ನಿಧನೇ ಶ್ರೇಯಃ ಪರಧರ್ಮೋ ಭಯಾವಹ. ಇಷ್ಟಲಿಂಗ ಧಾರಣೆ ತೊರೆಯುವುದು ಸ್ವಧರ್ಮವನ್ನು ಬಿಟ್ಟಂತೆ. ಅವರು ಇಷ್ಟಲಿಂಗಧಾರಣೆ ತೊರೆದು ಒಂದೋ ನಾಸ್ತಿಕರಾಗಿರಬಹುದು ಇಲ್ಲವೇ ಅವಧೂತ ಮಾರ್ಗ ಹಿಡಿದಿರಬಹುದು ಅಂದಾಗ ಇದು ಮತಾಂತರವೇ ಸರಿ. ಅದೇ ರೀತಿ ಶ್ರೀ.ಬಿ.ಎಸ್.ಯಡೆಯೂರಪ್ಪನವರು. ಆಕಸ್ಮಿಕವಾಗಿ ಲಿಂಗಾಯತ ಸಮಾಜದಲ್ಲಿ ಹುಟ್ಟಿರಬಹುದು.ಮಕ್ಕಳು ಮರಿಗಳಿಗೆ ಲಿಂಗಾಯತರ ಮನೆಗಳಲ್ಲಿ ಹೆಣ್ಣ ಗಂಡಿನ ವ್ಯವಹಾರ ಮಾಡಿರಬಹುದು. ಆದರೆ ಇಂದು ಅವರ ಆಚಾರ -ವಿಚಾರ ಎಲ್ಲವೂ ವೈದಿಕೀಕರಣ ಗೊಂಡಿವೆ. ಕೂತರೂ ನಿಂತರೂ ಜೋತಿಷ್ಯ, ಸತ್ಯ ನಾರಾಯಣ ಪೂಜೆ, ಹೋಮ ಹವನ ಪೂರ್ಣಾಹುತಿ, ಕುರ್ಚಿಪೂಜೆ - ಇಂಥದರಲ್ಲೇ ಕಾಲ ಕಳೆಯುತ್ತಿದ್ದಾರೆ. ಇದೆಲ್ಲವೂ ಲಿಂಗಾಯತ ಧರ್ಮ ಸಂಹಿತೆಯಾದ ವಚನ ಸಾಹಿತ್ಯ ವಿಧಿಸಿರುವ ನಿಯಮಗಳಿಗೆ ವಿರುದ್ಧವಾದುದು. ಮುಖ್ಯ ಮಂತ್ರಿಗಳಾಗುವ ಮೊದಲು ಹಣೆಯ ಮೇಲೆ ವಿಭೂತಿ ಕಾಣಬರುತ್ತಿತ್ತು; ಈಗ ಅದು ಮಾಯವಾಗಿ ಬರೀ ಕುಂಕುಮವಷ್ಟೆ ಕಾಣಬರುತ್ತದೆ. ಬಿ.ಜೆ.ಪಿ ಮತ್ತು ಸಂಘ ಪರಿವಾರದವರು ಇತರರ ಧರ್ಮ ಬಿಡಿಸುವುದೂ ಮತಾಂತರವಲ್ಲವೆ? ಅದನ್ನು ಅವರು ಸಹ ನಿಲ್ಲಿಸಿ, ರಾಜಕೀಯವಾಗಿ ವ್ಯಕ್ತಿಗಳು ಯಾವುದೇ ಪಕ್ಷದಲ್ಲಿರಲಿ ಅವರ ಧರ್ಮಗಳನ್ನು ಪಾಲಿಸಲು ಅವಕಾಶ ನೀಡುವುದೇ ಸೂಕ್ತವಲ್ಲವೆ?

ಮತಾಂತರ ಅನ್ಯ ಧರ್ಮಕ್ಕೆ ಮಾಡುವ ಅವಮಾನವೆ?

ಸಿರಿಗೆರೆ ಶ್ರೀಗಳು ಮೇಲ್ಕಂಡ ಶೀರ್ಷಿಕೆಯಡಿಯಲ್ಲಿ ಒಂದು ಲೇಖನ (ದಿ.22-10-08)ವನ್ನು ವಿಜಯ ಕರ್ನಾಟಕದಲ್ಲಿ ಬರೆದಿದ್ದಾರೆ. ಅವರದು ಎಷ್ಟು ಬಾಲಿಶ ವಿಚಾರ! ಲಿಂಗಾಯತ ಧರ್ಮದ ಮರ್ಮವೇ ಇವರಿಗೆ ಅರ್ಥವಾಗಿಲ್ಲ. ಮತಾಂತರ ಅನ್ಯ ಧರ್ಮಕ್ಕೆ ಮಾಡುವ ಅವಮಾನವಂತೆ! ಮಾರ್ಕೆಟ್ಟಿನಲ್ಲಿ ಹಲವಾರು ವಸ್ತುಗಳು ಚಲಾವಣೆಯಲ್ಲಿರುತ್ತವೆ. ಉದಾ: ಮೈಸೋಪು. ನಮ್ಮ ಸೋಪಿನಿಂದ ಮೈಕಾಂತಿ ವೃದ್ಧಿಯಾಗುತ್ತದೆ; ಮೈಕಾಂತಿಯನ್ನು ವೃದ್ಧಿ ಮಾಡುವ ಏಕೈಕ ಸೋಪು ನಮ್ಮದು ಎಂದು ಪ್ರಚಾರ ಮಾಡಲಾಗುತ್ತದೆ. ಅಂದ ಮಾತ್ರಕ್ಕೆ ಉಳಿದ ಸೋಪುಗಳಿಗೆ ಅವಮಾನ

ಮಾಡಿದಂತಾ -ಗುವುದೆ? ತಮ್ಮ ತಮ್ಮ ತಯಾರಿಕೆಯ ವಸ್ತುಗಳನ್ನು ಪೈಪೋಟಿಯ ಮೇಲೆ ಕಂಪನಿಗಳವರು ಪ್ರಚಾರ ಮಾಡುವರು. ಅದನ್ನು ತಪ್ಪೆನ್ನಲಾಗದು. ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಜನತೆಗೆ ಇರುವುದು. ಕ್ರೈಸ್ತ ಪಾದ್ರಿಗಳು ಬಹುಬಗೆಯ ತಂತ್ರ ಬಳಸಿ ತಮ್ಮ ಧರ್ಮದ ಪ್ರಚಾರ ಮಾಡುವರು.ಅವರಿಗೆ ವಿದೇಶದಿಂದ ಬರುವ ಹಣವೂ ದೊಡ್ಡ ಶಕ್ತಿಯಾಗಿರುವುದು. ಮುಸಲೀಮರು ಸಂಘಟನೆಯ ಮೂಲಕ, ಸಂತಾನೋತ್ಪತ್ತಿ ಹೆಚ್ಚು ಮಾಡುವ ಮೂಲಕ ತಮ್ಮ ಸಂಖ್ಯೆ ಬೆಳೆಸುತ್ತಿರುವರು. ಅವರ ಮುಂದೆ ಸ್ಪರ್ಧಿಸಲಾರದೆ ಉಳಿದ ಭಾರತೀಯ ಧರ್ಮಗಳು ದುರ್ಬಲವಾಗಿ ಕಾಣುತ್ತಿವೆ.

ತೌಲನಿಕ ಅಧ್ಯಯನ ಒಂದು ಆರೋಗ್ಯಕರ ಪ್ರಕ್ರಿಯೆ. ಅದರಿಂದ ಇನ್ನಿತರ ಧರ್ಮಗಳ ಒಳ್ಳಿತನ್ನು ಗ್ರಹಿಸುವ ಸಾಮರ್ಥ್ಯ, ಸದ್ಭಾವ ಬೆಳೆಯುತ್ತದೆ. ಮುಸಲೀಮರಲ್ಲಿ (ಎಲ್ಲರೊಡನೆ ಬೆರೆತು ಬೆಳೆಯುವವರನ್ನು ಹೊರತು ಪಡಿಸಿ) ಪ್ರತ್ಯೇಕ ಶಾಲೆಯಲ್ಲಿ ಓದಿ, ಮದರಸಾದಲ್ಲಿ ತರಬೇತಿ ಹೊಂದುವುದರಿಂದ ಅವರ ಧರ್ಮ ಮಾತ್ರ ಶ್ರೇಷ್ಠ ಎಂಬ ಸಂಕುಚಿತ ತಿಳುವಳಿಕೆ ಬೆಳೆಯುತ್ತದೆ. ಕ್ರೈಸ್ತರಿಗೆ ಅವರ ಧರ್ಮವನ್ನು ಮಾತ್ರ ಶ್ರೇಷ್ಠವೆಂದು ಕಲಿಸುವ ಕಾರಣ ಆ ಧರ್ಮದ ಬಗ್ಗೆ ಮಾತ್ರ ತಿಳುವಳಿಕೆ ಜೊತೆಗೆ ಹಮ್ಮು ಸಹ ಬೆಳೆಯುತ್ತದೆ. ಎಲ್ಲ ಧರ್ಮಗಳ ತೌಲನಿಕ ಅಧ್ಯಯನ ಮಾಡಿದಾಗ ಇತರ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳು ಗೋಚರವಾಗುತ್ತವೆ.

ಸರ್ವಧರ್ಮೀಯರನ್ನು ಸಮಾನವಾಗಿ ಕಾಣಬಹುದಾದರೂ ಸರ್ವಧರ್ಮಗಳೂ ಸಮಾನ ಎಂದು ಹೇಳಲಾಗದು. ನೀನೂ ಜೀವಿಸು, ಇತರ ಜೀವರನ್ನೂ ಜೀವಿಸಲು ಬಿಡು; ನಿನ್ನ ನಾಲಿಗೆಯ ತೃಪ್ತಿಗಾಗಿ ಅನ್ಯ ಜೀವವನ್ನು ಬಲಿಗೊಡಬೇಡ. ಯಾರಿಗೆ ಜೀವವನ್ನು ಸೃಷ್ಟಿಸುವ ಶಕ್ತಿ ಇಲ್ಲವೋ ಅವರಿಗೆ ಇನ್ನಿತರ ಜೀವವನ್ನು ಅಂತ್ಯಗೊಳಿಸಲು ಹಕ್ಕಿಲ್ಲ. ಅಹಿಂಸೆಯೇ ಪರಮ ಧರ್ಮ, ದಯವೇ ಧರ್ಮದ ಮೂಲ; ದಯವಿರಬೇಕು ಸಕಲ ಪ್ರಾಣಿಗಳಲ್ಲಿ ಎನ್ನುವ ಶುದ್ಧ ಅಹಿಂಸಾವಾದಿ ಧರ್ಮವು ತನ್ನ ನಾಲಿಗೆಯ ಚಪಲಕ್ಕಾಗಿ ಉಳಿದ ಜೀವವನ್ನು ಹತ್ಯೆ ಗೈಯುವ ಧರ್ಮಕ್ಕೆ ಸಮನಾಗಲಾರದು. ಅಮಾನವೀಯವಾದ ಜಾತೀಯತೆ, ಅಸ್ಪೃಶ್ಯತೆಯಿಂದ ವಿಜೃಂಭಿಸುವ ಧರ್ಮ ಸಮಾನತೆ ಬೋಧಿಸುವ ಧರ್ಮಕ್ಕೆ ಸಮನಾಗಲಾರದು. ಗಿಡಮರ, ಪಶುಪಕ್ಷಿ, ಭೂತಪ್ರೇತ, ಕಾಕುಪೋಕು ದೇವರುಗಳನ್ನು ಪೂಜಿಸುವ ಧರ್ಮ ನಿರಾಕಾರನೂ ನಿರ್ಗುಣನೂ ಸಚ್ಚಿದಾನಂದ ನಿತ್ಯ ಪರಿಪೂರ್ಣನೂ ಆದ ದೇವರ ಪರಿಕಲ್ಪನೆಯ ಧರ್ಮಕ್ಕೆ ಸಮನಾಗಲಾರದು. ಆದ್ದರಿಂದ ದೋಷಗಳನ್ನು ಎತ್ತಿ ತೋರಿಸಿದಾಗ ತಿದ್ದಿಕೊಳ್ಳುವ ಪ್ರಯತ್ನ ಮಾಡಬೇಕೇ ವಿನಾ ಅದು ಅವಮಾನ ಎಂದು ಭಾವಿಸಬಾರದು. ಈ ಧೋರಣೆಯಿಂದಲೇ ಹಿಂದು ಧರ್ಮ ಸುಧಾರಣೆ ಕಾಣದಂತೆ ಜಡಗಟ್ಟಿ, ಮಡುಗಟ್ಟಿ ಕೊಳೆತು ನಾರುತ್ತಿರುವುದು. ಹಿಂದು ಧರ್ಮದ ಪ್ರಮುಖ ದೋಷಗಳೆಂದರೆ ಜಾತೀಯತೆ -ಅದರ ಕಹಿಫಲವಾದ ಅಸ್ಪೃಶ್ಯತೆ, ಬಹುದೇವತೋಪಾಸನೆ, ಮೂಢ ನಂಬಿಕೆ. ಬುದ್ಧ- ಮಹಾವೀರರು ಹಿಂದು ಸಾಮಾಜಿಕ ವ್ಯವಸ್ಥೆಯಿಂದ ಹೊರಹೋದರು. ಆಗಲೂ ಸಾಂಪ್ರದಾಯಿಕ ಸವರ್ಣೀಯ ಸಮಾಜವು ಅಂತರವಲೋಕನ ಮಾಡಿಕೊಂಡು ಸುಧಾರಣೆ ತಂದುಕೊಳ್ಳಲಿಲ್ಲ. ನಂತರ ಸ್ವತಃ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣನವರು ಹೊರಬಂದು ಲಿಂಗಾಯತ ಎಂಬ ಹೊಸಧರ್ಮವನ್ನು ಸ್ಥಾಪಿಸಿದರು. ಆಗಲೂ ಸವರ್ಣೀಯರು ಅರ್ಥಮಾಡಿಕೊಳ್ಳಲಿಲ್ಲ. ನಂತರ ಗುರುನಾನಕರು ಸಿಖ್ ಧರ್ಮಕೊಟ್ಟರು. ಆಗಲೂ ಅರ್ಥಮಾಡಿಕೊಳ್ಳದೆ ಇಂದಿಗೂ ತಮ್ಮ ಹಳೆಯ ವಾದವನ್ನೇ ಭೈರಪ್ಪ, ಚಿದಾನಂದ ಮೂರ್ತಿ ಮುಂತಾದವರು ಪ್ರತಿಪಾದಿಸುತ್ತಾರೆ. ಈ ಜಿಗುಟುತನವು ಒಂದು ದೃಷ್ಟಿಯಿಂದ ಹಿಂದು ಧರ್ಮ ಉಳಿಯಲು ಅಪ್ರತ್ಯಕ್ಷವಾಗಿ ಕಾರಣೀಭೂತವಾಗುವುದಾದರೂ, ತನ್ನ ಆಂತರಿಕ ದೌರ್ಬಲ್ಯದಿಂದ ನಿಧಾನವಾಗಿ ಕ್ಷೀಣವಾಗಲು ಕಾರಣಕರ್ತೃವಾಗುತ್ತಿದೆ.

ಇಂದಿನ ವಿಜಯ ಕರ್ನಾಟಕ (27-10-08)ದಲ್ಲಿ ಸಚ್ಚಿದಾನಂದ ಹೆಗಡೆ, ಛತ್ತ ಗುತ್ತಿಗೆ ಎಂಬುವವರು ಒಂದು ಲೇಖನ ಬರೆದು ಎರಡು ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾರೆ.

1. ಮತಾಂತರಕ್ಕೆ ಅಸ್ಪೃಶ್ಯತೆಯೊಂದೇ ಕಾರಣವಲ್ಲ. ಗಿರಿಜನರು (ವನವಾಸಿಗಳು) ಸವರ್ಣೀಯರಿಗೆ ಅಸ್ಪೃಶ್ಯರಲ್ಲ. ಕ್ರೈಸ್ತ ಮಿಶನರಿಗಳು ಗಿರಿಜನರನ್ನು ಮತಾಂತರಿಸುತ್ತಾರೆ.

2. ಕ್ರೈಸ್ತ ಪಾದ್ರಿಗಳಿಗೆ ಆಧ್ಯಾತ್ಮಿಕ ಗುರಿಯಿಲ್ಲ. ಮತಾಂತರ ಮಾಡಿ ಕ್ರೈಸ್ತರ ಸಂಖ್ಯೆ ಬೆಳಸಿ ಕಾಲಾನಂತರದಲ್ಲಿ ರಾಜಕೀಯ ಅಧಿಕಾರ ಹಿಡಿಯುವ ಗುರಿ ಇದೆ. ಹೆಗಡೆಯವರು ಗಿರಿಜನರ ಒಡನಾಟದಲ್ಲಿ ಇರುವುದಾಗಿ ಹೇಳುತ್ತಾರೆ. ಹಾಗಾದರೆ ಇವರು ಗಿರಿಜನರ ಅಥವಾ ಹರಿಜನರ ಒಡನಾಟದಲ್ಲಿರುವ ಸೇವಾಕರ್ತರು. ಆ ಜನರಿಗೆ ಒಂದು ಮಂತ್ರೋಪದೇಶದ ವ್ಯವಸ್ಥೆ ಏಕೆ

ಮಾಡಬಾರದು? ಅಥವಾ ಆರ್ಯ ಸಮಾಜದ ಸ್ವಾಮಿಗಳನ್ನು ಕರೆದೊಯ್ದು (ಪೇಜಾವರ ಶ್ರೀಗಳು ಶೂದ್ರ -ಅಸ್ಪೃಶ್ಯರಿಗೆ ಜನಿವಾರ ದೀಕ್ಷೆ ಕೊಡುವ ಮನಸ್ಸು ಮಾಡದ್ದರಿಂದ) ಉಪನಯನ ಏಕೆ ಮಾಡಿಸಬಾರದು?

ಮೊದಮೊದಲು ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕೊಡುವ ಆರ್ಥಿಕ ನೆರವನ್ನು ಪಡೆದು ಹರಿಜನರು, ಗಿರಿಜನರು ಸಮಾಧಾನ ಹೊಂದಬಹುದಾದರೂ ಶಿಕ್ಷಣವು ಅರಿವನ್ನು ಕೊಟ್ಟ ಮೇಲೆ ತಾವು ಧರ್ಮ ಸಂಸ್ಕಾರ ಮತ್ತು ಧಾರ್ಮಿಕ ಸಾಂಗತ್ಯದಿಂದ ವಂಚಿತರಾಗಿರುವ ಖಿನ್ನ ಭಾವ ಮೂಡಿ ಡಾ|| ಅಂಬೇಡ್ಕರರು ಹೊಂದಿದಂತೆ ಮತಾಂತರ ಹೊಂದಲು ಕಾತರಿಸುವರು. ಸಿರಿಗೆರೆ ಸ್ವಾಮಿಗಳು ಜಗತ್ತನ್ನು ಸುತ್ತಿ ಬಂದರೂ ಇನ್ನೂ ಹಿಂದೂದ, ವೀರಶೈವ ಕೂಪ ಮಂಡೂಕ ಪ್ರವೃತ್ತಿಯನ್ನೇ ಬಿಡದುದು ಆಶ್ಚರ್ಯ. ಧರ್ಮವೂ ಅನ್ನಾಹಾರದಂತೆ ಒಂದು ಅಗತ್ಯ ಎಂಬ ತಿಳುವಳಿಕೆ ಬೆಳೆಸಿಕೊಂಡು ಹಿಂದುವಾದಿಗಳು, ಹಿಂದುಯೇತರರನ್ನು ಹಿಂದುವನ್ನಾಗಿ ಮಾಡಲು ಒಂದು ದೀಕ್ಷೆ ಕಂಡು ಹಿಡಿಯುವುದು ಒಳ್ಳೆಯದು. ಇದರಿಂದ ಕ್ರೈಸ್ತ ಮುಸಲ್ಮಾನರನ್ನು ಪರಿವರ್ತಿಸದಿದ್ದರಷ್ಟೆ ಹಿಂದುಗಳನ್ನಾದರೂ ತೌರುಮನೆ ತೊರೆಯದಂತೆ ಸಂರಕ್ಷಿಸಿಕೊಳ್ಳಬಹುದು.

ಇಂದು ಲಿಂಗಾಯತರ ಅಜ್ಞಾನವೂ ಮೇರೆ ಮೀರಿದೆ. ವಚನ ಸಾಹಿತ್ಯ ಓದಿದ ಬಸವ ಪಥಿಕರನ್ನು ಬಿಟ್ಟರೆ ಬಾಕಿ ಲಿಂಗಾಯತರು ಜಾತಿ ಪ್ರಜ್ಞೆ, ಕುಲ ಪ್ರಜ್ಞೆಯಿಂದ ಅಸ್ಪೃಶ್ಯತೆ ಆಚರಿಸುವ ಅಪರಾಧ ಮಾಡುತ್ತಾರೆ. ಲಿಂಗಾಯತರು ಸಿಖ್ಖರಂತೆ ಜಾಗೃತ ಸಮೂಹವಾಗಿದ್ದಿದ್ದರೆ ವಿದೇಶಿ ಧರ್ಮಗಳಿಗೆ ಆಗುವ ಮತಾಂತರ ತಡೆಗಟ್ಟುವಲ್ಲಿ ಸಾಕಷ್ಟು ಶ್ರಮಿಸಬಹುದಿತ್ತು.

ಇನ್ನು ಸಚ್ಚಿದಾನಂದ ಹೆಗಡೆಯವರ ಅಧ್ಯಾತ್ಮಿಕ ಗುರಿ. ಇಂದು ಅಧ್ಯಾತ್ಮವು ಹೊಟ್ಟೆ ತುಂಬಿದವರ ವಿಶೇಷ ಗುರಿಯಾಗಿದೆ. ಬದುಕಿನ ಕನಿಷ್ಠ ಅಗತ್ಯಗಳಿಗಾಗಿ ಹೋರಾಡುತ್ತಿರುವ ಜನರಿಗೆ ಅಧ್ಯಾತ್ಮ ಚಿಂತನೆಗೆ ಅವಕಾಶವೆಲ್ಲಿದೆ? ಈ ಸಂಕಷ್ಟಗಳಿಗೆ ಮತ್ತಷ್ಟು ಪೇರಿಸುವಂತೆ ಜಾತೀಯತೆ, ಅಸ್ಪೃಶ್ಯತೆಯಿಂದ ನಲುಗುತ್ತಿರುವವರಿಗೆ ಅಧ್ಯಾತ್ಮ ಚಿಂತನೆ ಸಾಧ್ಯವೆ? ನಿನ್ನೆ ಬಂದಿರುವ ಸುದ್ದಿ. ಓರ್ವ ದಲಿತ ಮಹಿಳೆ ಗ್ರಾಮ ಪಂಚಾಯಿತಿ ಪೈಪಿನ ಸವರ್ಣೀಯರ ಕೇರಿಯ ನಲ್ಲಿಯಿಂದ ನೀರು ತುಂಬಿಕೊಂಡಿದ್ದಕ್ಕಾಗಿ ಐವರು ಮೇಲ್ಜಾತಿಯ ಮಹಿಳೆಯರು ಜಗಳ ತೆಗೆದುದೇ ಅಲ್ಲದೆ ಗ್ರಾಮ ಪಂಚಾಯತಿಯವರಿಗೆ ಹೇಳಿ 101ರೂಗಳ ದಂಡ ಹಾಕಿಸಿದರಂತೆ. ಇದರಿಂದ ನೊಂದ ದಲಿತ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಹೀಗೆ ಬದುಕಲೂ ಬಿಡದೆ ಮತಾಂತರಗೊಂಡು ಹೊರಹೋಗಲೂ ಬಿಡದೆ ಹಿಂಸಿಸುವ ಅಮಾನವೀಯತೆ ಸರಿಯೆ? ಇಂಥ ಸನ್ನಿವೇಶದಲ್ಲಿ ತುತ್ತು ಅನ್ನ, ಗುಟುಕು ನೀರಿಗೂ ಪರದಾಡುವವರಿಗೆ ಅಧ್ಯಾತ್ಮ ವಿದ್ಯೆ ರುಚಿಸುವುದೇ ಮತ್ತು ಲಭ್ಯವೆ? ಹಿಂದು ಗುರುಗಳು ಸಿರಿವಂತರ ಸೊತ್ತು. ಕನಿಷ್ಠ ಐದು ಸಾವಿರ ರೂ ಕಾಣಿಕೆ ಕೊಡದೆ ತಮ್ಮ ಜಾತಿಯವರ ಮನೆಗೇ ಹೋಗದ ಗುರುಗಳು ದೀನದಲಿತರ ಮನೆಗೆ ಹೋಗುವುದುಂಟೆ? ಅಂಥವರ ಬಳಿಗೆ ಹೋಗಿ ಕ್ರೈಸ್ತರು ಪ್ರಾರ್ಥನೆಗೆ ಬರುವಂತೆ ಚರ್ಚಿಗೆ ಆಹ್ವಾನಿಸುತ್ತಾರೆ. ಮನುಷ್ಯನಿಗೆ ಎಲ್ಲಕ್ಕಿಂತ ಮುಖ್ಯವಾದ್ದು ಹೊಟ್ಟೆ, ಬಟ್ಟೆ ಆತ್ಮಗೌರವ. ಅದು ಸಿಕ್ಕಾಗ ಸುಲಭವಾಗಿ ಮತಾಂತರ ಹೊಂದುತ್ತಾನೆ. ನಾನು ಇದನ್ನು ಬೆಂಬಲಿಸುತ್ತೇನೆಂದು ಯಾರೂ ಭಾವಿಸಬಾರದು. ಕಟು ಸತ್ಯವನ್ನು ತೆರೆದಿಡುತ್ತ ಭಾರತೀಯ ಧರ್ಮಗಳವರು ಸಹ ತಾವು ಶ್ರಮಿಸಿ ಮಾತೃ ಸಂಸ್ಕೃತಿಯಿಂದ ಜನರು ಹೊರಹೋಗದಂತೆ ನೋಡಿಕೊಳ್ಳುವ ಪ್ರೇರಣೆ ಹೊಂದಲೆಂದು ಬರೆಯುತ್ತಿದ್ದೇನೆ. ಇದೇ ಉದ್ದೇಶದಿಂದ ಭಾರತೀಯ ಧರ್ಮಗಳ ಮಹಾಸಂಘವನ್ನು ದೆಹಲಿಯಲ್ಲಿ ಸ್ಥಾಪಿಸಿದ್ದೇವೆ. ಆದಿವಾಸಿಗಳು, ಬುಡಕಟ್ಟು ಜನರಿಗೆ ಯಾವುದೇ ಧರ್ಮವಿಲ್ಲದೆ ಗಿಡಮರ ಇತ್ಯಾದಿ ಪೂಜಿಸುತ್ತಾರೆ. ಅದನ್ನು ಖಂಡಿಸುತ್ತ ಕ್ರೈಸ್ತರು, ಮುಸಲೀಮರು ಏಕದೇವ ವಿಶ್ವಾಸ ಕುರಿತು ಹೇಳಿ ಅಜ್ಞಾನವನ್ನು ಬಯಲು ಮಾಡಿದಾಗ ಅವರು ಸುಲಭವಾಗಿ ಮತಾಂತರ ಹೊಂದುತ್ತಾರೆ.

ಆಮಿಷ ಒಡ್ಡಬಾರದು, ಬಲವಂತದ ಮತಾಂತರ ಮಾಡಬಾರದು ಎಂಬ ನಿಯಮ ಹಾಕಬಹುದು. ಆಮಿಷ ಎಂದರೇನು? ಹಸಿದವನಿಗೆ ಆಹಾರ ಪದಾರ್ಥ ಕೊಟ್ಟರೆ ಆಮಿಷವೆ? ಚಳಿಯಿಂದ ನಡುಗುವವನಿಗೆ ರಗ್ಗು, ಕಾಯಿಲೆಯಿಂದ ಬಳಲುವವನಿಗೆ ಔಷಧಿ ಕೊಟ್ಟರೆ ಆಮಿಷವೆ? ಇದನ್ನೆಲ್ಲ ಮಾಡಬೇಕು. ಆದರೆ ಕ್ರೈಸ್ತ ದೀಕ್ಷೆ ಕೊಡಬಾರದು ಎಂದು ಹಿಂದೂವಾದಿಗಳ ವಾದ. ಇವನ್ನೆಲ್ಲ ಮಾಡುತ್ತ ಹೋದಾಗ ಉಪಕೃತರಾದವರು ಸ್ವಯಂ ಪ್ರೇರಣೆಯಿಂದ ಮತಾಂತರ ಹೊಂದುತ್ತಾರೆ. ಜೊತೆಗೆ ಅವರಿಗೆ ತರಬೇತಿ ಸಹ ಸಿಗುತ್ತದೆ. ನಂತರ ಯಾರಾದರೂ ತನಿಖೆ ಮಾಡಿದರೆ ಸ್ವಯಂ ಪ್ರೇರಣೆಯಿಂದ ಆದುದೆಂದು ಹೇಳಿಕೆ ನೀಡುತ್ತಾರೆ. ಧಾರವಾಡದಲ್ಲಿ ಒಬ್ಬ

ಹುಡುಗ ಕ್ರೈಸ್ತ ಹುಡುಗಿಯನ್ನು ಪ್ರೀತಿಸಿದ್ದ. ಅವನು ಲಿಂಗಾಯತರವನು. ಅವನು ಆಕೆಗೆ ದೀಕ್ಷೆ ನೀಡಿಸಲಿಲ್ಲ. ತಾನೇ ಕ್ರೈಸ್ತನಾದ ಮಾತ್ರವಲ್ಲ ಆಕೆ ತನ್ನ ಅತ್ತೆಯನ್ನು ಸಹ ಮತಾಂತರಿಸಿದಳು. ಅಂದರೆ ಪಾದ್ರಿಗಳಿಗೆ ಮಾತ್ರವಲ್ಲ ಸಾಮಾನ್ಯ ಕ್ರೈಸ್ತರು, ಮುಸಲೀಮರಿಗೆ ಸಹ ಅವರ ಧರ್ಮದ ತರಬೇತಿ ಅಷ್ಟು ಚೆನ್ನಾಗಿ ಆಗಿರುತ್ತದೆ. ಅದೇ ಸಿರಿಗೆರೆ ಸ್ವಾಮಿಗಳಂತಹ ದೊಡ್ಡವರಿಗೆ ತನ್ನ ಧರ್ಮ ಯಾವ ಉದ್ದೇಶಕ್ಕಾಗಿ ಹುಟ್ಟಿತು ಎಂಬ ಸಾಮಾನ್ಯ ಜ್ಞಾನವೂ ಇಲ್ಲ.

ಧರ್ಮದ ಅಗತ್ಯ ಕಾಣಿಸಿದ ವ್ಯಕ್ತಿ ಆರ್ಯ ಸಮಾಜದವರ ಮೂಲಕ ಹಿಂದು ಆಗಬಹುದು ಇಲ್ಲವೇ ಲಿಂಗಾಯತ, ಜೈನ್, ಬೌದ್ಧ, ಸಿಖ್ ಧರ್ಮ ಸ್ವೀಕರಿಸಬಹುದು. ಭಾರತೀಯ ಜನ್ಯ ಧರ್ಮ ಸ್ವೀಕಾರದಿಂದ ವ್ಯಕ್ತಿ ಭಾರತೀಯ ಅಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆಗೆ ಹೊರತಾಗನು. ವಿದೇಶೀ ಧರ್ಮ ಸ್ವೀಕಾರದಿಂದ ಕರುಳ ಬಳ್ಳಿಯನ್ನೇ ಕತ್ತರಿಸಿಕೊಂಡು ಹೊರಹೋಗುವನು. ಭಾರತೀಯ ಧರ್ಮವನ್ನು ಸ್ವೀಕಾರ ಮಾಡಿದರೆ ತನಗೆ ಬೇಡವೆನಿಸಿದರೆ ಪೂರ್ವದ ಜಾತಿಗೇ ಮರಳಬಹುದು. ಆದರೆ ವಿದೇಶೀ ಧರ್ಮ ಸ್ವೀಕಾರ ಮಾಡಿದ ನಂತರ ಪೂರ್ತಿಯಾಗಿ ಹೊರಹೋದಂತೆ. ವಾಪಸ್ಸು ಮರಳಬೇಕೆಂದರೆ ಹಿಂದು ಧರ್ಮದಲ್ಲಿ ಒಳಗೆ ಬರಲು ಬಾಗಿಲು ಇಲ್ಲ.

ತನಗಿಷ್ಟವೆನಿಸಿದ ಧರ್ಮವನ್ನು ಸ್ವೀಕರಿಸುವ, ಆಚರಿಸುವ ಸ್ವಾತಂತ್ರ್ಯವನ್ನು ಭಾರತದ ಸಂವಿಧಾನ ಕರುಣಿಸಿದೆ. ಇಂಥ ಸ್ವಾತಂತ್ರ್ಯವನ್ನು ಮತಾಂತರ ನಿಷೇಧ ಕಾನೂನು ತರುವ ಮೂಲಕ ದಮನ ಮಾಡುವುದು ಸಂವಿಧಾನ ವಿರೋಧಿ ಕೃತ್ಯ ಎನಿಸಿಕೊಳ್ಳುತ್ತದೆ. ಮುಸ್ಲಿಂ ಅರಸರ ಆಡಳಿತದ ಕಾಲದಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಬಲವಂತದ ಮತಾಂತರ ನಡೆದಿರಬಹುದು. ಈಗದು ಸಾಧ್ಯವಿಲ್ಲ. ನಮಗುಳಿದಿರುವ ದಾರಿ ಮತ್ತು ಪರಿಹಾರ ಒಂದೇ ಭಾರತೀಯ ಜನ್ಯ ಧರ್ಮಗಳವರು ದೀನ-ದಲಿತರು, ಆದಿವಾಸಿ-ಬುಡಕಟ್ಟುಗಳವರನ್ನು ಆದರಿಸಿ ಹೊರಹೋಗದಂತೆ ತಡೆಯುವುದು.

3. ಲಿಂಗಾಯತರು ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರ

ಕ್ರೈಸ್ತ ಮಿಷನರಿಗಳ ಕಣ್ಣು ಕೇವಲ ದಲಿತರು ಮತ್ತು ಹಿಂದುಳಿದ ವರ್ಗಗಳ ಮೇಲೆ ಮಾತ್ರವಲ್ಲ ಲಿಂಗಾಯತರ ಕಡೆಗೂ ಹರಿದಿದೆ. ಅವರದೇ ಏಕೆ, ಬ್ರಹ್ಮಕುಮಾರಿ ಪಂಥದವರಿರಲಿ, ಎಸ್.ಎಸ್. ವೈದವರಿರಲಿ ಎಲ್ಲರ ಕಣ್ಣೂ ಲಿಂಗಾಯತರ ಮೇಲೆಯೇ! ಶರೀರದಲ್ಲಿ ಸ್ವರಕ್ಷಣಾ ಸಾಮರ್ಥ್ಯವಿಲ್ಲದಾಗ ಹೊರಗಿನ ರೋಗಾಣುಗಳು ಸುಲಭವಾಗಿ ದೇಹದ ಮೇಲೆ ದಾಳಿ ಮಾಡುವಂತೆ ಸ್ವಧರ್ಮ ಶಿಕ್ಷಣ ಇಲ್ಲದ್ದರಿಂದ ಬಹುಬೇಗನೆ ಅನ್ಯರ ಪ್ರಭಾವಕ್ಕೆ ಒಳಗಾಗುವರು. ಶರಣರು ಕೊಟ್ಟ ವಚನ ಸಾಹಿತ್ಯದ ಫಲವಾಗಿ ಎಲ್ಲರೂ ಆಗಿರದಿದ್ದರೂ ಸಮಾಜದ ಬಹುಪಾಲು ಜನರು ಅಧ್ಯಾತ್ಮಿಕ ಆಸಕ್ತಿ ಹೊಂದಿದವರು, ಸಮಾನತೆಯಲ್ಲಿ ನಂಬಿಕೆ ಇಟ್ಟವರು, ಸಾತ್ವಿಕರೂ ತತ್ವ ಚಿಂತಕರೂ ಆಗಿದ್ದಾರೆ. ಇವರು ಅಧ್ಯಾತ್ಮಿಕ ಹಂಬಲಿಗರಾಗಿ ಅಲೆಮಾರಿಗಳಾಗಿ ಅನ್ಯ ಮತ ಪಂಥಗಳಿಗೆ ಸುಲಭವಾಗಿ ಆಹಾರವಾಗುತ್ತಾರೆ.

ಕ್ರೈಸ್ತ ಪ್ರಮುಖರ ಪ್ರೇಮದೃಷ್ಟಿ ಲಿಂಗಾಯತರತ್ತ ಹರಿದಿದೆ, ಹರಿಯುತ್ತಿದೆ. ಅದನ್ನು ಅಂತರ್ಜಾಲದಲ್ಲಿ ಹರಿಯಬಿಟ್ಟಿದ್ದಾರೆ ಎಂದು ಒಬ್ಬರು ಹೇಳಿದರು. ಮತ್ತೊಬ್ಬರು ಹೇಳಿದರು ಸಕಲೇಶಪುರದ ಸುತ್ತಮುತ್ತ ಇರುವ ಗುಡ್ಡಗಾಡುಗಳಲ್ಲಿ ಬಹಳಷ್ಟು ಲಿಂಗಾಯತರನ್ನು ಕ್ರೈಸ್ತರನ್ನಾಗಿ ಮಾಡಲಾಗುತ್ತಿದೆ ಎಂದು. ಚಿಕ್ಕಮಗಳೂರಿನ ಶರಣರಾದ ಬಾಣೂರು ಚನ್ನಪ್ಪನವರು ಹೇಳಿದರು. ಒಳ ಜಾತಿಯ ಸಂಘಟನೆಯನ್ನೇ ಪ್ರಮುಖವಾಗಿ ಇಟ್ಟುಕೊಂಡ ಲಿಂಗಾಯತ ಮಠವೊಂದರ ಅನುಯಾಯಿಗಳು ದೊಡ್ಡ ಪ್ರಮಾಣದಲ್ಲಿ ಕ್ರೈಸ್ತರಾಗಿ, ಈ ಲಿಂಗಾಯತರೇ ಪ್ರಮುಖವಾಗಿ ಇರುವ ಊರೊಂದರಲ್ಲಿ ಚರ್ಚಿನ ಮೇಲೆ ದಾಳಿ ಸಹ ನಡೆಯಿತು ಎಂದು. ಕೇಳಿ ಆಶ್ಚರ್ಯ ಉಂಟಾಯಿತು. ಇನ್ನೂ ಮುಂದುವರಿದು ಅವರು ಹೇಳಿದರು, ಆ ಜನಾಂಗದ ಮಠಾಧೀಶರು ಹೋಗಿ "ನೀವು ಮತಾಂತರ ಹೊಂದಬೇಡಿರಿ. ನಿಮಗೆ ಏನು ಕಡಿಮೆಯಾಗಿದೆ? ಎಂದು ಪ್ರಶ್ನಿಸಿದಾಗ ಅವರ ಜನ ಉತ್ತರಕೊಟ್ಟರಂತೆ, "ನೀವು ನಮಗಾಗಿ ಯಾವ ಧಾರ್ಮಿಕ ಕಾರ್ಯ ಮಾಡುತ್ತಿದ್ದೀರಿ?" ಪ್ರಾರ್ಥನೆ ಕಲಿಸುತ್ತಿದ್ದೀರಾ ಪೂಜೆ ಕಲಿಸುತ್ತಿದ್ದೀರಾ? ಹಬ್ಬ-ಹುಣ್ಣಿಮೆ - ಉತ್ಸವಗಳಿಗಾಗಿ ತಲೆಗಂದಾಯದಂತೆ ಕಾಣಿಕೆ ವಸೂಲಿ ಮಾಡೋದು ಬಿಟ್ಟು ಸಮಾಜಕ್ಕಾಗಿ ಏನು ಮಾಡುತ್ತಿದ್ದೀರಿ?" ಈ ಉತ್ತರದಿಂದ ಮುಖಭಂಗಿತರಾದ ಸ್ವಾಮಿಗಳು ವಾಪಸ್ಸು ಬಂದರಂತೆ.

ಈ ಪ್ರಶ್ನೆಗಳನ್ನು ಇಂದು ಎಲ್ಲ ಮಠಾಧೀಶರು ಮನನ ಮಾಡಬೇಕು. ಲಿಂಗಾಯತ ಸಮಾಜದಲ್ಲಿ ಇರುವಷ್ಟು ಮಠಗಳು ಇನ್ನಾವ ಸಮಾಜದಲ್ಲೂ ಇಲ್ಲ. ಆದರೆ ಸ್ವಧರ್ಮದ ಬಗ್ಗೆ ತೀವ್ರ ಅಜ್ಞಾನ, ತಪ್ಪು ಜ್ಞಾನ, ಉದಾಸೀನತೆ ಲಿಂಗಾಯತರಲ್ಲಿ ತುಂಬಿ ತುಳುಕುತ್ತವೆ. ಹೀಗೇಕೆ?

1. ಮಠಾಧೀಶರಿಗೆ ತಮ್ಮ ಧರ್ಮದ ಬಗ್ಗೆ, ವಚನ ಸಾಹಿತ್ಯದ ಬಗ್ಗೆ ತರಬೇತಿ ಇಲ್ಲ. ತಮ್ಮ

ಧರ್ಮವಿರುವುದು ವಚನ ಸಾಹಿತ್ಯದಲ್ಲಿ; ಕಲಿಯಲು ಹೋಗುವುದು ವೇದ ಆಗಮಗಳನ್ನು.

2. ಈಗೀಗ ಅಷ್ಟಿಷ್ಟು ವಚನಗಳನ್ನು ಓದಿಕೊಂಡರೂ ತಾತ್ವಿಕ ತರಬೇತಿ ಇಲ್ಲ. ಸೈದ್ಧಾಂತಿಕವಾದ ಅಧ್ಯಯನ ಇಲ್ಲ. ತಾವು ಪೂಜಿಸುವ ಇಷ್ಟಲಿಂಗ ನಿರ್ದೇಶಿಸುವ ಧ್ಯೇಯ ವಸ್ತು ಯಾವುದು ಎಂಬುದರ ಕನಿಷ್ಠ ಜ್ಞಾನವೂ ಇಲ್ಲದ ಪರಿಸ್ಥಿತಿಗೆ ನಗಬೇಕೋ ಅಳಬೇಕೋ ತಿಳಿಯದು. ತಮಗೇ ತಿಳಿಯದಾಗ ಇನ್ನೊಬ್ಬರಿಗೆ ಹೇಗೆ ಬೋಧಿಸಬಲ್ಲರು?

3. ಸಿರಿಗೆರೆಯ ಶ್ರೀಗಳು ದಿ.22-10-2008ರ ವಿಜಯ ಕರ್ನಾಟಕದಲ್ಲಿ ಮತಾಂತರ ಮತ್ತೊಂದು ಧರ್ಮಕ್ಕೆ ತೋರುವ ಅಗೌರವ ಎಂಬ ಲೇಖನ ಬರೆದಿದ್ದಾರೆ. ಗುರು ಬಸವಣ್ಣನವರು ವೈದಿಕರಾಗಿ ಹುಟ್ಟಿಬಂದರೂ ಅದನ್ನು ತ್ಯಾಗಮಾಡಿ ಹೊಸ ಧರ್ಮವಾಗಿ ಲಿಂಗಾಯತವನ್ನು ಕೊಟ್ಟರು. ಧರ್ಮವಿಲ್ಲದವರಿಗೆ ಧರ್ಮ ಸಂಸ್ಕಾರ ಕೊಡಲು, ಸಮಾನತೆ ನೀಡಲೆಂದೇ ಅವರು ಲಿಂಗಾಯತವನ್ನು ಸ್ಥಾಪಿಸಿದ್ದು. ಇಷ್ಟಾದರೂ ಗೊತ್ತಿರಬೇಡವೆ? ದಿ.6-11-08ರಂದು ಶ್ರೀ ಚಂದ್ರಶೇಖರ ಪಾಟೀಲ್ (ಚಂಪಾ), ದಿ.7-11-2008ರಂದು ಶ್ರೀ ವೈ.ಎಸ್.ವಿ.ದತ್ತ ಬರೆದಿರುವ ಲೇಖನಗಳ ಸ್ಪಷ್ಟತೆ, ಪ್ರಬುದ್ಧತೆ ನೋಡಿದರೆ ಆಶ್ಚರ್ಯವೆನಿಸುತ್ತದೆ. ಸ್ವಾಮೀಜಿಯವರ ಅಜ್ಞಾನ ನೋಡಿದರೆ ವಿಷಾದವೆನಿಸುತ್ತದೆ. ಅಂಥ ವಿದ್ಯಾವಂತ ಸ್ವಾಮಿಗಳ ತಿಳುವಳಿಕೆಯೇ ಇಷ್ಟು ಆಳವಾಗಿರುವಾಗ ಇನ್ನು ಸಾಮಾನ್ಯ ಜನರು ಹೇಗಿರಬೇಕು?

4. ಕ್ರೈಸ್ತ ಮಿಷನರಿಗಳಿಗೆ ವ್ಯವಸ್ಥಿತ ತರಬೇತಿ ಇದೆ. ಜೊತೆಗೆ ಜನರನ್ನು ಸಂಪರ್ಕಿಸುವ ಕಲೆಯ ಶಿಕ್ಷಣವಿರುತ್ತದೆ ಮತ್ತು ಕಳಕಳಿಯೂ ಇರುತ್ತದೆ. ಬಹುಪಾಲು ಲಿಂಗಾಯತ ಮಠಾಧೀಶರಿಗೆ ತರಬೇತಿಯೂ ಇಲ್ಲ; ಅವರಲ್ಲಿ ಕಳಕಳಿ ಮೊದಲೇ ಇರದು. ಸಮಾಜದ ಗಣ್ಯರು, ಶ್ರೀಮಂತರು ಅದಕ್ಕಿಂತ ಮಿಗಿಲಾಗಿ ಮುಖ್ಯಮಂತ್ರಿಗಳು, ಮಂತ್ರಿಗಳು, ಎಂ.ಎಲ್.ಎಗಳು ದರ್ಶನಕ್ಕೆ ಬಂದರೆ ಸಾಕು. ಸ್ವರ್ಗವೇ ಇಳಿದು ಬಂದಷ್ಟು ಸಂತೋಷ.

ಅದೇ ಮುಸಲೀಮರು, ಕ್ರೈಸ್ತರು ತಮ್ಮ ಧರ್ಮಕ್ಕೆ ಒಂದು ವ್ಯಕ್ತಿಯನ್ನು ಮತಾಂತರಿಸಿದರೆ ಒಂದು ಕೋಟಿಗೂ ಮಿಗಿಲು ಸಂಪಾದಿಸಿದಂತೆ ಹರ್ಷಿಸುವರು. ತಮ್ಮ ವೈಯಕ್ತಿಕ ಏಳ್ಗೆಗಿಂತ ತಮ್ಮ ಧರ್ಮದ ಏಳ್ಗೆ, ವಿಸ್ತಾರದ ಕಡೆಗೇ ಅವರ ಲಕ್ಷ್ಯ. ವ್ಯವಸ್ಥಿತವಾದ ಅವರ ಪ್ರಚಾರ ತಂತ್ರವನ್ನು ಎದುರಿಸಲಾರದೆ ಭಾರತೀಯ ಧರ್ಮಗಳು ಸೋಲುತ್ತಿವೆ.

5. ಕ್ರೈಸ್ತ ಮಿಷನರಿಗಳಿಗೆ ಇಸ್ಲಾಮಿಕ್ ಸಂಸ್ಥೆಗಳಿಗೆ ಹಣವು ಪ್ರವಾಹದಂತೆ ಹರಿದು ಬರುತ್ತದೆ. ಭಾರತೀಯ ಧರ್ಮಗಳವರಿಗೆ ಹಣದ ಬಲ ಕಡಿಮೆ. ಕೋಟಿ ಕೋಟಿ ದುಡ್ಡನ್ನು ದಿನ ನಿತ್ಯ ಬಾಚಿಕೊಳ್ಳುವ ತಿರುಪತಿ ದೇವಾಲಯದಂತಹವು ಬಡ ಜನರ ಸಂಕಷ್ಟಗಳಿಗೆ ಸ್ಪಂದಿಸಿದರೆ ಸ್ವದೇಶಿ ಸಂಸ್ಕೃತಿ ಬಿಟ್ಟು ಜನರು ಮತಾಂತರ ಹೊಂದರು.

ಒಂದು ಕಾಲದಲ್ಲಿ ಮಠ ಮಾನ್ಯಗಳು ಶಿಕ್ಷಣ ನೀಡುವುದು ಅಗತ್ಯವಾಗಿತ್ತು. ಮಠಗಳು ಶಾಲಾ ಕಾಲೇಜು ಶಿಕ್ಷಣ ನೀಡಿ ಕರ್ನಾಟಕ ರಾಜ್ಯವನ್ನು ಶೈಕ್ಷಣಿಕವಾಗಿ ಮೇಲ್‌ಸ್ತರಕ್ಕೆ ಏರಿಸಿದ್ದು ಸತ್ಯ. ಮೆಡಿಕಲ್, ಇಂಜನಿಯರಿಂಗ್ ಕಾಲೇಜು ಮಾಡಿದ್ದು ಇನ್ನು ಸಾಕು. ಒಂದು ವೇಳೆ ಮಾಡಿದರೆ, ಅದರಿಂದ ಬಾಚಿಕೊಳ್ಳುವ ಹಣವನ್ನು ಪುನಃ ವ್ಯಾಪಾರದಲ್ಲಿ ತೊಡಗಿಸುವಂತೆ ಮತ್ತಷ್ಟು ಅಂಥವೇ ಕಾಲೇಜು ತೆರೆಯಲು ಉಪಯೋಗಿಸಿದರೆ ಏನು ಬಂತು. ಅದನ್ನು ಬಡಜನರ ಹಿತಕ್ಕೆ, ಧರ್ಮಪ್ರಚಾರಕ್ಕೆ ವಿನಿಯೋಗಿಸುವ ಯೋಜನೆ ರೂಪಿಸಲಿ.

6. ಮಠಾಧೀಶರು -ಲಿಂಗಾಯತರಿರಲಿ, ಒಕ್ಕಲಿಗರಿರಲಿ, ಕುರುಬರಿರಲಿ ಯಾರೇ ಇರಲಿ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ತಮಗಿಂತ ಕೆಳಗೆ ಇಡಲ್ಪಟ್ಟ ದಲಿತರ ಬಗ್ಗೆ ತಿರಸ್ಕಾರದಿಂದ ಕಾಣದಿರಲು ಬುದ್ಧಿ ಹೇಳಬೇಕು. ಅಂಥ ವರ್ತನೆಯಿಂದ ದೇಶದ ಮೇಲೆ ಆಗುವ ಪರಿಣಾಮವೇನು, ಎರಗುವ ಅಪಾಯವೇನು ಎಂಬ ಬಗ್ಗೆ ಬೋಧೆ ಮಾಡಬೇಕು. ಆದರೆ ಕೆಲವರು ಇದಕ್ಕೆ ಪ್ರಚೋದನೆ ನೀಡುವುದು ವಿಷಾದನೀಯ.

7. ಸಾಮಾನ್ಯವಾಗಿ ಎಲ್ಲ ಮಠಗಳು ಅದ್ದೂರಿಯ ಉತ್ಸವಗಳನ್ನು ಮಾಡುತ್ತವೆ. ಡಿ.ಸಿ, ಎಸ್.ಪಿಗಳ ನೆರವಿನಿಂದ ತಲೆಗಂದಾಯದಂತೆ ದೇಣಿಗೆ ಸಂಗ್ರಹಿಸುತ್ತವೆ. ಅದ್ದೂರಿಯ ಉತ್ಸವಗಳಿಂದ ಧರ್ಮದ ಜ್ಞಾನವಾಗದು.

ಕ್ರೈಸ್ತರ ತಂತ್ರ - ವಾರದ ಪ್ರಾರ್ಥನೆ ಮತ್ತು ಮಿಷನರಿಗಳಿಂದ ಕರಪತ್ರ ಹಂಚಿಕೆ ಸತತವಾಗಿ ನಡೆಯುತ್ತವೆ. ಜನರನ್ನು ಪ್ರಾರ್ಥನಾ ಸಭೆಗಳಿಗೆ ಆಹ್ವಾನಿಸಿ ಕರೆದೊಯ್ಯುತ್ತಾರೆ. ನಾನು ಯಾವಾಗಲೂ ಹೇಳುತ್ತಿರುತ್ತೇನೆ. "ಧುಮ್ಮಿಕ್ಕುವ ಜಲಪಾತದಿಂದ ತಂಬಿಗೆ ನೀರನ್ನು ತುಂಬಿಕೊಳ್ಳಲು ಸಾಧ್ಯವಿಲ್ಲ. ಸಣ್ಣ ನಲ್ಲಿಯ ಮೂಲಕ ಮಾತ್ರ ತುಂಬಿಕೊಳ್ಳಲು ಸಾಧ್ಯ" ಎಂದು.

ಅದೇ ಹಿಂದುಗಳಲ್ಲಿ ಅವರವರ ಜಾತಿಯ ಸಮಾವೇಶಗಳು ಮಾತ್ರ ನಡೆಯುತವೆ. ಮಡಿವಂತರಾದ ಲಿಂಗಾಯತರು ಬೇರೆಯವರನ್ನು ಆಹ್ವಾನಿಸುವುದಿರಲಿ ಅಪ್ಪಿತಪ್ಪಿ ಬೇರೆಯವರು ಬಂದರೆ ಕೆಕ್ಕರಿಸಿ ನೋಡುತ್ತಾರೆ. ನಾವು ರಾಷ್ಟ್ರೀಯ ಬಸವ ದಳ ಮಾಡಿ ವಾರದ ಪ್ರಾರ್ಥನೆ - ಶರಣ ಸಂಗಮ ನಡೆಸಲು ಶುರು ಮಾಡಿದರೆ ಅದನ್ನೆ ಕೆಡಿಸಲು, ಬಂದು ಭಾಗವಹಿಸುವವರ ಮನಸ್ಸು ಒಡೆಯಲು ಬಹಳ ಪ್ರಯತ್ನ ಮಾಡುತ್ತಾರೆ. ರಾಷ್ಟ್ರೀಯ

ಬಸವ ದಳಗಳನ್ನು ಒಡೆಯಲು ಬಗೆಬಗೆಯ ತಂತ್ರ ಮಾಡುತ್ತಾರೆ. ಚರ್ಚ್‌ಗಳಿಂದ ಕ್ರೈಸ್ತ ಧರ್ಮ, ಮಸೀದಿಗಳಿಂದ ಇಸ್ಲಾಂ ಧರ್ಮ ಬಲಗೊಂಡರೆ ಮಠಗಳಿಂದಲೇ ಲಿಂಗಾಯತ ಧರ್ಮ ದುರ್ಬಲಗೊಳ್ಳುತ್ತಿದೆ ಎನ್ನುವುದು ದುಃಖದ ಸಂಗತಿಯಲ್ಲವೆ? ಅದರಲ್ಲೂ ಪಂಚಾಚಾರ್ಯ ಪರಂಪರೆಯವರ ಮಠಗಳಂತೂ ಬಸವ ತತ್ವಕ್ಕೆ ಪೂರ್ತಿ ತದ್ವಿರುದ್ಧವೇ ಆಗಿವೆ. ಅವರುಗಳ ಆಚರಣೆ ನೋಡಿದರೆ ಲಿಂಗಾಯತ ಧರ್ಮದ ಬಗ್ಗೆ ತಪ್ಪು ತಿಳಿಯುವವರ ಸಂಖ್ಯೆ ಹಿರಿದಾಗುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ.

ಇಂಥ ಸನ್ನಿವೇಶದಲ್ಲಿ ಅನ್ಯ ಧರ್ಮೀಯರ ಬಗ್ಗೆ ಹರಿಹಾಯುವುದಾಗಲಿ, ಅವರ ಮೇಲೆ ಹಲ್ಲೆ ಮಾಡುವುದಾಗಲಿ, ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತರಲು ಕೇಂದ್ರ ಸರ್ಕಾರವನ್ನು ಆಗ್ರಹಿಸುವುದಾಗಲಿ ಪರಿಹಾರವಲ್ಲ. ಈಗ ಮುಂದೇನು?

1. ಪ್ರತಿಯೊಬ್ಬನೂ ಜಾಗೃತಗೊಂಡು ತನ್ನ ಧರ್ಮದ ಆಳ ಹರಹುಗಳನ್ನು ತಿಳಿದುಕೊಳ್ಳಬೇಕು.

2. ವಾರಕ್ಕೊಮ್ಮೆಯಾದರೂ ಒಂದೆಡೆ ಸೇರಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಯಾಗಬೇಕು.

3. ಬರೀ ಅಧ್ಯಾತ್ಮ ಅಧ್ಯಾತ್ಮ ಎಂದು ಬಡಬಡಿಸುತ್ತ ಸಾಮೂಹಿಕ ಚಿಂತನೆ, ಸಂಘಟನೆಯನ್ನು ಕಡೆಗಣಿಸಬಾರದು. ಅದನ್ನೇ ಧರ್ಮಪಿತ ಬಸವಣ್ಣನವರು "ಕನ್ನಡಿಯ (ಲಿಂಗವ) ನೋಡುವ ಅಣ್ಣಗಳಿರಾ ಜಂಗಮ (ಸಮಾಜ)ವ ನೋಡಿರೆ" ಎಂದು ಹೇಳಿರುವುದು.

4. ಗುರು ಬಸವಣ್ಣನವರು ನಮಗೆ ಕೊಡಮಾಡಿರುವ ಧಾರ್ಮಿಕ ಸಮಾನತೆ, ಸ್ವಾತಂತ್ರ್ಯವನ್ನು ಅದರಿಂದ ವಂಚಿತವಾದವರೊಡನೆ ಹಂಚಿಕೊಳ್ಳಬೇಕು. ನಮ್ಮ ಮೇಲೆ ಒಂದು ಜವಾಬ್ದಾರಿ ಇದೆ. ದೇಶೀಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿಕೊಳ್ಳಬೇಕಾದರೆ ಜನರು ವಿದೇಶಿ ಧರ್ಮದ ಕಡೆಗೆ ಮನಸ್ಸು ಹರಿಸದಂತೆ ಮಾಡಬೇಕು. ಇತರರನ್ನು ಪ್ರಾರ್ಥನೆಗೆ ಆಹ್ವಾನಿಸಿ ಕರೆತರಬೇಕು. ಬಂದವರನ್ನು ಸೌಜನ್ಯದಿಂದ ನಡೆಸಿಕೊಳ್ಳಬೇಕು. ಕ್ರೈಸ್ತ -ಇಸ್ಲಾಂ ಧರ್ಮಗಳು ಸಿಂಹದ ಗವಿಗಳಂತೆ, ಅಲ್ಲಿ ಪ್ರಾಣಿಗಳು ಒಳಗೆ ಹೋದ ಹೆಜ್ಜೆಯ ಗುರುತು ಇರುತ್ತದೆ, ಹೊರಬಂದ ಹೆಜ್ಜೆಯ ಗುರುತು ಇರುವುದಿಲ್ಲ. ಇದಕ್ಕಾಗಿ ಅವರನ್ನು ದೂಷಿಸಬೇಕಾಗಿಲ್ಲ, ಅವರ ಧರ್ಮಗಳು ಬೆಳೆಸುವ ದೃಷ್ಟಿಕೋನ ಹಾಗಿದೆ. ಅಲ್ಲಿ, ನಿಮ್ಮದು ಶ್ರೇಷ್ಠ ಧರ್ಮ ಎಂದು ಅನುಯಾಯಿಗಳಿಗೆ ಮಾನಸಿಕ ತರಬೇತಿ ನೀಡಲಾಗುತ್ತದೆ. ಭಾರತೀಯ ಧರ್ಮಗಳು ಹಾಗಲ್ಲ, ಎಲ್ಲ ಧರ್ಮಗಳಲ್ಲಿ ಒಳ್ಳೆಯ ಅಂಶಗಳಿವೆ. ಅರಿತು ಬಾಳಿರಿ ಎಂದು ಈ ಧರ್ಮಗಳಲ್ಲಿ ಬೋಧನೆ ಮಾಡಲಾಗುತ್ತದೆ. ಹೀಗಾಗಿಯೇ ಆಫ್‌ಘಾನಿಸ್ಥಾನ ಮುಂತಾದಲ್ಲಿ ಪ್ರಬಲವಾಗಿದ್ದ ಶಾಂತಿದೂತ ಬುದ್ಧನ ಧರ್ಮ ಪೂರ್ತಿನಾಶವಾಯಿತು. ಹೀಗಾಗಿ ಮತಾಂತರಗೊಂಡು ಹೊರಗೆ ಹೋದವರನ್ನು ಮನವೊಲಿಸಿ ಮಾತೃ ಸಂಸ್ಕೃತಿಗೆ ಕರೆತರುವ ಪ್ರಯತ್ನ ಮಾಡಬೇಕು. ಅದಕ್ಕಿಂತ ಮಿಗಿಲಾಗಿ ಈಗ ಒಳಗಿರುವವರು ಹೊರಗೆ ಹೋಗದಂತೆ ನೋಡಿಕೊಳ್ಳಬೇಕು.

5. ಕ್ರೈಸ್ತ, ಇಸ್ಲಾಂ ಧರ್ಮಗಳಿಗೆ ಮತಾಂತರ ಹೊಂದಿದ ಕೆಲವರು ಅಲ್ಲಿ ಏಕದೇವೋಪಾಸನೆ ಇದೆ, ಸಮಾನತೆ ಇದೆ ಎಂದೂ, ಬ್ರಹ್ಮಕುಮಾರಿಗೆ ಮತಾಂತರ ಹೊಂದಿದ ಹಲವರು ಅಲ್ಲಿ ನಿರಾಕಾರ ಏಕದೇವೋಪಾಸನೆ, ಯೋಗ ಇದೆ ಎಂದೂ ಪ್ರತಿಪಾದಿಸುತ್ತಾರೆ. ಲಿಂಗಾಯತ ಧರ್ಮವು ಕಡ್ಡಾಯ ಏಕದೇವೋಪಾಸಕ ಧರ್ಮ, ನಿರಾಕಾರ ದೇವರ ಕಲ್ಪನೆ ಪ್ರತಿಪಾದಿಸುವ ಧರ್ಮ; ಸಂಪೂರ್ಣ ಅಧ್ಯಾತ್ಮಿಕ ದಾರ್ಶನಿಕ ಧರ್ಮ. ಇದನ್ನೇಕೆ ಅರ್ಥ ಮಾಡಿಕೊಳ್ಳುತ್ತಲಿಲ್ಲವೊ?!

6. ಮಹಿಳೆಯರು ಮತ್ತು ಮಕ್ಕಳ ಸಂಕಷ್ಟಗಳು ಜಾಸ್ತಿಯಾಗುತ್ತಲಿವೆ. ಕುಡುಕ ಗಂಡಂದಿರಿಂದ ಹಿಂಸೆಗೆ ಒಳಗಾಗುವ ಮಹಿಳೆಯರು ಒಂದು ಕಡೆ, ದುರ್ವ್ಯಸನಗಳಿಂದ ಅಕಾಲಿಕ ಮರಣ ಹೊಂದುವ ಗಂಡಂದಿರಿಂದ ಅಕಾಲಿಕ ವಿಧವೆಯಾಗುವ ಹೆಣ್ಣು ಮಕ್ಕಳು, ಅನಾಥ ಮಕ್ಕಳು ಇನ್ನೊಂದು ಕಡೆ. ಇವರಿಗೆ ಬದುಕು ಒಂದು ದೊಡ್ಡ ಸಮಸ್ಯೆ. ನಿರಾಶ್ರಿತರಾದ ಅಬಲೆಯರು, ಅನಾಥರಿಗೆ ಆಶ್ರಯ ನೀಡುವ ಧರ್ಮ ಸಂಸ್ಥೆಗಳ ಅಗತ್ಯ ತೀವ್ರವಾಗಿದೆ. ಬಡವರಿಗೆ ಹೆಣ್ಣು ಮಕ್ಕಳ ಮದುವೆ ಮತ್ತೊಂದು ದೊಡ್ಡ ಸಮಸ್ಯೆ. ಹೀಗಾಗಿ ಎಷ್ಟೋ ಯುವತಿಯರು ಮತಾಂತರಗೊಂಡು ಕ್ರೈಸ್ತ ನನ್‌ಗಳಾಗುತ್ತಾರೆ. ಅವರೆಲ್ಲ ವೈರಾಗ್ಯ ಭಾವನೆಯಿಂದಲೇ ನನ್‌ಗಳಾಗುತ್ತಾರೆ ಎಂದು ಹೇಳಲು ಸಾಧ್ಯವೇ ಇಲ್ಲ. ಅನೇಕರು ಬಡತನ, ಆಶ್ರಯ ರಾಹಿತ್ಯ ಸ್ಥಿತಿಯಿಂದ ಪಾರಾಗಲು ನನ್‌ಗಳಾಗುತ್ತಾರೆ. ಅವರಿಗೆ ಶಿಕ್ಷಣ ನೀಡಿ ಧರ್ಮ ಪ್ರಚಾರಕ್ಕೆ ಬಳಸಿಕೊಳ್ಳಲಾಗುವುದು. ಆದ್ದರಿಂದ ನಮ್ಮ ಸಮಾಜಗಳಲ್ಲೂ ಅಂಥ ಅಬಲಾಶ್ರಮ, ಅನಾಥಾಶ್ರಮಗಳ ಸಂಖ್ಯೆ ಬೆಳೆಯಬೇಕಾಗಿದೆ.

7. ಆಸ್ಪತ್ರೆಗಳ ಮೂಲಕ ಧರ್ಮಪ್ರಚಾರ ಮತ್ತು ಕ್ರಿಸ್ತೀಕರಣ

ಔಷಧೋಪಚಾರದ ಜೊತೆಗೆ, ಏಸುವನ್ನು ನಂಬಿರಿ, ಗುಣಮುಖರಾಗುತ್ತೀರಿ ಎಂದು ಕ್ರೈಸ್ತ ಆಸ್ಪತ್ರೆಗಳಲ್ಲಿ ಬೋಧಿಸಲಾಗುವದು. ನಿಮಗಾಗಿ ನಾವು ಪ್ರಾರ್ಥಿಸುತ್ತೇವೆ ಎಂದು ಹೇಳಲಾಗುವುದು. ಬೇರೆ (ಮಠ - ಸಂಸ್ಥೆ) ಯವರು ನಡೆಸುವ ಆಸ್ಪತ್ರೆಗಿಂತ ಮಿಗಿಲಾಗಿ ಮಾನವೀಯವಾಗಿ ವರ್ತಿಸಲಾಗುವುದು. ನಿರ್ಗತಿಕರನ್ನು ಮಾತ್ರವಲ್ಲ ಆಸ್ಪತ್ರೆ ಬಿಲ್ ಕಟ್ಟಲಾರದವರಿದ್ದರೆ ಅವರಿಗೆ ಕ್ರೈಸ್ತರಾದರೆ ಮಾಫೀ ಮಾಡುವದಾಗಿ ಹೇಳುವರು. ಓರ್ವ ಲಿಂಗಾಯತ ಮಹಿಳೆ ಹೆರಿಗೆಗಾಗಿ ಒಂದು ಕ್ರೈಸ್ತ ಆಸ್ಪತ್ರೆಗೆ ದಾಖಲಾದವಳು ನಂತರ ಬಿಲ್ ಕಟ್ಟಲಾರದಾದಾಗ ಅವಳನ್ನೂ ಮತಾಂತರಿಸಿದಲ್ಲದೆ, ಅವರಿಗೆ ಅಲ್ಲೇ ಆಯಾ ಕೆಲಸ ಸಹ ಕೊಟ್ಟರಂತೆ. ಇದು ತಪ್ಪು ಎಂದು ನಾನು

ಹೇಳಲು ಹೋಗುವುದಿಲ್ಲ. ಇದೇ ಕಳಕಳಿಯನ್ನು ಲಿಂಗಾಯತರು, ಉಳಿದ ಹಿಂದುಗಳು ನಡೆಸುವ ಆಸ್ಪತ್ರೆಗಳಲ್ಲಿ ಏಕೆ ತೋರಿಸಬಾರದು ಎಂದು ನನ್ನ ಪ್ರಶ್ನೆ. ಒಮ್ಮೆ ಧಾರವಾಡದಲ್ಲಿ ನಮ್ಮ ಅನಾಥಾಶ್ರಮದ ಮಗುವಿಗೆ ಮಧ್ಯರಾತ್ರಿ ಬಹಳ ತ್ರಾಸು ಆದಾಗ ಕಷ್ಟ ಪಟ್ಟು ಆಟೋ ಹುಡುಕಿ ಸರ್ಕಾರಿ ಆಸ್ಪತ್ರೆ ಗೆ ಒಯ್ದರಂತೆ. ನರ್ಸ್‌ಗಳು ಹರಟೆ ಹೊಡೆಯುತ್ತಿದ್ದವರು ಅಡ್ಮಿಟ್ ಮಾಡಿಕೊಳ್ಳಲು ಮನಸ್ಸು ಮಾಡಲೇ ಇಲ್ಲವಂತೆ. ಮಾತೆ ಸತ್ಯಾದೇವಿ ಅಳುತ್ತ ಜರ್ಮನ್ ಮಿಷನರಿ ಆಸ್ಪತ್ರೆಗೆ ಒಯ್ದಾಗ, ಅಲ್ಲಿ ಸೇರಿಸಿಕೊಂಡು ಚಿಕಿತ್ಸೆ ಕೊಟ್ಟರಂತೆ. ಪೂರ್ಣ ಆರಾಮಾದ ಮೇಲೆ ಬಿಲ್ ಕೊಡುವಾಗ ಅನಾಥಾಶ್ರಮದ ಮಗು ಎಂದಾಗ ಮುಖ್ಯ ಪಾದ್ರಿಗಳು ಸ್ವಲ್ಪ ರಿಯಾಯಿತಿ ಮಾಡಿದರು. ವಾಸ್ತವತೆಯನ್ನು ಅರಿತು ಇಂದು ಉಳಿದ ಧರ್ಮದವರೂ ಮಾನವೀಯತೆ, ದಯೆಯನ್ನು ಬೆಳೆಸಿಕೊಳ್ಳುವುದು ಅವಶ್ಯವೆನಿಸುವುದಲ್ಲವೆ?

8. ಲಿಂಗಾಯತ ಧರ್ಮಾನುಯಾಯಿಯಾದ ಪ್ರತಿಯೊಬ್ಬರೂ ತಾವು ಧರ್ಮಪ್ರಚಾರಕರಾಗಬೇಕು. ಸಮಯವನ್ನು ಹಾಳು ಹರಟೆಯಲ್ಲಿ ಅಪವ್ಯಯ ಮಾಡದೆ ತನ್ನ ಧರ್ಮದ ಬಗ್ಗೆ ಅಧ್ಯಯನ ಮಾಡಲು, ಪ್ರಚಾರ ಮಾಡಲು ವಿನಿಯೋಗಿಸಬೇಕು. ಧರ್ಮಬೋಧೆ ಮಾಡುವ ಕಲೆ ಕಲಿಯಬೇಕು, ತಮ್ಮ ಪರಿಚಯದ ಹಳ್ಳಿಗಳಿಗೂ ಹೋಗಬೇಕು. ಗುಡಿಗಳಲ್ಲಿ, ಮನೆಗಳಲ್ಲಿ ಜನರನ್ನು ಸೇರಿಸಿ ವಚನ ಸಾಹಿತ್ಯವನ್ನು ಬೋಧಿಸಬೇಕು. ಬಸವ ಜ್ಯೋತಿ ಕಾರ್ಯಕ್ರಮವನ್ನು ಹೊಸ ಹೊಸ ಮನೆಗಳಲ್ಲಿ ಏರ್ಪಡಿಸಿಕೊಳ್ಳಬೇಕು. ಸಂಜೆಯ ವೇಳೆಯಲ್ಲಿ ತಮ್ಮ ಮನೆಯಲ್ಲಿ ಕುಳಿತು ಸಮಯ ಕಳೆಯುವ ಬದಲು ಯಾರಾದರೂ ಪರಿಚಿತರ ಮನೆಗೆ ಹೋಗಿ ನೆನಹು ಮಾಡಿ ಧರ್ಮಬೋಧೆ ಮಾಡಬೇಕು.

ದುಃಖದಲ್ಲಿ ಕಷ್ಟದಲ್ಲಿರುವವರನ್ನು ಕಂಡು ತಿರಸ್ಕಾರದಿಂದ ನೋಡದೆ, ಕುಹಕ - ಕಟಕಿಯಾಡದೆ ಸಹಾನುಭೂತಿ ವ್ಯಕ್ತಪಡಿಸಬೇಕು. ಕಷ್ಟದಲ್ಲಿ ನೆರವಾಗಬೇಕು. ಅನಾಥಾಲಯಗಳನ್ನು ತೆರೆದಾಗ ನಮ್ಮ ಕೆಲವು ಶರಣರು ಈ ಸಂಸಾರ ಏಕೆ ಬೇಕಿತ್ತು? ಮನಶ್ಶಾಂತಿಗಾಗಿ ಆಶ್ರಮಕ್ಕೆ ಬರುತ್ತೇವೆ ಎಂದು ಆಕ್ಷೇಪಿಸಿದರು. ಇದು ಹಿಂದು ಧರ್ಮದ ಆಶ್ರಮದ ಪರಿಕಲ್ಪನೆ. ಕ್ರೈಸ್ತ ಧರ್ಮ ಮಾನವೀಯತೆಯಿಂದ ಜನರ ಮನಸ್ಸನ್ನು ಗೆದ್ದು ಅಂತಿಮವಾಗಿ ಅವರನ್ನು ಮತಾಂತರಿಸುತ್ತದೆ. ಆದ್ದರಿಂದ ಭಾರತೀಯ ಜನ್ಯ ಧರ್ಮಗಳು ಸಹ ಮಾನವೀಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಕ್ರೈಸ್ತರ ಧರ್ಮಪ್ರಚಾರದ ಕಳಕಳಿ, ಮಾನವೀಯ ಸೇವೆ ನಾವೂ ನಮ್ಮ ಧರ್ಮ - ಸಮಾಜ ಕಟ್ಟುವಲ್ಲಿ ಏಕೆ ಪ್ರೇರಣೆ ನೀಡಬಾರದು?

4. ಸಿಖ್ - ಅನುಕರಣೀಯ ಸಮಾಜ

ಜಗತ್ತಿನಲ್ಲಿ ಹಲವಾರು ಧರ್ಮಗಳು, ಅವುಗಳನ್ನು ಆಶ್ರಯಿಸಿದ (ಅಥವಾ ಅಳವಡಿಸಿಕೊಂಡ) ಹಲವಾರು ಸಮುದಾಯಗಳಿವೆ. ಅವುಗಳಲ್ಲೆಲ್ಲ ನನಗೆ ಹೆಚ್ಚು ಇಷ್ಟವಾದ ಸಮುದಾಯ, ಸಮಾಜವೆಂದರೆ ಸಿಖ್ಖರದು. ಮೊದಲಿನಿಂದಲೂ ಅಷ್ಟೆ ಭವ್ಯ ನಿಲುವಿನ ಸಿಖ್ ಯೋಧರನ್ನು, ಕ್ರೀಡಾ ಪಟುಗಳನ್ನು, ಅವರ ಧಾರ್ಮಿಕ ಸಮವಸ್ತ್ರವಾಗಿರುವ ಪೇಟ, ಗಡ್ಡಗಳನ್ನು ಕಂಡಾಗ ಏನೋ ಅಭಿಮಾನ! ಈ ಸಮಾಜದ ಆಕಸ್ಮಿಕ ಪರಿಚಯವಾದುದು 1997ರಲ್ಲಿ ಸಮ್ಮೇಳನದ ಬಳಿಕ ಪೂರ್ವ ಅನುಮತಿಯಿಲ್ಲದೆ ಮೆರವಣಿಗೆ ಸಾಗುತ್ತಿತ್ತು. ಕುದುರೆ ಸಾರೋಟಿನಲ್ಲಿ ನಾವು ಸಾಗುತ್ತಿದ್ದೆವು. ಆಗ ಶೀಸ್ ಗಂಜ್ ಗುರುದ್ವಾರದ ಬಳಿ ನಮ್ಮ ಮೆರವಣಿಗೆ ತಡೆದು ಬಂದು ಸತ್‌ನಾಮ್‌ಸಿಂಗ್ ಉಪ್ಪಲ್ ಅವರು ಮೇಲು ವಸ್ತ್ರವನ್ನು ಹೊದ್ದಿಸಿ ಮಾಲಾರ್ಪಣೆ ಮಾಡಿ ಗೌರವಿಸಿದರು. ನಮಗೆ ಆಶ್ಚರ್ಯ ಉಂಟಾಯಿತು, ಅಭಿಮಾನ ಇಮ್ಮಡಿಸಿತು.

ಎರಡನೆಯ ಬಾರಿ ಸಮ್ಮೇಳನವು 2005ರಲ್ಲಿ ಜರುಗಿತು. ಪೂರ್ವ ಪರಿಚಯದೊಡನೆ ಸಂಪರ್ಕಿಸಿದಾಗ ಶ್ರೀ ಸತ್‌ನಾಮಸಿಂಗ್ ತುಂಬಾ ಸಹಾಯ ಮಾಡಿದರು. ಸಮ್ಮೇಳನದ ಸ್ಥಳ ಅವರು ಸೇವೆ ಮಾಡುತ್ತಿದ್ದ ಶೀಸ್ ಗಂಜ್ ಗುರುದ್ವಾರಕ್ಕೆ ಹತ್ತಿರದ ಮಹಾವೀರ್ ವಾಟಿಕಾದಲ್ಲಿ. ಈ ಬಾರಿ ಮೆರವಣಿಗೆ ಪೂರ್ವ ಸಿದ್ಧತೆಯೊಡನೆ. ಆದ್ದರಿಂದ ಗುರುದ್ವಾರದ ಒಳಗೆ ಬರಮಾಡಿಕೊಂಡು, ಅವರ ಸಮಾಜದ ಅತ್ಯುನ್ನತ ಗೌರವ ನೀಡುವ ಸಂಕೇತವಾಗಿ ಖಡ್ಗವನ್ನು ನೀಡಿದರು. ಗುರುದ್ವಾರಗಳ ಶಿಸ್ತು, ಭಕ್ತಿ ಅನುಕರಣೀಯ. ಎಷ್ಟು ದೊಡ್ಡ ವ್ಯಕ್ತಿಯೇ ಇರಲಿ ತನ್ನ ಧರ್ಮದ ಆದೇಶ ಪಾಲಿಸುವುದರಲ್ಲಿ, ಧರ್ಮಗ್ರಂಥಕ್ಕೆ ಗೌರವ ಕೊಡುವುದರಲ್ಲಿ ಅವರು ಮುಂದೆ.

ಸಿಖ್ ಧರ್ಮದ ಮುಖ್ಯ ಕ್ಷೇತ್ರಗಳಲ್ಲಿ ಒಂದು ನಾಂದೇಡ್, ಮಹಾರಾಷ್ಟ್ರ ರಾಜ್ಯದಲ್ಲಿ ಗೋದಾವರಿ ನದಿಯ ದಂಡೆಯ ಮೇಲಿರುವ ನಾಂದೇಡ ಪವಿತ್ರ ನಗರ(ಹೋಲಿ ಸಿಟಿ) ಎಂಬ ಕೀರ್ತಿಗೆ ಪಾತ್ರವಾಗಿದೆ. ಗುರುಗೋವಿಂದ ಸಿಂಗ್‌ರವರು ಗುರು ಗ್ರಂಥ ಸಾಹಿಬ್‌ಗೆ ಗುರುವಿನ ಪಟ್ಟಕಟ್ಟಿ ಈಗ 300 ವರ್ಷಗಳು ಗತಿಸಿದ್ದು 300ನೆಯ ವಾರ್ಷಿಕೋತ್ಸವ ಸಮಾರಂಭವು 2008ರ ಅಕ್ಟೋಬರ್ 27ರಂದು ನಡೆದಿದ್ದು ಗುರುತಾ ಗದ್ದಿ -300 (ಗುರುವಿನ ಗದ್ದುಗೆ) ಉತ್ಸವಕ್ಕೆ 40 ಲಕ್ಷ ಸಿಖ್ಖರು ಭಾಗವಹಿಸುವ ಅಂದಾಜಿನೊಡನೆ ಸಿದ್ಧತೆ ನಡೆಯಿತು.

ಜಗತ್ತಿನಲ್ಲಿ ಹುಟ್ಟಿರುವ ಧರ್ಮಗಳ ಪೈಕಿ ಸಿಖ್ ಧರ್ಮವು ಕಿರಿಯದು. ಕ್ರಿ.ಶ.1469ರಲ್ಲಿ ಅದು ಗುರು ನಾನಕರಿಂದ ಸ್ಥಾಪನೆಗೊಂಡಿತು. 9ನೆಯವರು ಗುರು ತೇಜ್ ಬಹಾದ್ದೂರ್, 10ನೆಯವರು ಗುರುಗೋವಿಂದ ಸಿಂಗರು. ಹಿಂದು ಧರ್ಮವು ಬಹುದೇವತೋಪಾಸನೆಯಿಂದ ಘಾಸಿಗೊಂಡಂತೆ ಬಹುಗುರೂಪಾಸನೆಯಿಂದಲೂ ದುರ್ಬಲಗೊಳ್ಳುತ್ತಿದೆ. ಒಬ್ಬೊಬ್ಬ ವ್ಯಕ್ತಿಯೂ ತಾನೇ ಆರಾಧ್ಯ ವಸ್ತುವಾಗಿ ತನ್ನ ಸುತ್ತಲೂ ಒಂದು ಪಂಥವನ್ನು ಕಟ್ಟಿಕೊಳ್ಳುತ್ತಾನೆ. ಇದೇ ರೀತಿ ಸಿಖ್ ಸಮಾಜದಲ್ಲೂ ಬಹುಜನ ಗುರುಗಳು ಬಗೆಬಗೆಯಾಗಿ ಬೋಧನೆ ಮಾಡತೊಡಗಿದಾಗ ಅಲ್ಲೂ ಶಿಥಿಲತೆ ಆರಂಭವಾಗತೊಡಗಿತು. ಅದಕ್ಕಾಗಿ ಗುರುಗೋವಿಂದ ಸಿಂಗರು ಗುರುಗಳ ಸಂತತಿ, ಸಮೂಹ ಬೆಳೆಯಲು ಅವಕಾಶವಾಗದಂತೆ ಗುರು ಗ್ರಂಥವನ್ನೇ ಗುರುವನ್ನಾಗಿ ಘೋಷಿಸಿ ಗದ್ದುಗೆಗೆ ಏರಿಸಿದರು. ದಶಗುರು ಪರಂಪರೆಗೆ ನಾಂದಿ ಹಾಡಿದರು. ಇದು ಜರುಗಿ ಕೇವಲ 300 ವರ್ಷಗಳಾದವು. ಸಿಖ್ ಧರ್ಮ ಸ್ಥಾಪನೆಯಾಗಿ ಕೇಂದ್ರ ಸರ್ಕಾರದಲ್ಲಿ ಅತ್ಯಂತ ಸಶಕ್ತ ಜನಾಂಗದ ನೇತಾರರೊಬ್ಬರು ಪ್ರಧಾನಿಗಳಾಗಿದ್ದರೆ ಅತ್ಯಂತ ದುರ್ಬಲ ಜನಾಂಗ (ಲಿಂಗಾಯತರು)ದ ದುರ್ಬಲ ವ್ಯಕ್ತಿಯೊಬ್ಬರು ಗೃಹ ಮಂತ್ರಿಗಳಾಗಿದ್ದಾರೆ. ಒಗ್ಗಟ್ಟಿನಿಂದ ಎಲ್ಲ ಸಂಕಷ್ಟಗಳನ್ನು ಎದುರಿಸುವ ಛಾತಿ ಸಿಖ್ ಜನಾಂಗದ್ದಾಗಿದ್ದರೆ ಸಾದರು, ಬಣಜಿಗರು, ಪಂಚಮಸಾಲಿ ಎಂದು ಜಗಳವಾಡುವ ಕುಖ್ಯಾತಿ ಲಿಂಗಾಯತ ಸಮಾಜದ್ದು. ಸ್ವಲ್ಪ ಕಾಲ ಪಾಕಿಸ್ತಾನಿಗಳಿಂದ ಪ್ರಚೋದನೆ ಪಡೆದು ಭಿಂದ್ರನ್ ವಾಲೆಯಂತಹವರು ಹಿಂಸಾವಾದಿಗಳೂ, ಭಯೋತ್ಪಾದಕರು ಆಗಿ ಸಿಖ್ ಸಮಾಜಕ್ಕೆ ಕಲಂಕ ತಂದರಾದರೂ ಒಟ್ಟಾರೆ ಅವರು ಶೂರರು, ಶಾಂತಿಪ್ರಿಯರು, ಕಾಯಕ ಪ್ರೇಮಿಗಳು, ಕ್ರಿಯಾಶೀಲವೂ ಆದ ಜನಾಂಗ. ಜಗತ್ತಿನ ಯಾವುದೇ ಕ್ರಾಂತಿಕಾರಿ ಧರ್ಮವೂ ಒಂದು ವ್ಯವಸ್ಥಿತ ಅಂಧ ಸಂಪ್ರದಾಯದ ವಿರುದ್ಧ ಪ್ರತಿಭಟಿಸಿದಾಗ ಅದು ಸಂಕಷ್ಟಗಳನ್ನು ಎದುರಿಸುವುದು ಅತ್ಯಂತ ಸಹಜ. ಯಹೂದಿ ಧರ್ಮದ ಅಂಧ ಸಂಪ್ರದಾಯ, ಜನಾಂಗೀಯವಾದದ ವಿರುದ್ಧ ಹೋರಾಡಿ ಕ್ರೈಸ್ತ ಧರ್ಮ, ಬುಡಕಟ್ಟು ಜನರ ಮೂಢನಂಬಿಕೆ ಬಹುದೇವತೋಪಾಸನೆಯ ವಿರುದ್ಧ ಹೋರಾಡಿದ ಇಸ್ಲಾಂ, ವೈದಿಕ ಧರ್ಮದ ಜಾತೀಯತೆ , ವರ್ಣಾಶ್ರಮ ವ್ಯವಸ್ಥೆ, ಬಹುದೇವತೋಪಾಸನೆಯ ವಿರುದ್ಧ ನಿಂತ ಬಸವ (ಲಿಂಗಾಯತ) ಧರ್ಮ ಮತ್ತು ಸಿಖ್ ಧರ್ಮ ಬಹಳಷ್ಟು ಕಷ್ಟಗಳನ್ನು ಎದುರಿಸಬೇಕಾಯಿತು. ಇವುಗಳ ಆದ್ಯರು ವಿರೋಧವನ್ನು ಎದುರಿಸಿದರು. ಅವರ ನಂತರ ಅವರ ಅನುಯಾಯಿಗಳೂ ಬಹಳ ಕಿರುಕುಳ ಅನುಭವಿಸ ಬೇಕಾಯಿತು.ಆದರೆ ಉಳಿದೆಲ್ಲ ಧರ್ಮಗಳೂ ಸಂಕಷ್ಟದ ಕುಲುಮೆಯಲ್ಲಿ ಕಷ್ಟ ತಾಳಿಕೊಂಡು ಗೆದ್ದವು ಮತ್ತು ಅನುಯಾಯಿಗಳು ತಮ್ಮ ಧರ್ಮಗಳನ್ನು ಮೇಲಕ್ಕೆತ್ತಿದರು. ಬೌದ್ಧ ಧರ್ಮ ಪುರೋಹಿತಶಾಹಿ ಮತ್ತು ಅದರಿಂದ ಪ್ರಚೋದಿತವಾದ ರಾಜಶಾಹಿಯಿಂದ ಆಕ್ರಮಣಕ್ಕೆ ಒಳಗಾಗಿ ತಾತ್ಕಾಲಿಕ ವಿನಾಶಕ್ಕೆ ಒಳಗಾದಂತೆ ಆಗಿ, ದೇಶವನ್ನು ತೊರೆದು ಹೋಯಿತು. ಆದರೆ ಹೊರಗೆ ಸೊಂಪಾಗಿ ದಾಂಗುಡಿ ಇಟ್ಟು ಬೆಳೆಯಿತು.

ಲಿಂಗಾಯತ ಧರ್ಮದ ಆದ್ಯರು ಕಷ್ಟಗಳನ್ನೆದುರಿಸಿ ವಚನ ಸಾಹಿತ್ಯವನ್ನು, ಲಿಂಗಾಯತ ಧರ್ಮವನ್ನು ಉಳಿಸಿಕೊಟ್ಟರೂ ನಂತರದ ಮಠಾಧೀಶರು ಮತ್ತು ಅನುಯಾಯಿಗಳು ದೃಢ ಮನಸ್ಸಿನಿಂದ ರಕ್ಷಿಸಿಕೊಳ್ಳಲಾರದೆ ಶೈವ ಮತ್ತು ವೈದಿಕ ಪ್ರಭಾವಕ್ಕೆ ಸಿಕ್ಕಿಬಿಟ್ಟಿದ್ದಾರೆ. ಹೀಗೆ ಆಂತರಿಕ ಸಂಘರ್ಷದಿಂದ ಕೂಡಿದ ಒಂದು ದುರ್ಬಲ ಸಮಾಜ ರೂಪುಗೊಂಡಿತು. ಹೊರಗಿನ ಯಾವ ಶತ್ರುವಿನ ಅಗತ್ಯವೂ ಇಲ್ಲದಂತೆ ಪರಸ್ಪರ ಕಾಲೆಳೆಯುವ ಪ್ರಕ್ರಿಯೆಯಲ್ಲಿ ತೊಡಗಿರುವ ಲಿಂಗಾಯತರು ತಮ್ಮ ಧರ್ಮವನ್ನಾಗಲಿ, ಸಂಸ್ಕೃತಿಯನ್ನಾಗಲಿ ಉಳಿಸಿಕೊಳ್ಳಲಾರದ ಸ್ಥಿತಿ ತಲುಪಿದ್ದಾರೆ. ಸದ್ಯದ ಸ್ಥಿತಿ ನಿರಾಶಾದಾಯಕವಾಗಿದ್ದರೂ ಸಿಖ್ ಸಮಾಜ ಸಾಧಿಸಿರುವ ಸಾಧನೆ ನೋಡಿದರೆ ತತ್ವನಿಷ್ಠೆ ಬೆಳೆಸಿಕೊಂಡರೆ ಸಂಘಟನಾ ಶಕ್ತಿಯನ್ನು ಬೆಳೆಸಿಕೊಳ್ಳುವುದು ಅಸಾಧ್ಯವೇನಲ್ಲ ಎಂಬ ಆಶಾಭಾವ ಚಿಗುರೊಡೆಯುತ್ತದೆ.

ಬದುಕು ವ್ಯರ್ಥ

ಗುಡಿ ಗುಡಿ ತಿರುಗುವರಯ್ಯಾ ವ್ಯರ್ಥ
ಖರ್ಚು ಮಾಡುವರಯ್ಯಾ ಧನ ವ್ಯರ್ಥ
ದೇವನ ನಂಬದೆ ಕಳೆವರಯ್ಯಾ ಜೀವನ ವ್ಯರ್ಥ
ಲೀಲಾವಿಶೇಷ ಲಿಂಗದೇವನ ಅರಿಯದೆ
ಸಾಗುವರಯ್ಯಾ ಅನಂತ ಜನ್ಮಂಗಳಿಗೆ ವ್ಯರ್ಥ

- ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ. ಬೆಂಗಳೂರು

ಬಸವ ವಚನಾಮೃತ

64. ಅಕಟಕಟಾ, ಕರುಣಾರಹಿತ ಶಿವ !

ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ!
ಅಕಟಕಟಾ, ಶಿವ ನಿನಗಿನಿತು ಕೃಪೆಯಿಲ್ಲ
ಏಕೆ ಹುಟ್ಟಿಸಿದೆ ತಂದೆ ಇಹಲೋಕ ದುಃಖಿಯ?
ಏಕೆ ಹುಟ್ಟಿಸಿದೆ ಪರಲೋಕ ದೂರನ
ಏಕೆ ಹುಟ್ಟಿಸಿದೆ, ಕೂಡಲಸಂಗಮದೇವ ಕೇಳಯ್ಯಾ;
ಎನಗಾಗಿ ಮತ್ತೊಂದು ತರುಮರನಿದ್ದಿಲ್ಲವೆ? - ಬ.ವ.ದೀ- 62

ಈ ವಚನವಲ್ಲಿ ಗುರು ಬಸವಣ್ಣನವರು ಬಾಲ್ಯದಲ್ಲಿ ಬಳಸಿದ ವಚನಾಂಕಿತ ಕೂಡಲ ಸಂಗಮದೇವ ಎಂಬುವನ್ನು ಹಾಗೆಯೇ ಉಳಿಸಿದ್ದೇನೆ. ಏಕೆಂದರೆ ಇದು ಸಾಕ್ಷಾತ್ಕಾರವಾಗಿ ನವ ಧರ್ಮ ದ್ರಷ್ಟಾರರಾಗುವ ಮೊದಲು ಗುರು ಬಸವಣ್ಣನವರು ಬರೆದ ವಚನ. ಈ ವಚನವನ್ನು ಬರೆದ ಸನ್ನಿವೇಶವನ್ನು ಹೀಗೆ ಚಿತ್ರಿಸಬಹುದು. ತಾಯಿ- ತಂದೆ, ಬಂಧು ಬಳಗ, ಕುಲಬಾಂಧವರು, ಊರು ಎಲ್ಲವನ್ನೂ ಬಿಟ್ಟು ಬಾಲಕ ಬಸವರಸ ಪಾಶುಪತ ಶೈವ ಕ್ಷೇತ್ರ, ತಮ್ಮ ಮನೆದೇವರು ಸಂಗಮನಾಥನ ದೇವಾಲಯಕ್ಕೆ ಬಂದಿದ್ದಾರೆ. ಬಾಲಕನ ಮನಸ್ಸು ಉದ್ವಿಗ್ನಗೊಂಡಿದೆ. ಮುಂದೆ ಏನು? ಹೇಗೆ ? ಎಂಬ ಶೂನ್ಯ ಭಾವ ಮೂಡಿದೆ. ಸಂಗಮನಾಥನ ಮೇಲೆ ಎಲ್ಲ ಭಾರ ಹಾಕಿ ಶರಣಾಗತ ಭಾವನೆಯಿಂದ ಹಾಡುತ್ತಿದ್ದಾರೆ.

"ಅಯ್ಯೋ, ಶಿವನೆ ನಿನ್ನಲ್ಲಿ ಕರುಣೆ ಏಕಿಲ್ಲ? ನನ್ನ ಮೇಲೆ ಕೃಪೆಯನ್ನು ಏಕೆ ತೋರಿಸುತ್ತಿಲ್ಲ? ನನ್ನಂತಹ ನಿರ್ಭಾಗ್ಯನನ್ನು ಹುಟ್ಟಿಸುವ ಅಗತ್ಯ ಏನಿತ್ತು? ನಾನು ಇಹಲೋಕ ದುಃಖಿ. ಏಕೆಂದರೆ ಉಳಿದ ಬಹು ಸಂಖ್ಯಾತರಂತೆ ವ್ಯವಸ್ಥೆಯ ಜೊತೆ ಹೊಂದಿಕೊಂಡು, ಪ್ರವಾಹ ಪತಿತನಾಗಿ, ಅಂತರಾತ್ಮವನ್ನು ಸಂಪ್ರದಾಯಕ್ಕೆ ಒತ್ತೆ ಇಟ್ಟು ಬದುಕಲಾರೆ. ಇನ್ನು, ಪಾರಲೌಕಿಕ ಅಧ್ಯಾತ್ಮಿಕ ಸುಖವಾದರೂ ಸಿಕ್ಕಿದೆಯೇ? ಎಂದರೆ ನಿನ್ನ ಅನುಗ್ರಹ ಇಲ್ಲದ ಕಾರಣ ಅದೂ ಸಿಕ್ಕಿಲ್ಲ. ನನ್ನನ್ನು ಹುಟ್ಟಿಸುವ ಬದಲು ಒಂದು ಗಿಡಮರವನ್ನಾದರೂ ಸೃಷ್ಟಿಸಿದ್ದರೆ ಅದರಿಂದ ಲೋಕಕ್ಕೆ ಮಹದುಪಕಾರವಾಗುತ್ತಿತ್ತು."

ಸಂಸಾರ ಹೇಯ ಸ್ಥಲದಲ್ಲಿ ಬರುವ ಪರಿತಾಪವನ್ನು ಈ ವಚನವು ಬಹುಶಕ್ತಿಶಾಲಿಯಾಗಿ ಚಿತ್ರಿಸಿದೆ. ಕೆಲವು ಮಹಾನ್ ಪಂಡಿತರು ಈ ವಚನವನ್ನು ಧರ್ಮಪಿತರು ಲಿಂಗೈಕ್ಯರಾಗುವ ಮುನ್ನ ಹಾಡಿದಂತೆ ತಮ್ಮ ಬರಹಗಳಲ್ಲಿ, ಭಾಷಣಗಳಲ್ಲಿ ಚಿತ್ರಿಸುತ್ತಾರೆ. ಅದು ಮೂರ್ಖತನದ ಪರಮಾವಧಿ. ಧರ್ಮಪಿತರು ಅಧ್ಯಯನ, ತಪಸ್ಸು, ಚಿಂತನೆ ಮಾಡುತ್ತ ಪರಿಪಕ್ವವಾಗುತ್ತ ಹೋದಂತೆ ತಾವೊಂದು ಮಣಿಹವನ್ನು ಹೊತ್ತು ಲಿಂಗದೇವನ ಆದೇಶವನ್ನು ಪೂರ್ಣಗೊಳಿಸಲು ಬಂದವರು ಎಂಬುದನ್ನು ಅರಿತರು. ಆ ಹಂತದಲ್ಲಿ, ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು. ಎಂದು ಘೋಷಿಸಿದರು. ಲಿಂಗೈಕ್ಯರಾಗುವಾಗ "ಅಯ್ಯಾ, ಹಿಂದೆ ನಾನು ಮಾಡಿದ ಮೆರಹಿಂದ ಬಂದೆನು ಈ ಭವದಲ್ಲಿ" ಎಂದು ತಮ್ಮ ಜೀವನದ ಸಿಂಹಾವಲೋಕನ ಮಾಡಿಕೊಳ್ಳುತ್ತ "ನೀವು ಕಳಿಸಿದ ಬೆಸನು ಸಂದಿತ್ತು. ಇನ್ನು ಕೂಡಿಕೊಳ್ಳಾ ಲಿಂಗದೇವ" ಎಂದು ಹೇಳುತ್ತಾರೆ. ಅಂತಹ ಉನ್ನತ ಸ್ಥಿತಿಯನ್ನು ಅರಿಯಲಾರದೆ ಅಕಟಕಟಾ ಶಿವ ನಿನಗಿನಿತು ಕರುಣೆಯಿಲ್ಲ ಎಂಬ ವಚನವನ್ನು ಲಿಂಗೈಕ್ಯರಾಗುವಾಗ ಹೇಳಿಸುವುದು ಧರ್ಮಪಿತ ಬಸವಣ್ಣನವರಿಗೆ ಮಾಡುವ ಮಹಾನ್ ಅಪಚಾರವೇ ಸರಿ!

65. ದೇವನೊಡನೆ ಮುನಿಸು

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ
ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ
ಬೇಡನ ಕೈಲಾಸಕೊಯ್ದೆಯಯ್ಯಾ
ಎನ್ನನೇತಕೊಲ್ಲೆ ಕೂಡಲಸಂಗಮದೇವಾ? - ಬ.ವ.ದೀ- 63

ಪಾಶುಪತಾಸ್ತ್ರವನ್ನು ಪಡೆಯಲು ಕೈಲಾಸ ಪರ್ವತಕ್ಕೆ ಅರ್ಜುನನು ಹೋದ. ಒಂದು ಕಾಡು ಹಂದಿಯನ್ನು ಕೊಲ್ಲಲು ಶಿವ ಮತ್ತು ಅರ್ಜುನ ಇಬ್ಬರೂ ಪ್ರತ್ಯೇಕವಾಗಿ ಬಿಟ್ಟ ಬಾಣದಿಂದ ಹಂದಿ ಸತ್ತಿತು. ತನ್ನ ಬಾಣದಿಂದ ಹಂದಿ ಸತ್ತಿತು, ತನ್ನ ಬಾಣದಿಂದ ಸತ್ತಿತು ಎಂದು ಉಭಯತರೂ ಸೆಣಸ

ತೊಡಗಿದಾಗ ಅರ್ಜುನನು ಎದುರಾಳಿ ಶಿವನು ಎಂದರಿತು ಶರಣಾದ. ಆಗ ಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ನೀಡಿ ಕಳಿಸಿದ. ಇದನ್ನು ಪ್ರಸ್ತಾಪಿಸಿ ಧರ್ಮಪಿತ ಬಸವಣ್ಣನವರು ಹೇಳುತ್ತಾರೆ, "ಶಿವನೇ, ನಿನ್ನ ಲೀಲೆಗಳೇ ವಿಚಿತ್ರ! ಅರ್ಜುನನು ಚೂಪಾದ ಬಾಣದಿಂದ ನಿನ್ನನ್ನು ಘಾತಿಸಿದ. ಆದರೆ ಅವನಿಗೆ ಅಮೂಲ್ಯವಾದ ಪಾಶುಪತಾಸ್ತ್ರವನ್ನು ಕೊಟ್ಟೆ. ಹೂವಿನ ಬಾಣದಿಂದ ಹೊಡೆದ ಕಾಮನನ್ನು ಸುಟ್ಟುಹಾಕಿದೆ.

ಬೇಡರ ಕಣ್ಣಪ್ಪ ಹಗಲು ಇರುಳು ಪ್ರಾಣಿವಧೆ ಮಾಡುವವನು; ಅಂಥವನು ಬಾಯಲ್ಲಿ ತುಂಬಿ ಕೊಂಡು ತಂದು ಎಂಜಲು ನೀರನ್ನು ಸುರಿದ ಕಡಿದ ಪ್ರಾಣಿಯ ಮಾಂಸವನ್ನೇ ಲಿಂಗದ ಮುಂದಿಟ್ಟ. ಇಂಥವನಿಗೆ ಒಲಿದು ಅವನನ್ನು ಕೈಲಾಸಕ್ಕೆ ಒಯ್ದೆ. ನಾನಾದರೋ ಪ್ರಾಣಿ ಹಿಂಸೆ ಮಾಡುವವನಲ್ಲ, ಅಶುಚಿಯಾದವನಲ್ಲ. ನೇಮನಿಷ್ಠೆಯಿಂದ ನಿನ್ನನ್ನು ಪೂಜಿಸುವವನು. ಅಂದಾಗ ನನಗೇಕೆ ನೀನು ಒಲಿಯುತ್ತಿಲ್ಲ?! ಎಂಬುದು ನನ್ನ ಕಳವಳಕ್ಕೆ ಕಾರಣವಾಗಿದೆ.

ಈ ವಚನವು ಕೂಡ ಬಾಲ್ಯದಲ್ಲಿಯೇ ಬರೆಯಲ್ಪಟ್ಟುದಾದ್ದರಿಂದಲೂ, ಅರ್ಜುನನಿಗೆ, ಬೇಡರ ಕಣ್ಣಪ್ಪನಿಗೆ ಒಲಿದವನು ಶಿವನು ಆದುದರಿಂದ ಈ ವಚನದ ಭಾವಾರ್ಥಕ್ಕೆ ಅನುಗುಣವಾಗಿ ಶಿವ ಸೂಚಕವಾದ ಕೂಡಲಸಂಗಮದೇವ ವಚನಾಂಕಿತವನ್ನೇ ಇಡಲಾಗಿದೆ.

66. ದೇವನೊಲುಮೆಯ ಮಹಿಮೆ

ನೀನೊಲಿದರೆ ಕೊರಡು ಕೊನರುವುದಯ್ಯ,
ನೀನೊಲಿದರೆ ಬರಡು ಹಯನಹುದಯ್ಯ,
ನೀನೊಲಿದರೆ ವಿಷವು ಅಮೃತವಹುದಯ್ಯ,
ನೀನೊಲಿದರೆ ಸಕಲ ಪಡಿ ಪದಾರ್ಥಗಳು
ಇದಿರಲ್ಲಿರ್ಪವು ಲಿಂಗದೇವಾ. - ಬ.ವ.ದೀ- 64

ಪರಮಾತ್ಮನ ಒಲುಮೆ (Grace)ಯಲ್ಲಿ ಅದ್ಭುತವಾದ ಶಕ್ತಿ ಇದೆ. ಕೊರಡಿನಂತೆ ಜಡವಾಗಿ ಇರುವ ಜೀವನವು ಆದರ್ಶಗಳೆಂಬ ಚಿಗುರುಗಳಿಂದ ಶೋಭಿಸಬಹುದು. ಬರಡಾಗಿರುವ ನಿರುತ್ಸಾಹದ ಹೃದಯದಲ್ಲಿ ಉತ್ಸಾಹ, ಚೈತನ್ಯದ ಹಾಲು ಸ್ರವಿಸಬಹುದು. ವಿಷದಂತೆ ಎರಗಿದ ದ್ವೇಷಿಗಳ ಮತ್ಸರಿಗರ ದ್ವೇಷದ ವಿಷವು ಸಾಧಕ ಜೀವಿಗೆ ಅಮೃತವಾಗಿ ಪರಿವರ್ತನೆಗೊಳ್ಳಬಹುದು. ದೇವನ ಒಲುಮೆಯಿಂದ ವ್ಯಕ್ತಿಗೆ ಅತ್ಯಗತ್ಯವಾದ ಸಾಮಾನು ಸರಂಜಾಮು, ಪಡಿ - ಪದಾರ್ಥಗಳು ತಾನಾಗಿ ಬಂದು ಲಭ್ಯವಾಗಬಹುದು. ಲೋಕದ ಮಾನವರು ಏನೇ ಕಿರುಕುಳ ಕೊಟ್ಟರೂ ದೇವನ ಅನುಗ್ರಹವು ಸಂಕಷ್ಟಗಳಿಂದ ಪಾರು ಮಾಡಬಹುದು.

ಲಿಂಗಾಯತ ಧಾರ್ಮಿಕ ಸಂವಿಧಾನದಲ್ಲಿ ದೇವರೆ ಆತ್ಯಂತಿಕ ಶಕ್ತಿ ಮತ್ತು ಜೀವನದ ಸಾರ ಸರ್ವಸ್ವ.

67. ದೇವಾ, ಭಕ್ತನಲ್ಲಿ ಅವಗುಣವನರಸುವುದೆ ?

ಮೇರು, ಗುಣವನರಸುವುದೆ ಕಾಗೆಯಲ್ಲಿ ?
ಪರುಷ, ಗುಣವನರಸುವುದೆ ಕಬ್ಬುನದಲ್ಲಿ ?
ಸಾಧು, ಗುಣವನರಸುವನೆ ಅವಗುಣಿಯಲ್ಲಿ ?
ಚಂದನ, ಗುಣವನರಸುವುದೆ ತರುಗಳಲ್ಲಿ ?
ಸರ್ವಗುಣ ಸಂಪನ್ನ ಲಿಂಗವೆ,
ನೀನೆನ್ನಲ್ಲಿ ಅವಗುಣವನರಸುವುದೆ ಲಿಂಗದೇವಾ ? - ಬ.ವ.ದೀ- 65

ಈ ವಚನವನ್ನು ಎರಡು ರೀತಿ ಓದಲು, ಅರ್ಥವಿಸಲು ಬರುತ್ತದೆ. ಮೇರು, ಗುಣವನರಸುವುದೆ ಕಾಗೆಯಲ್ಲಿ? ಎಂದು ಓದಿಕೊಂಡರೆ ಆಗ ಮೇರು ಪರ್ವತವು ಕಾಗೆಯಲ್ಲಿ ಉದಾತ್ತ ಗುಣವನ್ನು ಅರಸುವುದೆ? ಇಲ್ಲ; ತನ್ನ ಮೇಲೆ ಹಾರುವ ಕಾಗೆಯನ್ನು ಹೊಂಬಣ್ಣದ ಪಕ್ಷಿಯನ್ನಾಗಿ ಮಾಡುತ್ತದೆ. ಹಾಗೆಯೇ ಪರುಷವು ಕಬ್ಬಿಣದಲ್ಲಿ ವಿಶೇಷ ಗುಣವನ್ನು ಹುಡುಕಲು ಹೋಗದೆ ಕಬ್ಬಿಣವನ್ನು ಸ್ಪರ್ಶಿಸಿ ಅದನ್ನು ಚಿನ್ನವನ್ನಾಗಿ ಪರಿವರ್ತಿಸುವುದು. ಸಾಧು ಗುಣವನರಸುವನೆ ಅವಗುಣಿಯಲ್ಲಿ ? ಇಲ್ಲ; ಸಾಧು ಸತ್ಪುರುಷರು ದುರ್ಗುಣಿಗಳಲ್ಲಿ ಲೋಪದೋಷ ಹುಡುಕಲು ಹೋಗದೆ ಅವರನ್ನು ಪರಿವರ್ತಿಸಿ ಉದಾತ್ತ ಗುಣದವರನ್ನಾಗಿ ಮಾಡುವರು. ಶ್ರೀ ಗಂಧದ ಗಿಡವು ಪಕ್ಕದಲ್ಲಿ ಬೆಳೆದಿರುವ ಸಾಮಾನ್ಯ ಗಿಡಗಳಲ್ಲಿ ಶ್ರೀ

ಗಂಧದ ಗುಣವನ್ನು ಹುಡುಕಲು ಹೋಗದೆ ತಾನು ತಾಡಿಸಿ ಅವುಗಳಿಗೂ ತನ್ನ ಸುವಾಸನೆಯನ್ನು ನೀಡುವುದು. ಅದೇ ರೀತಿ ದೇವನೇ, ನೀನು ಸರ್ವಗುಣ ಸಂಪನ್ನ ಪರಿಪೂರ್ಣ ಮೂರ್ತಿ. ನೀನು ನಿನ್ನ ದೃಷ್ಟಿಕೋನದಿಂದ ನನ್ನಲ್ಲಿ ಅವಗುಣಗಳನ್ನು ಹುಡುಕಲು ಹೋಗದೆ ನಿನ್ನ ಅನುಗ್ರಹದ ಸ್ಪರ್ಶದಿಂದ ನನ್ನನ್ನು ಪರಿಪೂರ್ಣ ಗೊಳಿಸಬೇಕು.

ಇನ್ನೊಂದು ಅರ್ಥದಲ್ಲಿ ಹೀಗಾಗುತ್ತದೆ. ಕಾಗೆಯಂತಹ ಕ್ಷುದ್ರ ಪಕ್ಷಿಯಲ್ಲಿ ಮೇರುವಿನಂತಹ ಉದಾತ್ತ ಗುಣವನ್ನು ಹುಡುಕಬಹುದೆ? ಕಬ್ಬಿಣದಂತಹ ಕೀಳು ಲೋಹದಲ್ಲಿ ಪರುಷವಂತಹ ಪರಿವರ್ತಿಸುವ ಗುಣ ಹುಡುಕಬಹುದೆ? ಕೆಳಮಟ್ಟದ ಒಬ್ಬ ವ್ಯಕ್ತಿಯಲ್ಲಿ ಸಾಧುಪುರುಷನ ಗುಣವನ್ನು ಅರಸಬಹುದೆ? ಸಾಮಾನ್ಯ ಗಿಡಗಳಲ್ಲಿ ಶ್ರೀಗಂಧದ ಗುಣವನ್ನು ಹುಡುಕಬಹುದೆ? ಹಾಗೆಯೇ ಸರ್ವಗುಣ ಪರಿಪೂರ್ಣನಾದ ಪರಮಾತ್ಮನೆ ನೀನು ನನ್ನಲ್ಲಿ ಸದುಗುಣಗಳನ್ನು ಹುಡುಕಬಹುದೆ? ನಾನು ಅಲ್ಪ ಜೀವಿ.

68. ಮನವೇ ಭವಬಂಧನಕ್ಕೆ ಕಾರಣ

ಭವಭವದಲ್ಲೆನ್ನ ಮನವು ಸಿಲುಕದೆ
ಭವರಾಟಾಳದೊಳು ತುಂಬದೆ, ಕೆಡಹದೆ
ಭವರೋಗ ವೈದ್ಯ ನೀನು, ಭವವಿರಹಿತ ನೀನು -
ಅವಧಾರು! ಕರುಣಿಸುವುದು ಲಿಂಗದೇವಾ. - ಬ.ವ.ದೀ- 66

ಆತ್ಮವು ಅನಂತ ಜನ್ಮಗಳಲ್ಲಿ ಸಾಗುತ್ತದೆ. ಹುಟ್ಟುವುದು ಸಾಯುವುದು ಇದೇ ಭವ. ಈ ಭವಕ್ಕೆ ಮುಖ್ಯ ಕಾರಣವಾದುದು ಮನಸ್ಸು. ಏತದ ಬಾನೆ ಹೇಗೆ ನೀರನ್ನು ತುಂಬಿಕೊಂಡು ಮೇಲೆ ಬರುತ್ತದೋ ಹಾಗೆ ಈ ಮನಸ್ಸು ಪಾಪ-ಪುಣ್ಯಗಳನ್ನು ಸಂಚಯಿಸುತ್ತದೆ, ಭವದಲ್ಲಿ ಸಿಲುಕಿಸುತ್ತದೆ. ಈ ರೀತಿ ಮನಸ್ಸು ಭವದಲ್ಲಿ ಸಿಲುಕದೆ, ಭವ ಚಕ್ರದಲ್ಲಿ ಸುತ್ತಿಸದೆ ಇರುವ ರೀತಿಯಲ್ಲಿ ನನ್ನ ಜೀವವನ್ನು ರಕ್ಷಿಸು. ದೇವಾ, ಭವ ವಿರಹಿತನಾದ ನೀನು ಭವರೋಗ ವೈದ್ಯನೂ ಅಹುದು! ಆದ್ದರಿಂದ ನನ್ನ ಕಡೆಗೆ ಕೃಪಾ ದೃಷ್ಟಿಯನ್ನು ಬೀರು ಲಿಂಗದೇವನೆ.

69. ಆಸೆಯೆಂಬ ಪಾಶ

ಆಸೆಯೆಂಬ ಪಾಶದಲ್ಲಿ ಭವಬಂಧನವಾಗಿರ್ದೆನಯ್ಯಾ
ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯಾ!
ಕರುಣಾಕರ, ಅಭಯಕರ, ವರದಾನಿ ನೀ ಕರುಣಿಸಯ್ಯಾ;
ಸಂಸಾರ ಬಂಧನವನು ಮಾಣಿಸಿ ಎನಗೆ ಕೃಪೆ ಮಾಡಿ,
ನಿಮ್ಮ ಶ್ರೀ ಪಾದ ಪದ್ಮದಲ್ಲಿ ಭ್ರಮರನಾಗಿರಿಸು
ಭಕ್ತಜನ ಮನೋವಲ್ಲಭ ಲಿಂಗದೇವಾ. - ಬ.ವ.ದೀ- 67

ವ್ಯಕ್ತಿಯ ಭವಬಂಧನಕ್ಕೆ ಅತಿ ಮುಖ್ಯ ಕಾರಣವೆಂದರೆ ಆಸೆ, ಅರ್ಥಾತ್ ಬಯಸುವಿಕೆ. ಇದರ ವೈಶಿಷ್ಟ್ಯವೆಂದರೆ ಒಂದಾದ ಮೇಲೆ ಒಂದನ್ನು ಇಷ್ಟಪಡುವಿಕೆ. ಹೀಗಾಗಿ ಆಸೆಯ ಹಗ್ಗದ ಸುತ್ತುಗಳು ಜಾಸ್ತಿಯಾಗುತ್ತ ಹೋಗುತ್ತವೆ. ಇದರಿಂದಾಗಿ ದೇವಾ, ನಿನ್ನ ಸ್ಮರಣೆ ಮಾಡಲು ಆಸೆಯು ಅವಕಾಶವನ್ನೇ ಮಾಡಿಕೊಡುವುದಿಲ್ಲ. ನೀನು ಕಾರುಣ್ಯದ ಹಸ್ತ ಉಳ್ಳವನು, ಸದಾ ಅಭಯ ನೀಡುವವನು ಮತ್ತು ಮಹಾದಾನಿ. ಆದ್ದರಿಂದ ನನ್ನ ಆಸೆ ಎಂಬ ಪಾಶವನ್ನು, ಸಂಸಾರ ಬಂಧನವನ್ನು ಹರಿ; ನಿನ್ನ ಕೃಪೆಯನ್ನು ನೀಡಿ ನಿನ್ನ ಪಾದ ಕಮಲದಲ್ಲಿ ದುಂಬಿಯನ್ನಾಗಿ ಮಾಡು. ಲಿಂಗದೇವಾ, ನೀನು ಭಕ್ತಜನರ ಮನಸ್ಸಿನ ಒಡೆಯನು.

70. ಶರಣರ ಸಂಗದ ಮಹತಿ

ಮಡಿಕೆಯ ಮಾಡುವಡೆ ಮಣ್ಣೆ ಮೊದಲು;
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು;
ಶಿವಪಥವರಿವಡೆ ಗುರುಪಥವೆ ಮೊದಲು
ಲಿಂಗದೇವರನರಿವಡೆ
ಶರಣರ ಸಂಗವೆ ಮೊದಲು - ಬ.ವ.ದೀ- 68

ಮಡಿಕೆ-ಕುಡಿಕೆಗಳನ್ನು ಮಾಡಬೇಕಾದರೆ ಮಣ್ಣು ಎಂಬ ಸಾಮಗ್ರಿ ಬೇಕು. ಆಭರಣಗಳನ್ನು ಮಾಡಬೇಕಾದರೆ ಬಂಗಾರ ಎಂಬ ಧಾತು ಬೇಕೇ ಬೇಕು. ಅದೇ ರೀತಿ ದಿವ್ಯ ಜೀವನದ ಪಥವನ್ನು

ಅರಿಯಬೇಕಾದರೆ ಗುರುವಿನ ಮಾರ್ಗದರ್ಶನ, ದೀಕ್ಷೆ ಬೇಕು. ಸೃಷ್ಟಿಕರ್ತ ಲಿಂಗದೇವನ ಸ್ವರೂಪವನ್ನು ಅರಿಯಬೇಕಾದರೆ ಶರಣರ ಸತ್ಸಂಗ ಬೇಕೇ ಬೇಕು.

ಈ ವಚನದ ಭಾವ ದ್ವಿಮುಖಿಯಾಗಿದೆ. ಒಂದು, ಗುರು ಕಾರುಣ್ಯದ ಮಹತ್ವ ಕುರಿತು ಹೇಳಿದರೆ ಇನ್ನೊಂದು, ಶರಣರ ಸಂಗದ ಮಹತ್ವ ಕುರಿತು ಹೇಳುತ್ತದೆ. ವ್ಯಕ್ತಿ ಮಾಡುವ ಸಹವಾಸ ಅವನ ಜೀವನದ ಪರಿಪೂರ್ಣತೆಗೆ ಕಾರಣವಾಗಬಹುದು. ಅಥವಾ ವಿನಾಶಕ್ಕೂ ಕಾರಣವಾಗಬಹುದು. ಸದಾ ಮೂಢಾಚರಣೆ ಮಾಡುವವರ ಒಡನಾಟದಲ್ಲಿದ್ದರೆ ಎಂತಹ ವಿಚಾರಶೀಲನೂ ಮೂಢಾತ್ಮನಾಗಬಹುದು. ಬಹುದೇವತೋಪಾಸಕರ ಒಡನಾಟದಲ್ಲಿದ್ದರೆ ಎಂತಹ ಪ್ರಸಂಗದಲ್ಲೂ ವ್ಯಕ್ತಿಯ ಮನಸ್ಸು ಏಕದೇವೋಪಾಸನೆಗೆ ಬದ್ಧವಾಗದು. ಮೂಢ ನಂಬಿಕೆಯಿಂದ ಭಯಗ್ರಸ್ತವಾದ ಸ್ಥಿತಿಯನ್ನು ಪಡೆದುಕೊಂಡು ಹಲವಾರು ದೇವತೆಗಳ ಉಪಾಸನೆಗೆ ಮನಸೋಲುವುದು. ಶರಣರ ಸಂಗದಲ್ಲಿ ಒಡನಾಡಿದರೆ ಲಿಂಗದೇವರ ನಿಜ ಸ್ವರೂಪವನ್ನು ಅರಿತುಕೊಂಡು ಏಕದೇವೋಪಾಸನೆಗೆ ಬದ್ಧವಾಗುವುದು.

71. ಗುರು ಪಥವ ಮೀರಿ ಮಾಡುವ ನೇಮ ಸಲ್ಲವು

ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!
ತನುವುದ್ದೇಶ, ಮನವುದ್ದೇಶವಾಗಿ,
ಮಾಡುವ ನೇಮ ಸಲ್ಲವು! ಸಲ್ಲವು!
ಗುರು ಪಥವ ಮೀರಿ ಮಾಡುವ ನೇಮ ಸಲ್ಲವು! ಸಲ್ಲವು!
ಲಿಂಗದೇವಯ್ಯಾ, ಇವು ನಿಮ್ಮ ನಿಜದೊಳಗೆ ನಿಲ್ಲವು; ನಿಲ್ಲವು!
- ಬ.ವ.ದೀ- 69

ಪ್ರತಿಯೊಂದು ಧರ್ಮಕ್ಕೆ ತನ್ನ ಸಿದ್ಧಾಂತ, ಸಂವಿಧಾನದ ಆಧಾರದ ಮೇಲೆ ಕೆಲವು ವಿಧಿ-ವಿಧಾನಗಳು, ಧಾರ್ಮಿಕ ನಿಯಮಗಳು, ವ್ರತಗಳು ವಿಧಿಸಲ್ಪಟ್ಟಿರುತ್ತವೆ. ಹೇಗೆ ಒಂದು ದೇಶದ ಸಂವಿಧಾನಕ್ಕೆ ಬದ್ಧನಾಗಿ ನಡೆಯುವವನು ನಿಜವಾದ ನಾಗರಿಕ ಅಥವಾ ಪ್ರಜೆ ಆಗಿರುವನೋ, ಅದನ್ನು ಉಲ್ಲಂಘಿಸಿದವನು ದೇಶ ದ್ರೋಹಿ, ಅಪರಾಧಿ ಆಗುತ್ತಾನೋ ಹಾಗೆ ತನ್ನ ಧರ್ಮದ ಆಚರಣೆಗೆ ಹೊರತಾದ, ವಿರುದ್ಧವಾದ ಆಚರಣೆ ಮಾಡುವವನು ಧರ್ಮದ್ರೋಹಿ ಆಗುತ್ತಾನೆ. ಲಿಂಗಾಯತ ಧರ್ಮದಲ್ಲಿ ಪಂಚ ಮಹಾಪಾತಕಗಳೆಂದರೆ ಗುರು ದ್ರೋಹ, ಲಿಂಗ ದ್ರೋಹ, ಜಂಗಮ ದ್ರೋಹ, ಪ್ರಸಾದ ದ್ರೋಹ, ಆಚಾರ ದ್ರೋಹ.

1. ಗುರು ದ್ರೋಹ:- ತನ್ನ ಧರ್ಮಗುರು ಏನನ್ನು ಬೋಧಿಸಿರುವರೋ ಅದಕ್ಕೆ ಹೊರತಾಗಿ ಅಥವಾ ವಿರುದ್ಧವಾಗಿ ಆಚರಿಸುವುದು.

2. ಲಿಂಗ ದ್ರೋಹ:- ಲಿಂಗಾಯತನೆಂದು ಹೇಳಿಕೊಳ್ಳುವುದು ದಾಖಲೆಗಳಲ್ಲಿ ಬರೆಯುವುದು, ಕೊರಳಲ್ಲಿ ಇಷ್ಟಲಿಂಗವಿರದು, ಪೂಜೆ ಮೊದಲೇ ಇರದು. ತನ್ನಿಷ್ಟ ಲಿಂಗದ ಹೊರತಾಗಿ ಅನ್ಯ ದೈವಗಳನ್ನು ಪೂಜಿಸುವುದು.

3. ಜಂಗಮ ದ್ರೋಹ:- ತನ್ನ ಧಾರ್ಮಿಕ ಸಮಾಜವು ಆಚರಿಸಬೇಕಾದ ಕಟ್ಟು ಪಾಡುಗಳನ್ನು ಮೀರಿ ಅನ್ಯ ಮಾರ್ಗವನ್ನು ಅವಲಂಬಿಸುವುದು. ಉದಾಹರಣೆಗೆ ಜೋತಿಷ್ಯ ನಂಬುವುದು, ಹೋಮ-ಹವನಾದಿಗಳನ್ನು ಮಾಡುವುದು, ಕಡುಬು-ಪೀತಾಂಬರ ಮುಂತಾದ ಅಮೂಲ್ಯ ವಸ್ತುಗಳನ್ನು ಯಜ್ಞದ ಮೂಲಕ ಬೆಂಕಿಗೆ ಆಹುತಿ ಮಾಡುವುದು ಮುಂತಾದ ಕ್ರಿಯೆ ತನ್ನ ಸಮಾಜಕ್ಕೆ ಎಸಗುವ ದ್ರೋಹ.

4. ಪ್ರಸಾದ ದ್ರೋಹ:- ಭೂತ-ಪ್ರೇತಗಳಿಗೆ ಹಿಡಿದ ನೈವೇದ್ಯ ತಿನ್ನದೆ ಇರುವುದು ಶರಣ ಧರ್ಮ. ಇದನ್ನು ಉಲ್ಲಂಘಿಸಿ ಏನೇನನ್ನೋ ಪ್ರಸಾದವೆಂದು ತಿನ್ನುವುದು. ಮೊಟ್ಟೆ, ಮೀನು, ಮಾಂಸ ಮುಂತಾದ ಮಾಂಸಾಹಾರ ಮಾಡುವುದು. ಸ್ನಾನ-ಪೂಜೆ, ತೀರ್ಥ-ಪ್ರಸಾದ ಸ್ವೀಕಾರವಿಲ್ಲದೆ ಆಹಾರ ಸೇವಿಸುವುದು-ಇವೆಲ್ಲ ಪ್ರಸಾದ ದ್ರೋಹ.

5. ಆಚಾರ ದ್ರೋಹ:- ಇನ್ನೂ ಅನೇಕ ಆಚರಣೆಗಳು ಇರುತ್ತವೆ. ತನ್ನ ಧರ್ಮಕ್ಕೆ ಹೊರತಾದ ಆಚರಣೆ ರೂಢಿಸಿಕೊಳ್ಳುವುದು, ತನ್ನ ಧರ್ಮದ ಆಚರಣೆ ಬಿಡುವುದು ಆಚಾರ ದ್ರೋಹ.

ನೋಡಿ ನೋಡಿ ಮಾಡುವ ನೇಮ ಸಲ್ಲವು

ಲಿಂಗಾಯತ ಸಂಸ್ಕೃತಿಯಲ್ಲಿ ಗಣಪತಿ ಕೂರಿಸುವುದು, ವರ ಮಹಾಲಕ್ಷ್ಮಿ, ನವಗ್ರಹ ಪೂಜೆ

ಇವೆಲ್ಲ ನಿಷಿದ್ಧ. ನಮ್ಮ (ತಂದೆ) ಮನೆಯಲ್ಲಿ ಕೂರಿಸುತ್ತಿರಲಿಲ್ಲ. ಆಗ ನಾವು ಅಕ್ಕಪಕ್ಕದವರನ್ನು ನೋಡಿ "ನಾವು ಕೂರಿಸೋಣ" ಎಂದರೆ ನಮ್ಮ ಅಜ್ಜಿ 'ನಾವು ಕೂರಿಸಬಾರದಂತೆ, ನಮಗೆ ಆಗಿ ಬರಲ್ಲವಂತೆ' ಎನ್ನುತ್ತಿದ್ದರು. ಇದರ ಹಿಂದೆ ಏಕದೇವೋಪಾಸನೆ ಇದೆ ಎಂಬುದು ಆಗ ನಮಗೆ ತಿಳಿಯಲಿಲ್ಲ. ವಚನ ಸಾಹಿತ್ಯ ಓದಿದ ಮೇಲೆ ಅರ್ಥವಾಗುತ್ತಿದೆ. ಅವರಿವರನ್ನು ನೋಡಿ, ಅವರನ್ನು ಅನುಕರಿಸುತ್ತ ಹಾಕಿಕೊಳ್ಳುವ ನೇಮ ಸಲ್ಲುವುದಿಲ್ಲ.

<u>ತನು ಉದ್ದೇಶವಾಗಿ ಮಾಡುವ ನೇಮ ಸಲ್ಲವು</u>

ಕೆಲವರಿಗೆ ಕೆಲವು ತಿನಿಸುಗಳು ಪ್ರಿಯವಾಗಿರುತ್ತವೆ ಎಂದುಕೊಳ್ಳುವ. "ನಮ್ಮ ದೇವರಿಗೆ (?) ನೈವೇದ್ಯಕ್ಕೆ ಅದೇ ಬೇಕೆಂಬುದು ನಮ್ಮ ನೇಮ." ಎಂದು ಭಕ್ತರನ್ನು ಕೇಳುವುದು. ಹಾಲಿನ ನೇಮ, ಹಾಲಿನ ಕೆನೆಯ ನೇಮ, ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ -ಹೀಗೆ ಶರೀರದ ಚಪಲತೆಯ ತೃಪ್ತಿಗಾಗಿ ಮಾಡಿಕೊಳ್ಳುವ ನೇಮ ಲಿಂಗದೇವನಿಗೆ ಇಷ್ಟವಾಗದು.

<u>ಮನ ಉದ್ದೇಶವಾಗಿ ಮಾಡುವ ನೇಮ ಸಲ್ಲವು</u>

ಶ್ರೇಷ್ಠ ಭಕ್ತಿ ಎಂದರೆ ಸಹಜ ಭಕ್ತಿ; ತನ್ನ ಆನಂದಕ್ಕಾಗಿ ದೇವನಿಗೆ ಶರಣಾಗಿ ಮಡುವ ಭಕ್ತಿ. ಕಾಮ್ಯ ಭಕ್ತಿ ಎಂದರೆ ಏನಾದರೂ ಇಷ್ಟಾರ್ಥ ಸಾಧನೆಗಾಗಿ ಹರಕೆ ಮಾಡಿಕೊಂಡು ಮಾಡುವ ಭಕ್ತಿ. ಇದು ಮನ ಉದ್ದೇಶವಾಗಿ ಮಾಡುವ ಭಕ್ತಿ.

ಸಾಮಾನ್ಯ ಜನರು ಕೇಳುತ್ತಾರೆ, "ನಾವು ಗೃಹಸ್ಥರು. ಹಲವಾರು ಅಪೇಕ್ಷೆ ಇರುವವರು. ಹಾಗಾದರೆ ನಾವು ಕಾಮ್ಯ ಭಕ್ತಿ ಮಾಡಬಾರದೆ?" ಎಂದು. ಶರಣರು ಸಹಜ ಭಕ್ತಿಯನ್ನು ಮಾಡಲು ಹೇಳುವ ಉದ್ದೇಶ ನಾವು ಅಂತಿಮವಾಗಿ ದೇವರನ್ನು ಪಡೆಯುವುದೇ ಆಗಿದೆ. ಆ ಮಟ್ಟಕ್ಕೆ ಏರಲಾರದವರು ಇಷ್ಟಾರ್ಥ ಸಿದ್ಧಿಗಾಗಿ ಭಕ್ತಿಯನ್ನು ಮಾಡಿದರೆ ತಪ್ಪೇನಿಲ್ಲ. ಆದರೆ ಆ ಭಕ್ತಿಯೇ ಗುರುಪಥವ ಮೀರಿ ಮಾಡುವುದಾಗಿರದೆ ತನ್ನ ಧರ್ಮದ ನಿಯಮದ ಚೌಕಟ್ಟಿನಲ್ಲಿಯೇ ಇರಬೇಕು.

ಗುರು ಪಥವ ಮೀರಿ ಮಾಡುವ ನೇಮ ಸಲ್ಲವು ಸಲ್ಲವು.

ಗುರು ಬಸವಣ್ಣನವರು ಹಾಕಿ ಕೊಟ್ಟ ಪಥ ಪಂಚ ತತ್ವಗಳ ಪಥ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಹೇಳುವರು:

ಶಿವ, <u>ಗುರು</u>ವೆಂದು ಬಲ್ಲಾತನೆ ಗುರು
ಶಿವ, <u>ಲಿಂಗ</u>ವೆಂದು ಬಲ್ಲಾತನೆ ಗುರು
ಶಿವ, <u>ಜಂಗಮ</u>ವೆಂದು ಬಲ್ಲಾತನೆ ಗುರು
ಶಿವ, <u>ಪ್ರಸಾದ</u>ವೆಂದು ಬಲ್ಲಾತನೆ ಗುರು
ಶಿವ <u>ಆಚಾರ</u>ವೆಂದು ಬಲ್ಲಾತನೆ ಗುರು
ಇಂತೀ ಪಂಚವಿಧವೆ ಪಂಚಬ್ರಹ್ಮವೆಂದರುಹಿದ
ಸಂಗನ ಬಸವಣ್ಣನು ಎನಗೆಯೂ ಗುರು
ನಿನಗೆಯೂ ಗುರು ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ.

ಗುರು ಬಸವಣ್ಣನವರು ಕೊಟ್ಟ ಪಥ 5 ದಾರಿಗಳಿಂದ (Track) ಕೂಡಿದ್ದು ಈ 5 ತತ್ವಗಳನ್ನು ದಾಟಿ, ಉಲ್ಲಂಘಿಸಿ ಅನುಯಾಯಿಯಾದವನು ಹಾಕಿಕೊಳ್ಳುವ ನಿಯಮ ಲಿಂಗಾಯತನಿಗೆ ಸಲ್ಲದವು. ಆದ್ದರಿಂದ ಅಂಥ ನೇಮಗಳು ಲಿಂಗದೇವನನ್ನು ಒಲಿಸಲಾರವು; ನಿಜವಾದ ಗುರಿಯನ್ನು ಮುಟ್ಟಲಾರವು.

<u>72. ಗುರು ವಚನವು ಪರುಷದಂತೆ</u>

ಗುರುವಚನವಿಲ್ಲದೆ ಲಿಂಗವೆಂದೆನಿಸದು
ಗುರುವಚನವಿಲ್ಲದೆ ನಿತ್ಯವೆಂದೆನಿಸದು
ಗುರುವಚನವಿಲ್ಲದೆ ನೇಮವೆಂದೆನಿಸದು
ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ, ನಮ್ಮ ಲಿಂಗದೇವಾ?

- ಬ.ವ.ದೀ- 70

ಗುರು ಎಂಬ ಪದಕ್ಕೆ 2 ಅರ್ಥವ್ಯಾಪ್ತಿ ಇದೆ. 1. ಧರ್ಮಗುರು 2. ದೀಕ್ಷಾ/ ಶಿಕ್ಷಾಗುರು. ಎರಡೂ ಅರ್ಥಗಳ ಹಿನ್ನೆಲೆಯಲ್ಲಿ ಈ ವಚನದ ಮರ್ಮ ತಿಳಿಯೋಣ.

1. ಅ) ಧರ್ಮಗುರು ಬಸವಣ್ಣನವರು ಕೊಟ್ಟುದು ಇಷ್ಟಲಿಂಗ. ಇದು ಲಿಂಗಾಯತರಿಗೆ ಪೂಜಾರ್ಹ.

ಆ) ದೀಕ್ಷಾ ಗುರುವು ಚಿತ್ಕಳೆಯನ್ನು ತುಂಬಿ ಶಿಷ್ಯನಿಗೆ ಅನುಗ್ರಹಿಸಿದಾಗ ಮಾತ್ರ ಇಷ್ಟಲಿಂಗವು ಶಿಲೆ ಎಂಬ ಭಾವವನ್ನು ಕಳೆದುಕೊಂಡು ಇಷ್ಟಲಿಂಗವಾಗಿ ದೈವೀಕರಣಗೊಳ್ಳುವುದು.

2. ಅ) ಧರ್ಮಗುರು ಬಸವಣ್ಣನವರು ಬೋಧಿಸಿದ ತತ್ವಗಳನ್ನು ಬೋಧಿಸುವವನು ಮಾತ್ರ ನಿಜ ಜಂಗಮ. ಅದಕ್ಕೆ ಹೊರತಾದುದು, ವಿರುದ್ಧವಾದುದನ್ನು ಬೋಧಿಸುವವನು ಜಂಗಮನಾಗನು.

ಆ) ಜಂಗಮತ್ವವು ಹುಟ್ಟಿನಿಂದ ಬರದು. ಗುರುವಿನಿಂದ ಜಂಗಮೋಪದೇಶ ಪಡೆದಾಗ ಮಾತ್ರ ಜಂಗಮತ್ವವು ಬರುತ್ತದೆ.

3. ಕರ್ಮಗಳಲ್ಲಿ ಎರಡು ಬಗೆ ನಿತ್ಯ ಮತ್ತು ನೈಮಿತ್ತಿಕ ಎಂಬುದಾಗಿ. ಕೆಲವು ಆಚರಣೆಗಳನ್ನು ತಪ್ಪದೆ ನಿತ್ಯವೂ ಮಾಡುತ್ತಿರಬೇಕು. ವಿಶೇಷ ದಿನಗಳಂದು ಅಥವಾ ವಿಶೇಷ ಸಂದರ್ಭದಲ್ಲಿ ಮಾಡುವುದು ನೈಮಿತ್ತಿಕ.

ಅ) ನಿತ್ಯ ಮತ್ತು ನೈಮಿತ್ತಿಕ ಎರಡೂ ಧರ್ಮಗುರುವಿನಿಂದ, ಧರ್ಮಶಾಸ್ತ್ರದಿಂದ ಅನುಮತಿ ಪಡೆದವು ಆಗಿರಬೇಕು.

ಆ) ಧರ್ಮಗುರು ಮತ್ತು ಧರ್ಮಶಾಸ್ತ್ರದಿಂದ ಅನುಮತಿ ಪಡೆದವನ್ನು ಮಾತ್ರ ಗುರುವು ಬೋಧಿಸಬೇಕು. ಉದಾ: ಅಷ್ಟಾವರಣ ಧಾರಣೆ ಅನುಮೋದಿತ. ತಾಯಿತ ಕಟ್ಟುವುದು, ಚೀಟಿ ಕಟ್ಟುವುದು. ಕರಿದಾರ ಕಟ್ಟುವುದು, ನಿಂಬೆಹಣ್ಣು - ತೆಂಗಿನಕಾಯಿ ಮಂತ್ರಿಸಿ ಕೊಡುವುದು ಲಿಂಗಾಯತ ಗುರುವಿಗೆ ನಿಷೇಧಿತ ಆಚರಣೆ. ಭಕ್ತರು ಅನುಗ್ರಹವನ್ನು ಬೇಡಿದಾಗ ವಿಭೂತಿ ಗಟ್ಟಿ ಮಂತ್ರಿಸಿಕೊಡಬಹುದು. ರುದ್ರಾಕ್ಷಿ ಕೊಡಬಹುದು; ಷಡಕ್ಷರಿ ಮಂತ್ರೋಪದೇಶ ಮಾಡಬಹುದು. ಲಿಂಗಧಾರಣೆ ಮಾಡಬಹುದು ಕರುಣೋದಕ ಕರುಣ ಪ್ರಸಾದ ಕೊಡಬಹುದು. ಅಷ್ಟಾವರಣಕ್ಕೆ ಹೊರತಾಗಿ ಕೊಡಬಾರದು.

4. ಧರ್ಮಗುರು ಬಸವಣ್ಣನವರು ಕಲಿಸಿಕೊಟ್ಟ ಗುರು-ಲಿಂಗ-ಜಂಗಮ ಪೂಜೆ, ಕರುಣೋದಕ-ಕರುಣಪ್ರಸಾದಕ್ಕೆ ಹೊರತಾದ ನೇಮಗಳನ್ನು ಜನರಿಗೆ ವಿಧಿಸಬಾರದು. ತಲೆ ಇಲ್ಲದ ಮುಂಡಕ್ಕೆ ಪಟ್ಟಕಟ್ಟುವುದು ಎಷ್ಟು ಅಮಂಗಲವೋ ಹಾಗೆ ಧರ್ಮ ಗುರು ಬಸವಣ್ಣನವರ ಆದೇಶ ಮೀರುವುದೂ ಅಷ್ಟೇ ಅನಿಷ್ಟಕರ.

ಕೆಲವರು ಇಷ್ಟಲಿಂಗ ದೀಕ್ಷೆಯನ್ನು ಅಧಿಕೃತವಾಗಿ ಪಡೆಯದೆ, ಮಂತ್ರೋಪದೇಶ ಹೊಂದದೆ ಹಾಗೆಯೇ ಇಷ್ಟಲಿಂಗವನ್ನು ಪೂಜಿಸುವರು. ಅದು ಸಹ ತಲೆಯಿಲ್ಲದ ಮುಂಡಕ್ಕೆ ಪಟ್ಟವ ಕಟ್ಟಿದಂತೆ ನಿರರ್ಥಕ! ಆ ರೀತಿ ಅನುಸರಿಸುವವರು ಧರ್ಮಗುರು ದೀಕ್ಷಾಗುರು ಇಬ್ಬರಿಗೂ ದೂರವಾಗುವ ಉಭಯ ಭ್ರಷ್ಟರು. ಇಂಥವರಿಗೆ ಲಿಂಗದೇವನು ಅನುಗ್ರಹಿಸುವುದಿಲ್ಲ.

5. ವಿಭೂತಿ ಸ್ಥಲ.

ಮೊದಲು ಅಜ್ಞಾನಿಯಾಗಿ ಭವಿತನದಲ್ಲಿ ಸಾಕಷ್ಟು ಜನ್ಮಗಳಲ್ಲಿ, ಇದೇ ಜನ್ಮದಲ್ಲಿ ಬಹುಕಾಲ ಬಳಲಿದ ಜೀವಾತ್ಮನಲ್ಲಿ ಎಚ್ಚರ ಉಂಟಾಯಿತು.

1. ನಾನು ಯಾರು? ಎಂಬ ಪ್ರಶ್ನೆ ಮೂಡಿತು. ನಾನೆಂದರೆ ಕೇವಲ ದೇಹ ಕೈಕಾಲು ಕಣ್ಣು ಮೂಗುಬಾಯಿ ಅಲ್ಲ. ನಾನು ಎಂದರೆ ಆತ್ಮ. ಅದು ಈ ದೇಹದಲ್ಲಿ ನೆಲದ ಮರೆಯ ನಿಧಾನದಂತೆ, ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದೆ. ಈ ಎಚ್ಚರ ಮೂಡಿದ ಸ್ಥಿತಿಯೇ ಪಿಂಡಸ್ಥಲ.

2. ಈ ರೀತಿ ದೇಹದಲ್ಲಿ ಇರುವ ಆತ್ಮವು ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಪರಮಾತ್ಮನ ಒಂದು ಅಂಶ ಎಂಬ ಅರಿವು ಮೂಡಿದುದೇ ಪಿಂಡಜ್ಞಾನ ಸ್ಥಲ.

3. ಈ ಅರಿವು ಮೂಡಿದ ಮೇಲೆ ಜೀವಿಯಲ್ಲಿ ಒಂದು ಬಗೆಯ ತಳಮಳ ಶುರುವಾಗಿ ತನ್ನ ಮೂಲ ನೆಲೆಯಾದ ಪರಮಾತ್ಮನನ್ನು ಅರಿಯಬೇಕು, ಸೇರಬೇಕು ಎಂಬ ಉತ್ಕಟ ಹಂಬಲವು ಉಂಟಾಗುವುದು. ಇದೇ ಸಂಸಾರ ಹೇಯ ಸ್ಥಲ. ಪೂರ್ವಾರ್ಧದಲ್ಲಿ, ಕೇವಲ ಲೌಕಿಕ ಸುಖಾಪೇಕ್ಷೆಯಲ್ಲಿ ನಿರತನಾಗು-ವುದರಲ್ಲಿ ನಿರಾಸಕ್ತಿಯುಂಟಾಗುತ್ತದೆ. ಸಾಹಿತ್ಯಾಧ್ಯಯನ ಮಾಡುವುದರಲ್ಲಿ ಆಸಕ್ತಿ ಬೆಳೆಯುತ್ತದೆ.

4. ಲಿಂಗದೇವನು ಈ ಹಂಬಲವನ್ನು ಕೇಳಿಸಿಕೊಂಡನೇನೋ ಎಂಬಂತೆ ದೇವನ ಪ್ರತಿನಿಧಿಯಾಗಿ ಸದ್ಗುರುವಿನ ದರ್ಶನವಾಗುತ್ತದೆ. ಗುರುವಿನ ಕಾರುಣ್ಯವಾಗುತ್ತದೆ. ಈ ಕಾರುಣ್ಯ ಒಮ್ಮೆಗೇ ಆಗಬಹುದು ಅಥವಾ ಹಂತ ಹಂತವಾಗಿ ಆಗಬಹುದು. ಸಾತ್ವಿಕ ಮತ್ತು ಪ್ರೌಢ ಹಿನ್ನೆಲೆ ಇದ್ದರೆ ಒಂದೇ ಬಾರಿಗೆ ಆಗಬಹುದು. ಗುರುವು 1. ವಿಭೂತಿ ಧರಿಸಿ 2. ರುದ್ರಾಕ್ಷಿ ಧರಿಸಿ 3. ಚಿತ್ಕಳೆ ತುಂಬಿದ ಇಷ್ಟಲಿಂಗವನ್ನು ಕರಕಮಲಕ್ಕೆ ನೀಡಿ 4. ಮಂತ್ರೋಪದೇಶವನ್ನು ಮಾಡಿ ಪೂರ್ವಾಶ್ರಯ ನಿರಸನ ಮಾಡಿ, ಭಕ್ತಿ ಸ್ಥಲಕ್ಕೆ ಏರಿಸುವನು.

ಒಂದು ವೇಳೆ ಅನುಗ್ರಹ ಬಯಸುವ ವ್ಯಕ್ತಿಗೆ ಪೂರ್ವಭಾವಿ ಸಂಸ್ಕಾರ ಏನೂ ಇಲ್ಲದಿದ್ದರೆ ಮೊದಲು ವಿಭೂತಿ ಧಾರಣೆ ಮಾಡಲು ಪ್ರೇರಣೆ ನೀಡುವನು. ನಂತರ ರುದ್ರಾಕ್ಷಿ ಧಾರಣೆಗೆ ಪ್ರೇರಣೆ ನೀಡುವನು. ಮಂತ್ರದೀಕ್ಷೆಯ ಮೂಲಕ ಜಪತಪ ಕಲಿಸುವನು. ಮುಮುಕ್ಷುವು ಪೂರ್ಣ ಆಸಕ್ತಿ ಹೊಂದುತ್ತಲೇ ಲಿಂಗಧಾರಣೆ ಮಾಡುವನು.

73. ಪಾಪಿಗೂ ಭವಿಷ್ಯವಿದೆ

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ;
ಕಹಿ ಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
ಸಿಹಿಯಾಗದೆ ಮೂರು ದಿವಸಕ್ಕೆ?
ಹಲವು ಕಾಲ ಕೊಂದ ಸೊನೆಗಾರನ ಕೈಯ ಕತ್ತಿಯಾದಡೇನು
ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ?
ಲಲಾಟದಲ್ಲಿ ವಿಭೂತಿಯ ಬರೆಯಲು ಪಾಪ ಪಲ್ಲಟವಾಗದೆ,
ಲಿಂಗದೇವಾ? - ಬ.ವ.ದೀ- 71

ಲಿಂಗಾಯತ ಧರ್ಮ ಮಾನವೀಯತೆಯಿಂದ ಮಿಡಿಯುವ ಧರ್ಮ. ದೀನ ದಲಿತರು, ಪಾಪಿ-ಪತಿತರನ್ನು ಕಂಡು ಮಮ್ಮಲ ಮರುಗುವ ಧರ್ಮ. ಅದು ಈ ವಚನದಲ್ಲಿ ಝರಿಯಾಗಿ ಹರಿದಿದೆ.

ಅಯ್ಯಾ, ಈವರೆಗೂ ನೀನು ಅರಿತೋ ಅರಿಯದೆಯೋ ಪಾಪ ಮಾಡಿದ್ದಿರಬಹುದು. ನೀನಾಗಿ ಸ್ವಯಂ ಪ್ರೇರಣೆಯಿಂದ ಪಾಪ ಮಾಡಿರಬಹುದು. ಇನ್ನೊಬ್ಬರ ಪ್ರಚೋದನೆಯಿಂದಲೂ ಮಾಡಿರಬಹುದು. ಆ ಪಾಪವನ್ನು ಕಳೆದುಕೊಳ್ಳುವುದು ಹೇಗೆ ಎಂದು ಚಿಂತಿಸಬೇಡ. ಜಡ ವಸ್ತುವಾದ ಸೋರೆ ಕಾಯಿಯೊಂದು ಕಹಿ ಇರುತ್ತದೆ ಎಂದುಕೊ; ಅದಕ್ಕೆ ಒಂದು ತೂತು ಮಾಡಿ ಅದರೊಳಕ್ಕೆ ವಿಭೂತಿ ಪುಡಿ ತುಂಬಿದರೆ ಅದು 3 ದಿವಸಗಳಲ್ಲಿ ತನ್ನ ಕಹಿಯನ್ನು ಕಳೆದುಕೊಂಡು ಸಿಹಿಯಾಗುತ್ತದಲ್ಲವೆ? ಎಷ್ಟೋ ಕಾಲ ಅದೆಷ್ಟೋ ಜೀವ ಹತ್ಯೆ ಮಾಡಿದ ಕೊಲೆಗಾರನ ಕೈಯ ಕತ್ತಿಯು ಪರುಷವು ಮುಟ್ಟಲು ಬಂಗಾರವಾಗುವುದಲ್ಲವೆ? ಇಂಥ ಜಡವಸ್ತುಗಳೆ ಪರಿವರ್ತನೆಗೊಳ್ಳುವಾಗ ಚೈತನ್ಯಾತ್ಮಕನಾದ ನೀನು ದೈವೀಕರಣಗೊಳ್ಳುವುದು ಅಸಾಧ್ಯವೆ?

ಲಲಾಟದಲ್ಲಿ ವಿಭೂತಿ ಬರೆಯಲಿಕೆ
ಪಾಪ ಪಲ್ಲಟವಾಗದೆ, ಲಿಂಗದೇವಾ?

ಇಡೀ ವಚನದ ಸಾರವು ಕಡೆಯ ಈ ಎರಡು ವಾಕ್ಯಗಳಲ್ಲಿ ಘನೀಕೃತಗೊಂಡಿದೆ.

ಗುರುವು ವಾತ್ಸಲ್ಯ - ಅನುಕಂಪಪೂರಿತ ದೃಷ್ಟಿಯಿಂದ ಮುಮುಕ್ಷುವನ್ನು (ಅಥವಾ ಪಾಪಿಯನ್ನು) ನೋಡಿ ಹಣೆಯ ಮೇಲೆ ವಿಭೂತಿಯ ಎಳೆಗಳನ್ನು ಬರೆಯುತ್ತಲೇ ಪೂರ್ವಕರ್ಮ ನಿವೃತ್ತಿ ಆಗಿ ಹೊಸ ಜನ್ಮ ಉದಿಸುವುದು. ಇಲ್ಲಿ ಗುರುವಿನ ಅನುಗ್ರಹಕ್ಕೆ ಪ್ರಾಮುಖ್ಯತೆ ಇದೆ. ಇನ್ನೊಂದು ಅರ್ಥವನ್ನೂ ಹೀಗೆ ಮಾಡಬಹುದು. ವ್ಯಕ್ತಿಯು ಅತ್ಯಂತ ಪಾಪ ಕೃತ್ಯಗಳಲ್ಲಿ ತೊಡಗಿದ್ದಾಗ ಅವನಿಗೆ ಧಾರ್ಮಿಕ ಲಾಂಛನಗಳಲ್ಲಿ ನಂಬಿಕೆ ಇರದು. ಉಡಾಫೆಯ ಮಾತುಗಳನ್ನು ಆಡುತ್ತ ಧಾರ್ಮಿಕ ಲಾಂಛನಗಳನ್ನು ತಿರಸ್ಕರಿಸುವನು. ಅವನ ಅಂತರಂಗದಲ್ಲಿ ಬದಲಾವಣೆ ಆಗತೊಡಗುತ್ತಿದ್ದಂತೆಯೇ ಒಂದೊಂದೇ ಲಾಂಛನ ಕಾಣತೊಡಗುವುವು. ಮೊಟ್ಟ ಮೊದಲು ಪ್ರಕಟವಾಗುವುದು ವಿಭೂತಿ. ಹಣೆಯಲ್ಲಿ ವಿಭೂತಿಯ ಎಳೆಗಳು ಕಾಣುತ್ತಿದ್ದಂತೆಯೇ ವ್ಯಕ್ತಿಯ ಜೀವನದಲ್ಲಿ ಕತ್ತಲೆ ಹರಿಯುವ, ಪಾಪ ಪಲ್ಲಟವಾಗುವ ಕಾಲ ಬಂದಿದೆ ಎಂದು ಊಹಿಸಬಹುದು.

74. ನೊಸಲಿಗೆ ವಿಭೂತಿಯೇ ಶೃಂಗಾರ

ನೀರಿಂಗೆ ನೈದಿಲೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಸಮುದ್ರಕ್ಕೆ ತೆರೆಯೆ ಶೃಂಗಾರ
ಗಗನಕ್ಕೆ ಚಂದ್ರಮನೆ ಶೃಂಗಾರ
ಲಿಂಗದೇವನ ಶರಣರ ನೊಸಲಿಗೆ
ಶ್ರೀ ವಿಭೂತಿಯೇ ಶೃಂಗಾರ - ಬ.ವ.ದೀ- 70

ಪ್ರಕೃತಿಗೆ ಕನ್ನಡಿ ಹಿಡಿಯುವಂತೆ ನೀರು ಶಾಂತವಾಗಿ ತಿಳಿಯಾಗಿ ನಿಂತಿರುತ್ತದೆ

ಎಂದುಕೊಳ್ಳೋಣ. ಅದನ್ನು ನೋಡಲು ಅಪಾರ ಆನಂದವಾಗುತ್ತದೆ. ಮೇಲೆ ನೀಲ ಮುಗಿಲು ಅದರಲ್ಲಿ ತೇಲುವ ಮೋಡ, ಹಸಿರು ವೃಕ್ಷ ಸಮೂಹ ಎಲ್ಲವೂ ನಿಂತ ನೀರಿನಲ್ಲಿ ಬಿಂಬಿತವಾಗಿ ಆನಂದ ನೀಡುತ್ತವೆ. ಇಂಥ ಸರೋವರದ ಸೌಂದರ್ಯವನ್ನು ಹೆಚ್ಚಿಸುತ್ತವೆ, ಅದರಲ್ಲಿ ಅರಳುವ ತಾವರೆಗಳು. ಮಹಿಳೆಗೆ ಕೇವಲ ಭೌತಿಕ ಸೌಂದರ್ಯವೊಂದೇ ಮುಖ್ಯವಲ್ಲ. ಸದ್ಗುಣ ಸಮೂಹ ಬಹಳ ಮುಖ್ಯ. ಸಹನೆ - ಸೌಜನ್ಯ, ಬಂದ ಅತಿಥಿಗಳಿಗೆ ಸತ್ಕಾರ ಮಾಡುವಿಕೆ, ದಾಸೋಹ ಭಾವ ಮುಂತಾದ ಸದ್ಗುಣಗಳು ಅತ್ಯಗತ್ಯ. ಅವು ಗೃಹಿಣಿಯ ಚೆಲುವಿಕೆಯನ್ನು ಹೆಚ್ಚಿಸುತ್ತವೆ. ಸಮುದ್ರದ ಸೌಂದರ್ಯ ಹೆಚ್ಚಿಸುವವು ಅದರ ಮೇಲೆ ಏರಿಳಿಯುವ ತೆರೆಗಳು; ಅದೇ ರೀತಿ ಶುಭ್ರ ಆಕಾಶದ ಅಂದವನ್ನು ಹೆಚ್ಚಿಸುವುದು ತುಂಬು ಚಂದ್ರನ ಸಂಚಾರ. ಆಕಾಶದಲ್ಲಿ ಮಾಣಿಕ್ಯದಂತೆ ಹೊಳೆಯುತ್ತ (ಹುಣ್ಣಿಮೆಯ) ಚಂದಿರನು ಮನಸ್ಸಿಗೆ ಮುದ ನೀಡುವನು. ಅದೇ ರೀತಿ ಹಣೆಯ ಮೇಲೆ ಮೂಡುವ ಶುಭ್ರ ಬಿಳಿಯ ಬಣ್ಣದ ವಿಭೂತಿಯ ಎಳೆಗಳು ಮುಖದ ಚೆಲುವನ್ನು ಹೆಚ್ಚಿಸುತ್ತವೆ. ಕೆಲವು ಲಾಂಛನಗಳು ಮುಖದ ಚೆಲುವಿಕೆ ಕೆಡಿಸಿ, ವಿಲಕ್ಷಣವಾಗಿ ಕಾಣಿಸುವಂತೆ ಮಾಡಿದರೆ ವಿಭೂತಿ ಮುಖದ ಚೆಲುವನ್ನು ಹೆಚ್ಚಿಸುತ್ತದೆ. ಸಾತ್ವಿಕತೆಯನ್ನು ವರ್ಧಿಸುತ್ತದೆ; ಗಾಂಭೀರ್ಯ - ಗೌರವವನ್ನು ತಂದುಕೊಡುತ್ತದೆ. ನೋಡುಗನಲ್ಲಿ ಪೂಜ್ಯ ಭಾವವನ್ನು ಉಂಟು ಮಾಡುತ್ತದೆ.

ಹೀಗಾಗಿ ನಮ್ಮ ಲಿಂಗದೇವನ ಶರಣರ ಹಣೆಗೆ ವಿಭೂತಿಯೇ ಶೃಂಗಾರ. ಅದು ಶರಣರ ಮುಖದ ತೇಜಸ್ಸನ್ನು, ಗಾಂಭೀರ್ಯವನ್ನು ಹೆಚ್ಚಿಸುತ್ತದೆ.

75. ಅಯ್ಯಾ ಶ್ರೀ ಮಹಾವಿಭೂತಿಯಿಂದ ಕಂಡೆ

ಅಯ್ಯಾ ಶ್ರೀ ಮಹಾವಿಭೂತಿಯಿಂದ ಕಂಡೆ
ಆ ನಿಮ್ಮ ದಿವ್ಯ ಬೆಳಗಿನ ಹೊಳಹ ಈ ಎನ್ನ ಕರಸ್ಥಲದೊಳಗೆ,
ಅಯ್ಯಾ, ಶ್ರೀ ಮಹಾರುದ್ರಾಕ್ಷಿಯಿಂದ ಕಂಡೆ
ಆ ನಿಮ್ಮ ದಿವ್ಯ ಮೂರ್ತಿಯ ಗೂಢವ ಈ ಎನ್ನ ಕರಸ್ಥಲದೊಳಗೆ,
ಅಯ್ಯಾ, ಶ್ರೀ ಮಹಾ ಪಂಚಾಕ್ಷರಿಯಿಂದ ಕಂಡೆ
ಆ ನಿಮ್ಮ ದಿವ್ಯ ವಕ್ತ್ರಂಗಳ ಈ ಎನ್ನ ಕರಸ್ಥಲದೊಳಗೆ,
ನಾ ಬಯಸುವ ಬಯಕೆ ಕೈ ಸಾರಿತ್ತೆಂದು ಲಿಂಗದೇವಾ. -ಬ.ವ.ದೀ -73

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ ಕಾಂಡ -2, ಷಟಸ್ಥಲದ ಹೆಚ್ಚಿನ ವಚನಗಳು ಇದರಲ್ಲಿ ಈ ವಚನ ಸಂಖ್ಯೆ 1029, ಇದನ್ನು ಬಸವ ವಚನ ದೀಪ್ತಿಯಲ್ಲಿ 73ನೆಯ ವಚನವನ್ನಾಗಿ ಪೋಣಿಸಲಾಗಿದೆ. ಸಾಧಕ ಜೀವಿಯಲ್ಲಿ ಮೊದಲು ವಿಭೂತಿಯಲ್ಲಿ, ನಂತರ ರುದ್ರಾಕ್ಷಿಯಲ್ಲಿ ಶ್ರದ್ಧೆ ಬೆಳೆಯುವುದು. ಗುರುವು ಮಂತ್ರದ ಉಪದೇಶವನ್ನು ನಂತರ ಇಷ್ಟಲಿಂಗವನ್ನು ಕೊಡುವನು. ಹುಟ್ಟು ಲಿಂಗಾಯತರಿಗೆ ನಾವು ಎಲ್ಲವನ್ನೂ ಒಟ್ಟಾಗಿ ಕೊಡುತ್ತೇವೆ. ಧರ್ಮಗುರು ಬಸವಣ್ಣನವರು ಹೊಸ ಧರ್ಮವನ್ನು ಕಂಡು ಹಿಡಿದು ಎಲ್ಲರಿಗೂ ಕೊಡುವಾಗ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದರು ಎಂಬಂತೆ ಆಗಬಾರದೆಂದು ನಿಧಾನವಾಗಿ, ಹಂತ ಹಂತವಾಗಿ ಪರಿವರ್ತನೆ ಮಾಡಿದರು. ಪರಿವರ್ತನೆಯ ಸೂತ್ರವನ್ನು ಇಲ್ಲಿ ವಿವರಿಸಿದ್ದಾರೆ.

ಲಿಂಗದೇವಾ, ವಿಭೂತಿ ಧಾರಣೆಯ ಫಲವಾಗಿ ಅಂತಿಮವಾಗಿ ಕರಸ್ಥಲದ ಬೆಳಗಾದ ಇಷ್ಟಲಿಂಗವನ್ನು ಕಂಡೆ; ಅನಂತ ಕಾಲ ರುದ್ರಾಕ್ಷಿಯನ್ನು ಧರಿಸಿದ್ದರಿಂದ ಇದರ ಫಲವಾಗಿ ಕರಸ್ಥಲದ ಮಾಣಿಕ್ಯವಾದ ಇಷ್ಟಲಿಂಗವನ್ನು ಕಂಡೆ. ಎಷ್ಟೋ ಕಾಲದ ನನ್ನ ಕನಸು ನನಸಾಗುವಂತೆ ಬಯಸಿದ ಬಯಕೆ ಕೈ ಸಾರಿತು.

76. ವಿಭೂತಿ-ರುದ್ರಾಕ್ಷಿ-ಮಂತ್ರ

ಶ್ರೀ ವಿಭೂತಿ ರುದ್ರಾಕ್ಷಿಯೆ ಭಕ್ತಿ ಮುಕ್ತಿಗೆ ಸಾಧನವೊ ಎನ್ನ ತಂದೆ
ಶಿವಶಿವಾ ಎಂಬ ಮಂತ್ರ ಎನಗಮೃತಾರೋಗಣೆಯೊ ಎನ್ನ ತಂದೆ
ಲಿಂಗದೇವಯ್ಯಾ, ನಿಮ್ಮ ನಾಮದ ರುಚಿ ತುಂಬಿತೋ ಎನ್ನ ತನುವ.
-ಬ.ವ.ದೀ -74

ಅಷ್ಟಾವರಣಗಳಲ್ಲಿ ಗುರು-ಲಿಂಗ- ಜಂಗಮ ಪೂಜಾ ವಸ್ತುಗಳು, ವಿಭೂತಿ -ರುದ್ರಾಕ್ಷಿ-ಮಂತ್ರ ಪೂಜಾ ಸಾಧನಗಳು, ಕರುಣೋದಕ (ಪಾದೋದಕ) ಕರುಣ ಪ್ರಸಾದ (ಪ್ರಸಾದ) ಪೂಜಾ ಫಲಗಳು ಶ್ರೀ ವಿಭೂತಿ-ರುದ್ರಾಕ್ಷಿಗಳೂ ಭಕ್ತಿಗೂ ಸಾಧನ, ಮುಕ್ತಿಗೂ ಸಾಧನ.

ಶಿವಶಿವಾ ಎಂಬ ಪದವು ಅಮೃತ ಸಮಾನವಾಗಿ ಪುನರ್ಜನ್ಮ ಕೊಡುವ ಪದ ಲಿಂಗದೇವಾ, ನಿನ್ನ ನಾಮವೆಂಬ ಅಮೃತದ ರುಚಿಯು ಮನವನ್ನು ಮಾತ್ರವಲ್ಲ ತನುವನ್ನು ಸಹ ಆಕ್ರಮಿಸಿಕೊಂಡು ಅಪಾರ ಸಂತೃಪ್ತಿಯನ್ನು ಕೊಡುತ್ತಿದೆ. (ಗುರು ಬಸವಣ್ಣನವರ ಷಟಸ್ಥಲದ ಹೆಚ್ಚಿನ ವಚನಗಳಲ್ಲಿ 1030ನೆಯ ವಚನವಾಗಿ ಮುದ್ರಿತವಾಗಿರುವ ಈ ವಚನವನ್ನು 74ನೆಯ ಕ್ರಮಾಂಕಕ್ಕೆ ತೆಗೆದು ಕೊಳ್ಳಲಾಗಿದೆ.)

77. ವಿಭೂತಿಯ ಮಹಿಮೆ

ಸಕಲ ಕ್ರಿಯೆಗಳಿಗಿದು ಕವಚ
ಸಕಲ ವಶ್ಯಕ್ಕಿದು ಶುಭ ತಿಲಕ
ಸಕಲ ಸಂಪದಕ್ಕೆ ತಾಣವಿದು
ಅಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣು ಮಾತ್ರ ವಿಭೂತಿಯ ಪಣೆಯೊಳಿಡೆ
ಎಣಿಕೆಯಿಲ್ಲದ ಭವಪಾಶ ಪರಿವುದು
ತ್ರಿಣಯ ನೀನೊಲಿದು ಧರಿಸಿದೆಯೆಂದೆನೆ
ಆನು ಧರಿಸಿ ಬದುಕಿದೆ ಲಿಂಗದೇವಾ -ಬ.ವ.ದೀ -75

ಶೈವ ಮಾರ್ಗದ ಅತಿ ಮುಖ್ಯ ಲಾಂಛನ- ವಿಭೂತಿ. ಲಿಂಗಾಯತ ಧರ್ಮವು ಶಿವ ಸಂಸ್ಕೃತಿಯ ಧರ್ಮ. ಎಲ್ಲ ಕೆಲಸ ಕಾರ್ಯಗಳಲ್ಲೂ ವಿಭೂತಿ ಬೇಕೇ ಬೇಕು. ಕವಚವು ವಸ್ತುವಿಗೆ, ವ್ಯಕ್ತಿಗೆ ರಕ್ಷಣೆ ನೀಡುವಂತಹ ವಸ್ತು. ಅದೇ ರೀತಿ ವಿಭೂತಿಯ ಎಲ್ಲ ಕ್ರಿಯೆಗಳಿಗೂ ಕವಚವಿದ್ದಂತೆ. ನಾವು ಮಾಡುವ ಪೂಜೆಗಾಗಲಿ ಇನ್ನಿತರ ಕಾರ್ಯಗಳಿಗಾಗಲೀ ವಿಘ್ನವು ಬರಬಾರದು ಎಂದೇ ಈ ವಿಭುತಿ ಎಂಬ ದಿವ್ಯ ಆವರಣ (ಕವಚ) ವನ್ನು ಬಳಸುವುದು. ಕೆಲವು ಕನರು ಇನ್ನಿತರರನ್ನು ವಶೀಕರಣ ಮಾಡಿಕೊಳ್ಳಬೇಕೆಂದು ಏನೇನೋ ತಂತ್ರ ವಿದ್ಯೆಗಳನ್ನು ಪ್ರಯೋಗಿಸುವರು. ವಿಭೂತಿಯು ಎಲ್ಲರನ್ನು ಸಾತ್ವಿಕ ಮಾರ್ಗದಿಂದ ವಶೀಕರಣ ಮಾಡಿಕೊಳ್ಳುವ ಲಾಂಛನ. ಹಣೆಗೆ ಸಾತ್ವಿಕ, ಗಂಭಿರ ಭಾವ ಒದಗಿಸುವ ತಿಲಕ. ವಿಭೂತಿಯ ಧಾರಣೆಯಿಂದ ಸಂಪತ್ತು ಸಂಗ್ರಹವಾಗುವುದು. ದುಡಿಮದು ಕೈಗೆ ಹತ್ತುವುದು ಅಸಾಧ್ಯವಾದುದು ಸಾಧ್ಯವಾಗುವುದು, ಅಭೇದ್ಯವಾದುದು ಭೇದ್ಯವಾಗುವುದು. ಮೂರಳೆಯ ವುಭುತಿಯ ಮಹಿಮೆಯನ್ನು ಬಣ್ಣಿಸಲು ಸಾಧ್ಯವಿಲ್ಲ. ಅಣುವಿನಷ್ಟು ವಿಭೂತಿಯನ್ನು ಹಣೆಯಲ್ಲಿ ಇಡಲು ಭವಪಾಶವನ್ನು ಹರಿಯುವುದು.

ತ್ರಿನಯನನಾದಂತಹ ಶಿವನೇ, ಆದಿಯಲ್ಲಿ ನೀನು ಧರಿಸಿದೆ. ಅದನ್ನು ಅನುಕರಿಸಿ ನಾನು ಧರಿಸಿ, ಲಿಂಗದೇವನ ಒಲುಮೆಗೆ ಪಾತ್ರನಾದೆನು.

78. ಮಂತ್ರಜಪದ ಮಹತ್ವ

ಕರಿಯಂಜುವುದು ಅಂಕುಶಕ್ಕಯ್ಯ !
ಗಿರಿಯಂಜುವುದು ಕುಲಿಶಕ್ಕಯ್ಯ!
ತಮಂಧಮಂಜುವುದು ಜ್ಯೋತಿಗಯ್ಯ!
ಕಾನನವಂಜುವುದು ಬೇಗೆಗಯ್ಯ!
ಪಂಚಮಹಾಪಾತಕವಂಜುವುದು
ಲಿಂಗದೇವನ ನಾಮಕ್ಕಯ್ಯ -ಬ.ವ.ದೀ -76

ಆನೆ ಬೃಹದಾಕಾರದ ಪ್ರಾಣಿ ಇರಬಹುದು, ಅಷ್ಟೇ ಶಕ್ತಿಶಾಲಿಯೂ ಇರಬಹುದು ಆದರೆ ಅದನ್ನು ಮಣಿಸಲು (ಸಿಂಹದ ನಖವನ್ನು ಸಿಕ್ಕಿಸಿರುವ) ಚಿಕ್ಕ ಅಂಕುಶವೇ ಸಾಕು. ಬೆಟ್ಟವು ಬೃಹದಾಕಾರದಾಗಿರಬಹುದು. ಆದರೆ, ಅದನ್ನು ಒಡೆಯಲು ಚಿಕ್ಕದಾದ ಉಳಿ ಮತ್ತು ಸುತ್ತಿಗೆ ಸಾಕು. ಕತ್ತಲೆ ಎಷ್ಟು ಗಾಢವಾಗಿ ಇದ್ದರೇನು ಅದನ್ನು ಚದುರಿಸಲು ಕಿರು ಹಣತೆಯೇ ಸಾಕು. ಅಡವಿ ಎಷ್ಟು ಬೃಹತ್ತಾಗಿದ್ದರೇನು ಒಂದು ಸಣ್ಣ ಕಿಡಿ ಅಡವಿಯನ್ನು ಕಿಚ್ಚಾಗಿ ಸುಡಬಲ್ಲದು. ಹೀಗಾಗಿಯೇ ಆನೆಯೂ ಅಂಕುಶಕ್ಕೆ ಹೆದರಿದರೆ, ಗಿರಿಯೂ ಕುಲಿಶಕ್ಕೆ ಹೆದರುವುದು. ಕತ್ತಲೆಯು ಬೆಳಕಿಗೆ ಅಂಜಿ, ದೀಪದ ಕೆಳಗೆ ಅಡಗಿಕೊಂಡರೆ, ಅರಣ್ಯವು ಬೆಂಕಿಗೆ ಅಂಜುತ್ತದೆ. ಅದೇ ರೀತಿ, ಮಾನವನು ಅರಿತೋ.. ಅರಿಯದೆಯೋ. ಮಾಡಿದ ಪಾತಕಗಳು ಹೆದರುವುದು ಪರಮಾತ್ಮನ ಪವಿತ್ರ ನಾಮದ ಸ್ಮರಣಗೆ. ಲಿಂಗದೇವನ ದಿವ್ಯ ನಾಮವಯ ಮದಕರಿಯಂತೆ ಉನ್ಮತ್ತವಾಗಿರುವ ಪಾಪ ಎಂಬ ಆನೆಗೆ ಅಂಕುಶದಂತೆ , ಪಾತಕ ಎಂಬ ಗಿರಿಗೆ ಕುಲಿಶದಂತೆ, ಅಜ್ಞಾನವೆಂಬ ಕತ್ತಲೆಗೆ ಜ್ಯೋತಿಯಂತೆ, ಪೂರ್ವ ಕರ್ಮವೆಂಬ ಕಾನನಕ್ಕೆ ಬೆಗೆಯಂತೆ ಕಾರ್ಯ ಮಾಡುವವು.

79. ಲಿಂಗದೇವನ ನಾಮ ಕಾಮಧೇನು

ಜಪ ತಪ ನಿತ್ಯ ನೇಮವೆನಗೆ ಉಪದೇಶ;
ನಿಮ್ಮ ನಾಮವೆನಗೆ ಮಂತ್ರ;
ಶಿವನಾಮವೆನಗೆ ತಂತ್ರ; ಲಿಂಗದೇವಯ್ಯಾ
ನಿಮ್ಮ ನಾಮ ಕಾಮಧೇನುವೆನಗೆ. -ಬ.ವ.ದೀ -77

ಜಪ : ದೇವನ ನಾಮವನ್ನು ಪುನಃ ಪುನಃ ಸ್ಮರಿಸುವುದು ಜಪ. ಜಪವು ನಾಲಿಗೆ ಮಾಡುವ ಕ್ರಿಯೆ.

ತಪ : ತಪ್ ಎಂದರೆ ಕಾಯುವುದು, ಪರಿಪಕ್ವವಾಗುವುದು. ಯಾವುದನ್ನು ಮಾಡುವುದರಿಂದ ಹೃದಯ, ಮನ, ಬುದ್ಧಿಗಳೆಲ್ಲವೂ ಪರಿಪಕ್ವವಾಗುವವೋ ಅದು ತಪಸ್ಸು.

ನಿತ್ಯ ನೇಮ : ಧಾರ್ಮಿಕ ರಂಗದಲ್ಲಿ ನಿತ್ಯ ಕರ್ಮ, ನೈಮಿತ್ತಿಕ ಕರ್ಮ ಎಂದು 2 ಬಗೆ. ಗುರೂಪದೇಶವನ್ನು ಪಡೆದು ನಿತ್ಯವೂ ಮಾಡುವವು ನಿತ್ಯ ನೇಮ ಅಥವಾ ವಿಧಿ. ಏನಾದರೂ ನಿಮಿತ್ತವಾಗಿ ಮಾಡುವ ಕ್ರಿಯೆ ನೈಮಿತ್ತಿಕ.

ಗುರು ಮಾಡುವ ಉಪದೇಶದ ಸಾರವೇನೆಂದರೆ ನಿತ್ಯ ನೇಮವಾಗಿ ತಪ್ಪದೆ ಜಪವನ್ನು ಮಾಡು, ತಪವನ್ನು ಮಾಡು ಎಂಬುದು. ದೇವನ ನಾಮವೇ ಮಂತ್ರ, ತಂತ್ರ ಎಲ್ಲವೂ! ಹಿಂದಿನ ಶಾಸ್ತ್ರಕಾರರು ಕೆಲವು ಮಂತ್ರಗಳನ್ನು ರಚಿಸಿದ್ದಾರೆ. ಪಂಡಿತರು, ಅರ್ಚಕರು ಶಾಸ್ತ್ರೀಯ ಭಾಷೆಯಾದ ಸಂಸ್ಕೃತವನ್ನು ಕಲಿತು ರಾಗ ಬದ್ಧವಾಗಿ, ಶಾಸ್ತ್ರೀಯವಾಗಿ ಮಂತ್ರಗಳನ್ನು (ವಟವಟ) ಹೇಳುತ್ತಾರೆ. ತಮ್ಮ ಮನಸ್ಸನ್ನು ಭಕ್ತಿ ಪೂರ್ಣವಾಗಿ ತೊಡಗಿಸಿಕೊಳ್ಳದೆ ಒಂದು ಯಾಂತ್ರಿಕ ಕ್ರಿಯೆ ಎಂಬಂತೆ ಮಂತ್ರ ಜಪ ಮಾಡುವರು. ಮುಗ್ಧ ಭಕ್ತರು ಶಾಸ್ತ್ರೀಯ ಮಂತ್ರಗಳನ್ನರಿಯದೆ ತಮ್ಮದೇ ಮುಗ್ಧ ಭಾಷೆಯಲ್ಲಿ ದೇವರನ್ನು ಸ್ತುತಿಸುವರು. ಅನುಭಾವಿಗಳ ಪ್ರಕಾರ ಭಕ್ತಿಯಿಂದ ಉಚ್ಚರಿಸಿದ ನಾಮವೇ ಮಂತ್ರ! ಭಕ್ತಿರಹಿತನಾಗಿ ಯಾಂತ್ರಿಕವಾಗಿ ಮಂತ್ರವನ್ನು ಉಚ್ಚರಿಸಿದರೂ ಅದು ಕೇವಲ ಪದ. ಮತ್ತೆ ಕೆಲವರು ವಿವಿಧ ಸಿದ್ಧಿಗಳನ್ನು ಪಡೆದುಕೊಳ್ಳಲು ತಂತ್ರವಿದ್ಯೆ ಕಲಿಯುವುದುಂಟು. ಭಕ್ತಿ ಜೀವಿ ಬಸವಣ್ಣನವರಿಗೆ ದೇವನ ನಾಮಸ್ಮರಣೆಯೇ ತಂತ್ರ, ಅದರಿಂದಲೇ ಎಲ್ಲವೂ ಸಾಧ್ಯ. ದೇವನ ನಾಮಾಮೃತವೇ ಕಾಮಧೇನು- ಬೇಡಿದ ಇಷ್ಟಾರ್ಥಗಳನ್ನೆಲ್ಲ ಪೂರೈಸುತ್ತದೆ.

80. ಮಂತ್ರದ ಮಹಿಮೆ

ಅಕಟಕಟಾ ಬೆಡಗು ಬಿನ್ನಾಣವೆಂಬುದೇನೊ!
ಓಂ ನಮಃ ಶಿವಾಯ ಎಂಬುದೆ ಮಂತ್ರ
ಓಂ ನಮಃ ಶಿವಾಯ ಎಂಬುದೆ ತಂತ್ರ;
ನಮ್ಮ ಲಿಂಗದೇವರ ನೆನೆವುದೆ ಮಂತ್ರ. -ಬ.ವ.ದೀ -78

ನಮ್ಮ ದೇಶದಲ್ಲಿ ಅನೇಕ ಗುರುಗಳು, ಸಾಧು ಸಂತರು ವಿವಿಧ ಮತ್ತು ವಿಲಕ್ಷಣ ಪಂಥಗಳನ್ನು ಸೃಷ್ಟಿಸುವರು. ನೇರವಾಗಿ ಸರಳವಾಗಿ ಹೇಳದೆ ಏನೇನೋ ಹೇಳಿ ನಿಗೂಢ ಭಾವನೆ ಬೆಳೆಸಿ, ತಮ್ಮ ಹೆಚ್ಚುಗಾರಿಕೆಯನ್ನು ಮೆರೆಸಲು ಹೋಗುವರು. ಧರ್ಮವು ಎಲ್ಲರಿಗೂ ಸುಲಭ ಸಾಧ್ಯವಲ್ಲ ಎಂಬ ಭಾವನೆ ಬೆಳೆಸಲು ಬಯಸಿ, ಬೆಡಗಿನ ಭಾಷೆಯಲ್ಲಿ ಬಿನ್ನಾಣ (Stylish) ದಿಂದ ಮಾತನಾಡುವರು. ಇಂಥ ಬಳಸುದಾರಿಯನ್ನು ಗುರು ಬಸವಣ್ಣನವರು ಇಷ್ಟಪಡರು. ಸುತ್ತಿ ಬಳಸಿ ನಡೆಯುವ ದಾರಿ ಬೇಡ ನೇರ ದಾರಿಯಲ್ಲಿ ಸಾಗೋಣ ಎಂಬ ಮನೋಭಾವದ ಅವರು ಓಂ ನಮಃ ಶಿವಾಯ ಎಂಬುದೇ ಮಂತ್ರ, ತಂತ್ರ. ಭಕ್ತ ಭಾವುಕ ಶ್ರದ್ಧೆಯಿಂದ ಯಾವ ಪದವನ್ನು ಉಚ್ಚರಿಸುವನೋ ಅದೇ ಮಂತ್ರ ಎಂದು ಘೋಷಿಸುವರು.

ಒಂದು ಸುಂದರ ದೃಷ್ಟಾಂತವಿದೆ. ಒಬ್ಬ ಪಂಡಿತ ಪ್ರಯಾಣ ಮಾಡುತ್ತ ಒಂದು ಗುಡಿಸಲು ಬಳಿ ಬರುವನು .ಒಳಗೆ ಒಬ್ಬ ಮುಗ್ಧ ಭಕ್ತ ಪಾರ್ಥಿಸುತ್ತ ಕುಳಿತಿರುವನು. "ದೇವರೇ, ನೀನು ನನ್ನ ಬಳಿಗೆ ಬಾ. ನಿನಗೆ ಉಣಿಸುತ್ತೇನೆ. ಉಡಲು ಕೊಡುತ್ತೇನೆ. ಪಾದಗಳನ್ನು ಒತ್ತುತ್ತೇನೆ." ಎಂದು ಕೇಳಿಕೊಳ್ಳುತ್ತಿದ್ದ. ಇದನ್ನು ಕೇಳಿ ಅನುಕಂಪ ಉಂಟಾದ ಪಂಡಿತನು ಒಳಗೆ ಹೋಗಿ ಇದೆಂಥಾ ಪ್ರಾರ್ಥನೆ! ಇದು ಶಾಸ್ತ್ರ ಸಮ್ಮತವಲ್ಲ ಎಂದ. ಆಗ ಆ ಭಕ್ತನು, ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ಹೇಳಿಕೊಡಿ ಎಂದಾಗ ಪಂಡಿತನು ಶಾಸ್ತ್ರೀಯ ಪ್ರಾರ್ಥನೆ ಕಲಿಸಿದ. ಅವಿದ್ಯಾವಂತ ಮುಗ್ಧ ಭಕ್ತನು ಕಷ್ಟಪಟ್ಟು ಕಲಿತನು. ಪಂಡಿತನು ಮುಂದೆ ಸಾಗಿದ. ಮುಗ್ಧ ಭಕ್ತ ತಾನು ಮೊದಲು ಮಾಡುತಿದ್ದ ತೊದಲು ನುಡಿಯ ಪ್ರಾರ್ಥನೆ ಬಿಟ್ಟು ಶಾಸ್ತ್ರೀಯ ಪ್ರಾರ್ಥನೆಯನ್ನು ಮಾಡಿದ. ಮುಂದಿನ ಊರಲ್ಲಿದ್ದ ಪಂಡಿತನಿಗೆ ಒಂದು ವಾಣಿ ಕೇಳಿಸಿತು, "ನೀನು ಎಂಥಾ ತಪ್ಪು ಮಾಡಿದೆ? ನಿನ್ನ ಶಾಸ್ತ್ರೀಯ ಪ್ರಾರ್ಥನೆಗಿಂತಲೂ ಆ ಮುಗ್ಧ ಭಕ್ತನ ಮಗುವಿನಂತಹ

ತೊದಲು ನುಡಿಗಳು ನನಗೆ ಬಹಳ ಇಷ್ಟವಾಗುತಿದ್ದವು. ಅದನ್ನು ನೀನು ತಪ್ಪಿಸಿದೆ.'' ಪಶ್ಚಾತ್ತಾಪ ಪಟ್ಟ ಪಂಡಿತನು ವಾಪಸ್ಸು ಹೋಗಿ ''ಹೊಸದಾಗಿ ಹೇಳಿಕೊಟ್ಟುದು ಮರೆತು ಬಿಡು; ನಿನ್ನ ಮುಗ್ಧ ಪ್ರಾರ್ಥನೆಯನ್ನೇ ಮುಂದುವರಿಸು.'' ಎಂದು ಹೇಳಿದ. ಇದರ ಅಂತರಾರ್ಥವೇನೆಂದರೆ ದೇವನಿಗೆ ಪ್ರಿಯವಾಗುವುದು ಬುದ್ಧಿಯ ಭಾಷೆಗಿಂತ ಹೃದಯದ ಭಾಷೆ ಎಂಬ ಸತ್ಯ.

ಓಂ ನಮಃ ಶಿವಾಯ - ಷಡಕ್ಷರ ಮಂತ್ರ. ನಮಃ ಶಿವಾಯ ಪಂಚಾಕ್ಷರಿ. ಓಂಕಾರವೇ ಪ್ರಣವ. ಓಂ ನಮಃ ಶಿವಾಯ ಪ್ರಣವ ಪಂಚಾಕ್ಷರಿ. ಇದು ಶಿವನನ್ನು ಕುರಿತಾದ ಮಂತ್ರ. ಇದರ ದ್ರಷ್ಟಾರ ವಾಮದೇವ ಋಷಿ. ಇದರ ಧ್ಯೇಯ ಶಿವ ಸುತಿ. ಬಾಲ್ಯದಿಂದ ಯೌವ್ವನದ 21ನೆಯ ವಯಸ್ಸಿನವರೆಗೂ ಗುರು ಬಸವಣ್ಣನವರು ಏಕದೇವತಾ ಉಪಾಸಕ(Mono -deitist) ರಾಗಿದ್ದರು. ಶಿವನಲ್ಲದೆ ಅನ್ಯದೈವ ಎಂಬುದು ಮಿಥ್ಯೆ ಎಂಬ ಪ್ರತಿಪಾದಕರಾಗಿದ್ದರು. ಎಲ್ಲ ಶೈವರಂತೆ ಷಡಕ್ಷರ ಮಂತ್ರವಾದ ಓಂ ನಮಃ ಶಿವಾಯವೇ ಅವರಿಗೆ ಪೂಜ್ಯವಾಗಿತ್ತು. ಹೀಗಾಗಿ ಆ ಮಂತ್ರದ ಮಹತಿಯನ್ನು ಈ ಎಲ್ಲ ವಚನಗಳಲ್ಲಿ ಸಾರಿದ್ದಾರೆ.

ಗುರು ಬಸವಣ್ಣನವರು ನವ ಧರ್ಮ ದ್ರಷ್ಟಾರರಾದರು. ಬ್ರಹ್ಮ-ವಿಷ್ಣು-ಶಿವರನ್ನು ಮೀರಿಸಿದ ಸೃಷ್ಟಿಕರ್ತನ ಮಹತ್ವವನ್ನು ಅರಿತರು. ಪರಮಾತ್ಮನನ್ನು ಲಿಂಗದೇವ ಎಂಬ ಹೆಸರಿನಿಂದ ಕರೆದರು. ದೇವರಿಗೆ ಮನುಷ್ಯರ, ಪಶುಪಕ್ಷಿಗಳ ಆಕಾರ ಕೊಡುವುದು ದೇವನಿಗೆ ಮಾಡುವ ಅಪಚಾರ ಎಂದು ಆಲೋಚಿಸಿ ದೇವರ ಕೃತಿಯೆ ಬ್ರಹ್ಮಾಂಡ, ಇದು ಗೋಲಾಕಾರವಾಗಿದೆ, ಈ ಆಕಾರದಲ್ಲೇ ಲಿಂಗದೇವನನ್ನು ಸಾಕಾರಗೊಳಿಸುವುದು ಸೂಕ್ತ ಎಂದು ಗೋಲಾಕಾರದ ಇಷ್ಟಲಿಂಗ ರೂಪಿಸಿದರು. ಇಂದು ನಾವು ಧರಿಸಿ ಪೂಜಿಸುವುದು ಅದೇ ಇಷ್ಟಲಿಂಗವನ್ನು. ಆದ್ದರಿಂದ ನಮ್ಮ ಆರಾಧನಾ ವಸ್ತುವಾದ ಇಷ್ಟಲಿಂಗದ ಉಪಾಸನೆಗೆ ಓಂ ನಮಃ ಶಿವಾಯ ಹೊಂದುವುದಿಲ್ಲ. ಸೃಷ್ಟಕರ್ತ ಲಿಂಗದೇವನನ್ನು ಕರದಲ್ಲಿ ಹಿಡಿದು ಐತಿಹಾಸಿಕ ಶಿವನ ಮಂತ್ರ ಹೇಳಿದಂತೆ ಆಗುತ್ತದೆ. ಆದ್ದರಿಂದ ಸಾಂಪ್ರದಾಯಿಕವಾಗಿ ಸಾಗಿ ಬಂದಿರುವ ಶ್ರೀ ಗುರು ಬಸವ ಲಿಂಗಾಯ ನಮಃ ಮಂತ್ರದಲ್ಲಿ ಇರುವ ಲಿಂಗಾಯ ನಮಃ ಭಾಗವನ್ನು ಸರಿಯಾಗಿ ಗ್ರಹಿಸಿದರೆ ಅದೇ ನಮ್ಮ ದೇವನ ಮಂತ್ರವಾಗಲು ಸಾಧ್ಯ ಎಂಬುದು ಮನವರಿಕೆಯಾಗದೆ ಇರದು. ಇದಕ್ಕೆ ಪ್ರಣವವನ್ನು ಸೇರಿಸಬೇಕು ಏಕೆಂದರೆ ದೇವನು, ಪ್ರಣವಾರೂಢನು, ಪ್ರಣವ ಸ್ವರೂಪನು, ಪ್ರಣವ ಪ್ರಕೃತಿ ಸಂಜ್ಞನು ಪ್ರಣವ ಷಡಂಗ ಸಮರಸ. ನಮ್ಮ ಮಂತ್ರ, ಓಂ ಲಿಂಗಾಯ ನಮಃ - ಇದು ಸಹ ಷಡಕ್ಷರ ಮಂತ್ರವೇ ಆಗುವುದು. ಓಂ ಲಿಂಗದೇವಾಯ ನಮಃ ಸಹ ತಾತ್ವಿಕವಾಗಿ ಸೂಕ್ತ. ಚನ್ನಬಸವಣ್ಣನವರು ಹಲವು ಕಡೆ ಹೀಗೆ ಹೇಳುತ್ತಾರೆ.

ಅಯ್ಯಾ ಅಯ್ಯಾ ಎಂದಡೆ ಅಯ್ಯನು ಓ ಎನ್ನದೆ ಮಾಣ್ಬನೆ?
ಅವ್ವೆ ಅವ್ವೆ ಎಂದಡೆ ಅವ್ವೆ ಓ ಎನ್ನದೆ ಮಾಣ್ಬಳೆ ?
ನಾನು ಬಸವ ಲಿಂಗಾ, ಬಸವ ಲಿಂಗಾ ಎಂದು ಬಯಲಾದೆನು
ಕೂಡಲ ಚನ್ನಸಂಗಮದೇವಾ.

ಇನ್ನೊಂದು ಗೀತೆಯಲ್ಲಿ ''ಶರಣು ಶರಣು ಎನ್ನ ಗುರುವೆ ಶರಣಯ್ಯ.'' ಎಂಬುದರಲ್ಲಿ ಹೀಗೆ ಹೇಳುತ್ತಾರೆ, ಕೂಡಲ ಚನ್ನ ಸಂಗಯ್ಯ ನಿಮ್ಮುವನು ''ಬಸವ ಲಿಂಗಾ ಲಿಂಗಾ'' ಎನ್ನುತಿರ್ದೆನು. ಆದ್ದರಿಂದ ಓಂ/ಶ್ರೀ ಗುರು ಬಸವ / ಲಿಂಗಾಯ / ನಮಃ - ಇದು ಸರ್ವಶ್ರೇಷ್ಠ ಮಂತ್ರ ನಮಗೆ. ಏಕೆಂದರೆ ಧರ್ಮಗುರು ಬಸವಣ್ಣನವರು ಮತ್ತು ಸೃಷ್ಟಿಕರ್ತ ಲಿಂಗದೇವ ಉಭಯತರಿಗೂ ನಮಸ್ಕರಿಸುವ ವಿಶೇಷತೆ ಇಲ್ಲಿದೆ.

ಓಂಕಾರ ಸ್ವರೂಪಿಯಾದ ಲಿಂಗದೇವನಿಗೆ
ಓಂಕಾರದ ಪ್ರತಿನಿಧಿಯಾದ ಗುರು ಬಸವಣ್ಣನವರಿಗೆ
ನಮಸ್ಕರಿಸುತ್ತೇನೆ.

ಎಂದಾಗುತ್ತದೆ. ತಾತ್ವಿಕ ದೃಷ್ಟಿಯಿಂದ ಓಂ ಲಿಂಗಾಯನಮಃ (ಅಥವಾ ಓಂ ಲಿಂಗದೇವಾಯ ನಮಃ) ಮತ್ತು ಓಂ ಶ್ರೀ ಗುರು ಬಸವ ಲಿಂಗಾಯ ನಮಃ ನಮ್ಮ ಜಪತಪ ಪಠಣಕ್ಕೆ ಸ್ತೋತ್ರಾರ್ಹವಾಗಿವೆ ಎಂಬುದನ್ನು ಅರಿಯಬೇಕು.

ಆದರೆ, ಧರ್ಮಪಿತರು ತಮ್ಮ ಬಾಲ್ಯದಲ್ಲಿ ಅಥವಾ ಸಾಕ್ಷಾತ್ಕಾರಕ್ಕೆ ಮೊದಲು ಬರೆದ ವಾಣಿಯಾದ್ದರಿಂದ ನಾನು ''ಓಂ ನಮಃ ಶಿವಾಯ'' ಮಂತ್ರವನ್ನು ಉಲ್ಲೇಖಿಸಿ, ವ್ಯಾಖ್ಯಾನವನ್ನು ಮಾಡುತ್ತಿದ್ದೇನೆಂದು ಸ್ಪಷ್ಟಪಡಿಸ ಬಯಸುತ್ತೇನೆ.

☐ ಪ್ರೇಮಾ ಚಂದ್ರಯ್ಯ, ದಾವಣಗೆರೆ

? ನಿಮಗೆ ಬಹಳಷ್ಟು ಭೂಮಿಯ ದಾಹ ಇದೆ, ಬಹಳಷ್ಟು ಕಡೆ ಆಸ್ತಿ ಮಾಡುತ್ತಿದ್ದೀರಿ ಎಂದು ಒಂದು ಕುಹಕ ಪತ್ರಿಕೆ ಬರೆದಿದೆಯಲ್ಲ?

★ ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ನಾವು ಕಟ್ಟುತ್ತಿರುವ ಸಂಸ್ಥೆಗಳು ಏನೂ ಅಲ್ಲ. ಒಬ್ಬ ವ್ಯಕ್ತಿ ತನಗಾಗಿ ತನ್ನ ಹೆಂಡತಿ ಮಕ್ಕಳಿಗಾಗಿ ಮಿತಿಮೀರಿ ಆಸ್ತಿ ಮಾಡಿದರೆ ಅದಕ್ಕೆ ಭೂ ದಾಹ, ಧನ ದಾಹ ಎನ್ನಬಹುದು. ಓರ್ವ ಸನ್ಯಾಸಿ, ತ್ಯಾಗಿ ಸಮಾಜದ ಹಿತಕ್ಕಾಗಿ ಸಂಸ್ಥೆಗಳನ್ನು ಕಟ್ಟಿದರೆ ಅದಕ್ಕೆ ದಾಹ ಎನ್ನುವುದಿಲ್ಲ. ಸಮಾಜ ಸೇವೆ ಎನ್ನುವರು. ಈಗ ನಾವು ಕಟ್ಟಿರುವ ಮಠಗಳೆಲ್ಲವೂ ಖಾಸಗಿ ಸೊತ್ತಲ್ಲ ಟ್ರಸ್ಟ್‌ಗಳ ಆಸ್ತಿ, ಲಾಭ ದೃಷ್ಟಿಯಿಂದ ಮಾಡಿದವೂ ಅಲ್ಲ ಧರ್ಮ ಪ್ರಚಾರದ ಉದ್ದೇಶದಿಂದ ಆದ ಸಂಸ್ಥೆಗಳು.

☐ ಮನೋಹರ, ಬೆಂಗಳೂರು

? ಈಗ ಬಹಳಷ್ಟು ಜನ ಗಂಡಸರು ಹಣೆಯ ಮೇಲೆ ಕುಂಕುಮ ಇಡುವರಲ್ಲ ಏಕೆ?

★ ಮಹಿಳೆಯರು ಫ್ಯಾಷನ್‌ಗಾಗಿ ಕುಂಕುಮ ಇಡುವುದನ್ನು ಬಿಡುತ್ತಿರುವುದರಿಂದ ಗಂಡಸರು ಜಾಸ್ತಿ ಮಾಡಿರಬೇಕು.

☐ ಎಂ.ಆರ್.ದುಬಲಗುಂಡಿ, ಚಿಮ್ಮನ ಚೋಡು, ಗುಲಬರ್ಗಾ

1.? ಬುದ್ಧ, ಮಹಾವೀರ, ಏಸು, ಮಹಮ್ಮದ್, ಗುರು ಬಸವಣ್ಣನವರು ಎಲ್ಲರೂ ಮಹಾ ಪ್ರವಾದಿಗಳೇ. ಹಾಗಿದ್ದ ಮೇಲೆ ಕೇವಲ ಬಸವಣ್ಣನವರನ್ನು ಆರಾಧಿಸುವುದು ಸರಿಯೆ?

★ ಒಬ್ಬ ವ್ಯಕ್ತಿ ದೊಡ್ಡ ಸಾಧನೆ ಮಾಡಿರುತ್ತಾನೆ/ತ್ತಾಳೆ ಎಂದುಕೊಳ್ಳೋಣ. ಎಲ್ಲರೂ ಅವರನ್ನು ಮಹತ್ಸಾಧಕರು ಎಂದು ಗೌರವಿಸುತ್ತಾರೆ. ಅವರ ಮಕ್ಕಳು ಮಾತ್ರ ಕೇವಲ ಗೌರವಿಸುವುದಿಲ್ಲ ಗೌರವದ ಜೊತೆಗೆ ಆರಾಧಿಸುತ್ತಾರೆ. ಹಾಗೆ ನಾವು ಲಿಂಗಾಯತ ಧರ್ಮೀಯರು ಇತರ ಎಲ್ಲ ಮಹಾಪುರುಷರನ್ನು ಗೌರವಿಸುತ್ತೇವೆ. ಭಾಷಣಗಳಲ್ಲಿ ತೌಲನಿಕವಾಗಿ ಉಲ್ಲೇಖಿಸುತ್ತೇವೆ. ಆದರೆ ಆರಾಧಿಸ ಬೇಕಾದ್ದು ನಮ್ಮ ಧರ್ಮಗುರುವನ್ನು ಮಾತ್ರ. ಅದೇ ರೀತಿ ಇತರ ಧರ್ಮೀಯರು ಎಲ್ಲರನ್ನೂ ಗೌರವಿಸಬೇಕು. ತಮ್ಮ ಧರ್ಮಗುರುವನ್ನು ಮಾತ್ರ ಆರಾಧಿಸಬೇಕು. Respect all, adore one ಎನ್ನುತ್ತದೆ ಮಹಾತ್ಮರೊಬ್ಬರ ವಾಣಿ.

2.? ಲಿಂಗಾಯತ ಸಮಾಜದಲ್ಲಿ ಬಣಜಿಗರು ಜಾಸ್ತಿ ಇರಲು ಕಾರಣವೇನು? ಆಂಧ್ರ ಪ್ರದೇಶದಲ್ಲಿ ಲಿಂಗಾಯತರನ್ನು ಬಂಜೇಲು ಎನ್ನುವರಂತೆ.

★ ಲಿಂಗಾಯತ ಧರ್ಮವನ್ನು ಧರ್ಮಪಿತ ಬಸವಣ್ಣನವರು ಕೊಟ್ಟಾಗ 18 ಕುಲದವರೂ, ಎಲ್ಲ ಜಾತಿಗಳವರೂ ಬಂದು ಸೇರಿದರು. ಬಣಜಿಗರೂ ಅದರಂತೆ ಸೇರಿದರು. ಅಲಿಂಗಿಗಳೂ ಇರುತ್ತಾರೆ. ಅವರಿಗೆ ಆಂಧ್ರದಲ್ಲಿ ಬಂಜೇಲು ಎನ್ನಬಹುದೇನೋ? ಲಿಂಗಾಯತ ಧರ್ಮ ಸ್ವೀಕರಿಸಿದವರು ಲಿಂಗಾಯತ ಬಣಜಿಗರು.

3.? ಜಂಗಮರು ತಾವೊಂದು ಬೇರೆ ಜಾತಿಯವರು ಎನ್ನುತ್ತಾರೆ. ನಿನ್ನ ಜಾತಿ ಯಾವುದು ಎಂದು ಕೇಳಿದಾಗ ಉಳಿದವರು ಲಿಂಗಾಯತವು ತಮ್ಮ ಉಪಜಾತಿ ಎಂದು ಹೇಳಿದರೆ ಜಂಗಮರು ತಾವು ಬೇರೆ, ಶ್ರೇಷ್ಠ ಎಂಬಂತೆ ಮಾತನಾಡುತ್ತಾರೆ. ಇದನ್ನು ಹೇಗೆ ತಪ್ಪಿಸಬಹುದು?

★ ಈ ಪದ್ಧತಿ ಎಲ್ಲೋ ಕೆಲವು ಕಡೆ ಇರಬಹುದು. ಸಾಮಾನ್ಯವಾಗಿ ಲಿಂಗಾಯತದಿಂದ ಹೊರತಾಗಿ ಜಂಗಮವಿದೆ ಎಂದು ಯಾರೂ ಹೇಳುವುದಿಲ್ಲ. ಹಾಗೆ ಅಹಂಕಾರದಿಂದ ಹೇಳುತ್ತಿದ್ದರೆ ಅವರನ್ನು ಬಿನ್ನಹಕ್ಕೆ ಕರೆಯುವುದನ್ನು ಬಿಟ್ಟು ಬಿಡಿ. ನೀವು ನಮ್ಮವರಲ್ಲ ಎಂದಾಗ ಭಿಕ್ಷೆ(ಕೋರಾನ್ನ, ಕಂಥೆ ಭಿಕ್ಷೆ) ಏಕೆ ಕೊಡಬೇಕು ಎಂದು ಪ್ರಶ್ನಿಸಿರಿ.

4. ? ಲಿಂಗದೇವ ಪದವನ್ನು ಗುರು ಬಸವಣ್ಣನವರು ಬಳಸಿದ್ದರು ಎಂದು ಹೇಳುತ್ತೀರಿ. ಅಕ್ಕಮಹಾದೇವಿಯವರು ಸಹ ಬಳಸಿರುವರೆ?

★ ಧರ್ಮಪಿತ ಬಸವಣ್ಣನವರು ಬಳಸಿರುವರು. ನಿರಾಕಾರ ದೇವರನ್ನು ಲಿಂಗದೇವರು ಎಂದು ಹೆಸರಿಟ್ಟು ಕರೆದರು. ಅವರ ದಿವ್ಯ ವಾಣಿ ನಮಗೆ ಆದೇಶ. ಆದ್ದರಿಂದ ಸೃಷ್ಟಿಕರ್ತನನ್ನು ಲಿಂಗದೇವ ಎಂದೇ ಎಲ್ಲರೂ ಕರೆಯಬೇಕು. ಜಗನ್ಮಾತಾ ಅಕ್ಕಮಹಾದೇವಿ ಧರಿಸಿ, ಪೂಜಿಸಿದ್ದು ಅದೇ ಲಿಂಗದೇವನನ್ನೇ ಅಲ್ಲವೆ?

☐ ಅಪರ್ಣಾ ಶಂಕರ್, ಮೈಸೂರು

? ಸನ್ಮಾನ್ಯ ಯಡೆಯೂರಪ್ಪನವರ ಹಣೆಯಲ್ಲಿ ಮೊದಲು ವಿಭೂತಿ ಎಳೆಗಳು ಕಾಣುತ್ತಿದ್ದವು. ಇತ್ತೀಚೆಗೆ ಅವು ಮರೆಯಾಗಿ ಸದಾ ಕುಂಕುಮವೇ ರಾರಾಜಿಸುತ್ತದಲ್ಲ ಏಕೆ?

★ ಈಗ ಶ್ರೀ ಯಡೆಯೂರಪ್ಪನವರನ್ನು ನಿಯಂತ್ರಿಸುತ್ತಿರುವುದು ಧರ್ಮಗುರುವಲ್ಲ, ಧರ್ಮ ಶಾಸ್ತ್ರವಲ್ಲ ಜ್ಯೋತಿಷಿಗಳು. ಬಹುಶಃ ಯಾರಾದರೂ ಜ್ಯೋತಿಷಿಗಳು ಹೇಳಿರಬಹುದು: "ವಿಭೂತಿ ಧರಿಸಿದರೆ (ಅದು ಲಿಂಗಾಯತ ಧರ್ಮ ಲಾಂಛನವಾದ ಕಾರಣ) ಅಧಿಕಾರ ಕೈಬಿಡಬಹುದು; ಕುಂಕುಮ ಧರಿಸಿದರೆ (ಅದು ಬಿ.ಜೆ.ಪಿ.ಲಾಂಛನವಾದ ಕಾರಣ) ಅಧಿಕಾರವು ಸ್ಥಿರವಾಗಿ ಇರುವುದು. ಆದ್ದರಿಂದ ಒಂದು ಕ್ಷಣವು ಬಿಡದೆ ಕುಂಕುಮ ಹಣೆಯಲ್ಲಿರಲಿ ಎಂದು."

☐ ಶರಣ. ವೀರಣ್ಣ ಲಿಂಗಾಯತ, ಕೊಪ್ಪಳ

? ಧರ್ಮಗುರು ಬಸವಣ್ಣನವರ ಪವಿತ್ರ ನಾಮವನ್ನು ಹೊತ್ತ ಕೆಲವು ಮಾಸಿಕ ತ್ರೈ ಮಾಸಿಕ ಪತ್ರಿಕೆಗಳು ಸದಾ ನಿಮ್ಮನ್ನು ಕೆಳಮಟ್ಟದ ಭಾಷೆಯಲ್ಲಿ ನಿಂದಿಸುವ ಕೆಲಸವನ್ನೇ ಮಾಡುತ್ತವಲ್ಲ. ಇದಕ್ಕೆ ಏನೆನ್ನಬೇಕು?

★ ವಿಷಾದ ಪಡಬೇಕು ಅಷ್ಟೆ. ಮುಸ್ಲೀಮರು ಅವರ ಪ್ರವಾದಿಯ ಹೆಸರನ್ನು ಎಷ್ಟು ಭಯ ಭಕ್ತಿ ಗೌರವಗಳಿಂದ ಬಳಸುತ್ತಾರೆ. ಬಸವ ತತ್ತ್ವಾಭಿಮಾನಿಗಳು ಎಂದು ಬಿಂಬಿಸಿಕೊಳ್ಳುವ ಕೆಲವರು ಧರ್ಮಗುರುವಿನ ಪವಿತ್ರ ನಾಮಕ್ಕೆ ಚ್ಯುತಿ ತರುತ್ತೇವೆ ಎಂಬ ಅಂಜಿಕೆಯೇ ಇಲ್ಲದೆ ವರ್ತಿಸುತ್ತಾರೆ. ಲಿಂಗಾಯತ ಸಮಾಜಕ್ಕೆ ಶತ್ರುಗಳು ಹೊರಗಿನಿಂದ ಇಲ್ಲ, ಒಳಗೇ ಸಾಕಷ್ಟಿದ್ದಾರೆ.

☐ ಲೀಲಾವತಿ ನಾಡಗೌಡ, ಬೆಂಗಳೂರು

? ಅನೇಕ ಮಠಾಧಿಪತಿಗಳು, ಲಿಂಗಾಯತ ಮತ್ತು ಬಸವ ತತ್ತ್ವದ ಸಂಘ - ಸಂಸ್ಥೆಗಳವರು ನಿಮ್ಮನ್ನು ಸದಾ ಟೀಕಿಸುತ್ತಲೇ ಇರುವರಲ್ಲ; ನೀವು ಮಹಿಳಾ ಗುರು ಎಂಬ ಕಾರಣದಿಂದ ಅನ್ನಿಸುವುದೆ ?

★ ನನಗೆ ಹಾಗೆ ಅನ್ನಿಸುವುದಿಲ್ಲ. ಅನೇಕರು ಅನೇಕ ಸತ್ಯಗಳನ್ನು ಮುಚ್ಚಿಟ್ಟಿದ್ದರು. ಉದಾ: ಕ್ರಾಂತಿ ಪುರುಷ ಬಸವಣ್ಣನವರೇ ಧರ್ಮಗುರು ಎಂಬುದನ್ನು; ಅವರೇ ಇಷ್ಟಲಿಂಗ ಜನಕರು ಎಂಬುದನ್ನು. ಇನ್ನು ಕೆಲವರು ತತ್ತ್ವಗಳನ್ನು ತಿರುಚಿದ್ದರು. ಉದಾ : ಜಂಗಮ ಎಂಬುದು ಒಂದು ಜಾತಿ ಎಂಬುದಾಗಿ ವಿಕೃತಗೊಳಿಸಿದ್ದರು. ಇವನ್ನೆಲ್ಲ ಬಯಲಿಗಿಟ್ಟರೆ ತಳಮಳವಾಗದೆ ಇದ್ದೀತೇ ? ನಾನಾ ಕಾರಣಗಳಿಗಾಗಿ ನಿಂದಿಸುತ್ತಾರೆ. ನಮ್ಮ ಗುರಿ ಅಚಲವಾಗಿದ್ದು ಉದ್ದೇಶ ಪವಿತ್ರವಾಗಿದ್ದರೆ ಅಂಥ ದೂಷಣೆಗೆಲ್ಲ ಅಂಜಬೇಕಿಲ್ಲ

☐ ರಾಜಶೇಖರ ನಿಡಗುಂದೆ, ಬೆಂಗಳೂರು

? ವಿಜಯ ಕರ್ನಾಟಕದಲ್ಲಿ ಮತಾಂತರ ಕುರಿತು ಒಂದು ಸಂವಾದ ನಡೆಯುತ್ತಿದೆಯಲ್ಲ. ಇದರ ಒಟ್ಟಾರೆ ಫಲಶ್ರುತಿ ಏನು? ನೆಗೆಟಿವ್ವೋ ಪಾಸಿಟಿವ್ವೋ ?

★ ಚರ್ಚ್‌ಗಳ ಮೇಲೆ ದಾಳಿ ಮಾಡಿ ಕೆಲವು ಸಂಘಟನೆಗಳು ಹೆಸರು ಕೆಡಿಸಿಕೊಂಡವು. ಕ್ರೈಸ್ತರಿಗೆ ಸೊಳ್ಳೆ ಕಡಿದಂತೆ ಸಹ ಆಗಲಿಲ್ಲ. ಹಿಂದು ಸಂಘಟನೆಗಳು ಗುಂಗಾರಿ ತಿಂದು ಕುಲಗೆಡಿಸಿಕೊಂಡರು ಎಂಬಂತೆ ಮತಾಂಧರೆಂಬ ಬಿರುದು ಹೊತ್ತವು. ಪರ - ವಿರೋಧ ಲೇಖನಗಳನ್ನು ಪ್ರಕಟಿಸಿದ್ದರಿಂದ ಹಿಂದು ಧರ್ಮದ ಒಳಗಣ ಲೋಪದೋಷಗಳ ವಿಶ್ಲೇಷಣೆ ನಡೆದು, ತಿಪ್ಪೆಯನ್ನು ಕೆದರಿ ವಾಸನೆ ಎಬ್ಬಿಸಿದಂತಾಯಿತು. ಕ್ರೈಸ್ತ ಸಂಸ್ಥೆ - ಧರ್ಮದ ಬಗ್ಗೆ ಅನುಕಂಪ, ಅಭಿಮಾನ ಸಹ ಹುಟ್ಟುವಂತಾಯಿತು. ಒಟ್ಟು ಭೈರಪ್ಪನವರು ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡರು. ಆದ್ದರಿಂದ ಈ ಸಂವಾದವು ಹಿಂದು ಧರ್ಮಕ್ಕೆ ನೆಗೆಟಿವ್ ಎಫೆಕ್ಟ್, ಕ್ರೈಸ್ತ ಧರ್ಮಕ್ಕೆ ಪಾಸಿಟಿವ್ ಎಫೆಕ್ಟ್ ಉಂಟು ಮಾಡಿತು. ಇದರಿಂದ ಮತಾಂತರಕ್ಕೆ ಯಾರಿಗೂ ಪ್ರೇರಣೆ ಸಿಗದಿರಲಿ ಎಂದು ಲಿಂಗದೇವನಲ್ಲಿ ಪ್ರಾರ್ಥಿಸೋಣ!

ಅಭಿಪ್ರಾಯ :

ಲಿಂಗವಿಲ್ಲದೆ ನುಡಿವ ಶಬ್ದ ಸೂತಕ, ಕೇಳಲಾಗದು.

ನನಗೆ ಇತ್ತೀಚೆಗೆ ನಿಮ್ಮ ಸಾಹಿತ್ಯದ ಪರಿಚಯವಾಯಿತು. ಗುರು ಬಸವಣ್ಣನವರ ವಚನಗಳಲ್ಲಿ ಬರುವ ಕೂಡಲ ಸಂಗಮದ ಬದಲಿಗೆ ಲಿಂಗದೇವ ಎಂಬ ವಚನಾಂಕಿತ ಇಟ್ಟಿದ್ದು ತಿಳಿದು ಅತೀವ ಆನಂದವಾಯಿತು. ಗುರು ಬಸವಣ್ಣನವರು ತಮ್ಮೊಂದು ವಚನದಲ್ಲಿ ಹೇಳುತ್ತಾರೆ (ಬ.ಷ.ವ.608): ಲಿಂಗವಿಲ್ಲದೆ ನುಡಿದ ಶಬ್ದ ಸೂತಕ, ಕೇಳಲಾಗದು. ಕೂಡಲ ಸಂಗಮದೇವ ಪದದಲ್ಲಿ ಲಿಂಗ ಶಬ್ದವಿಲ್ಲ. ಆದ್ದರಿಂದ ಗುರು ಬಸವಣ್ಣನವರ ಪರಿಕಲ್ಪನೆಯ ದೇವರಿಗೆ ಲಿಂಗದೇವ ಸೂಕ್ತ ಪದ. ಏಕದೇವೋಪಾಸನೆಗೆ ಬಹಳ ಪೂರಕ.

- ಶಿವರಾಜ ಬಿರಾದಾರ (ಬೀದರ), ನವೀ ಮುಂಬಯಿ

ಕಲ್ಯಾಣ ಕಿರಣ ತಪ್ಪದೆ ಓದಿರಿ

1970ರಲ್ಲಿ ಪ್ರಾರಂಭವಾದ ಕಲ್ಯಾಣ ಕಿರಣ ಮಾಸ ಪತ್ರಿಕೆ ಜ್ಞಾನದ ಬುತ್ತಿಯನ್ನು ಪ್ರತಿ ತಿಂಗಳೂ ಹೊತ್ತು ತರುತ್ತದೆ. ಸ್ಪಷ್ಟ ವಿಚಾರ ಧಾರೆ, ವಿಚಿತ್ರ ಜ್ಞಾನದಿಂದ ಕೂಡಿರುವ ಬಸವ ತತ್ತ್ವದ ಪ್ರಚಾರ ಮಾಡುವ ಮಾಸ ಪತ್ರಿಕೆಯಿದು.

ಧನ ದಾಸೋಹಿಗಳಿಗೆ ಸಹ ಉಚಿತವಾಗಿ ಕಲ್ಯಾಣ ಕಿರಣ ಕಳಿಸುವ ಪರಿಪಾಠ ಇಟ್ಟುಕೊಂಡಿರುವುದರಿಂದ ಅವರು 2-3 ಸಲ ಕಾಣಿಕೆ ಕೊಟ್ಟಾಗಲೊಮ್ಮೆ ದಾಖಲಾಗಿ ಎರಡು-ಮೂರು ಪ್ರತಿ ಬರುತ್ತಿರುವುದಾಗಿ ತಿಳಿದಿದೆ. ಇನ್ನು ಕೆಲವರಿಗೆ ಬರದೆ ಇರುವುದಾಗಿ ತಿಳಿದಿದೆ. ಪತ್ರ ಮುಖೇನ ಈ ಲೋಪಗಳನ್ನು ಸರಿಪಡಿಸಲು ಸಾಧ್ಯ. ಆದರೆ ಬಹುಪಾಲು ಜನರಿಗೆ ಪತ್ರ ಬರೆಯುವ ಸದಭ್ಯಾಸವೇ ಇರುವುದಿಲ್ಲ.

ಯಾರಾದರೂ ಮಠದವರು ಭೇಟಿಯಾದಾಗ ಹೇಳುತ್ತಾರೆ. ವಿವರವು ಕಾರ್ಯಾಲಯಕ್ಕೆ ತಲುಪುವುದೇ ಇಲ್ಲ. ಕಲ್ಯಾಣ ಕಿರಣದ ವಿವರ ಪಡೆಯಲಿಕ್ಕಾಗಿ ಮೊಬೈಲ್‌ಗಳನ್ನು ಇಡಲಾಗಿದೆ. ಈ ಕೆಳಗಿನ ನಂಬರ್‌ಗೆ ಫೋನ್ ಮಾಡಿ ತಿಳಿಸಿರಿ.

9620058492. 9620057562

1. ಕಲ್ಯಾಣ ಕಿರಣದ ಸದಸ್ಯರಾಗಿದ್ದೂ ಸಹ ಪತ್ರಿಕೆ ಬರದಿದ್ದರೆ
2. ಒಂದಕ್ಕಿಂತ ಹೆಚ್ಚು ಪ್ರತಿಗಳು ಬರುತ್ತಿದ್ದರೆ
3. ವಿಳಾಸದಲ್ಲಿ ಬದಲಾವಣೆ ಇದ್ದರೆ

ಕಲ್ಯಾಣ ಕಿರಣದ ಕವಚದ ಮೇಲೆ ಕ್ರಮ ಸಂಖ್ಯೆ ಇರುತ್ತದೆ. ವ್ಯವಹಾರ ಮಾಡುವಾಗ ಆ ಕ್ರಮ ಸಂಖ್ಯೆಯನ್ನು ನಮೂದಿಸಿರಿ. ನಿಮ್ಮ ಪರಿಚಿತರು, ಬಂಧು ಮಿತ್ರರು ಕಲ್ಯಾಣ ಕಿರಣ ಬರುತ್ತಿಲ್ಲ ಎಂದರೆ ಅವರಿಗೆ ಈ ವಿವರ ತಿಳಿಸಿರಿ.

ಶರಣ ವ್ರತ ಸ್ವೀಕಾರ

ಶರಣ ವ್ರತ ಸ್ವೀಕಾರ ಮಾಡಿ ಶರಣಮೇಳಕ್ಕೆ ಬರುವವರ ಸಂಖ್ಯೆ ಹೆಚ್ಚಬೇಕು. ಸದ್ಯದಲ್ಲಿ ಹೈದರಾಬಾದ್ ರಾಷ್ಟ್ರೀಯ ಬಸವ ದಳದವರು ಮತ್ತು ಸಕಲಟ್ಟಿ (ಊಟಿ) ಕಾಟೇರಿ ರಾಷ್ಟ್ರೀಯ ಬಸವ ದಳದವರು ನಿಷ್ಠೆಯಿಂದ ಪಾಲಿಸುತ್ತಲಿದ್ದಾರೆ.

ಗುರು ಸಾರಾಯ ಸಂಪದ್ ವ್ರತ - 40 ದಿವಸ-ಡಿಸೆಂಬರ್ 2ರಿಂದ ಪ್ರಾರಂಭ
ಲಿಂಗ ಸಾರಾಯ ಸಂಪದ್ ವ್ರತ - 30 ದಿವಸ-ಡಿಸೆಂಬರ್ 12ರಿಂದ
ಜಂಗಮ ಸಾರಾಯ ಸಂಪದ್‌ವ್ರತ- 20 ದಿವಸ-ಡಿಸೆಂಬರ್ 22ರಿಂದ
ಪ್ರಸಾದ ಸಾರಾಯ ಸಂಪದ್ ವ್ರತ - 10 ದಿವಸ-ಜನವರಿ 1ರಿಂದ

ನಿಯಮಗಳು :

1. ಎರಡು ಹೊತ್ತು ಸ್ನಾನ ಮತ್ತು ಇಷ್ಟಲಿಂಗಾರ್ಚನೆ
2. ಬೆಳಿಗ್ಗೆ ಗುರು ಬಸವಾರ್ಚನೆ ಮತ್ತು 108 ಬಸವಲಿಂಗ ಮಂತ್ರಪಠಣ
3. ಬಿಡುವು ಸಿಕ್ಕಾಗ ವಚನ ಲೇಖನ
4. ಬಿಳಿಯ ಬಟ್ಟೆಯನ್ನು ವ್ರತದ ಅವಧಿಯಲ್ಲಿ ಧರಿಸಿ, ಸ್ಕಾರ್ಫ್ ಹಾಕಿರಬೇಕು. ಹೊರಗೆ ತಿರುಗಾಡುವಾಗಲೂ ಬಿಳಿಯ ಬಟ್ಟೆ, ಸ್ಕಾರ್ಫ್ ಧರಿಸಿರಬೇಕು.
5. ಚಪ್ಪಲಿ ಧರಿಸಿ ಓಡಾಡಬಹುದು.[ಡಯಾಬಿಟೀಸ್‌ನವರು ಬರಿ ಕಾಲಲ್ಲಿ ಓಡಾಡಬಾರದು. ಆದ್ದರಿಂದ ಚಪ್ಪಲಿ ನಿಷೇಧಿಸಿಲ್ಲ.]
6. ಜನವರಿ 14ರಂದು ಗಣಲಿಂಗ ದರ್ಶನ ಪಡೆದು, ಸಮುದಾಯ ಪ್ರಾರ್ಥನೆ ಮಾಡಿ, ವಚನ ಪಠಣ ಪೂರೈಸಿ, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಗಳಾಗಿ ಕರುಣ ಪ್ರಸಾದ ಸ್ವೀಕರಿಸಿದಾಗ ಆಯಾ ವರ್ಷದ ಶರಣ ವ್ರತ ಪೂರ್ತಿ-ಯಾಗುತ್ತದೆ.

(ವಿಶೇಷ ಸೂಚನೆ:- ಕೂಡಲ ಸಂಗಮದ ಶರಣ ಮೇಳಕ್ಕೆ ಬಂದ ವ್ರತಧಾರಿಗಳು ತಮ್ಮ ಹೆಸರನ್ನು ವಿಳಾಸವನ್ನು ಕೊಟ್ಟು 21ರೂ ಶುಲ್ಕ ತುಂಬಬೇಕು. ಅವರಿಗೆ ಒಂದು ಪದಕವನ್ನು ಮತ್ತು ಪ್ರಮಾಣ ಪತ್ರವನ್ನು ಕೊಡಲಾಗುವುದು.)

ವಚನ ದುಂದುಭಿ -19

- ಶರಣ ಸಚ್ಚಿದಾನಂದ ಚಟನಳ್ಳಿ

1. ಕರಣ ಹಸಿಗೆ ಎಂಬ ಗದ್ಯ ಸಾಹಿತ್ಯವನ್ನು ರಚಿಸಿದವರು ಯಾರು?
2. ಗುರು ಬಸವಣ್ಣನವರಿಗಿದ್ದ ಏಕೈಕ ಪುತ್ರನ ಹೆಸರೇನು?
3. "ಮರುಗದ ಗಿಡದಂತೆ ಹುಟ್ಟುತ್ತಲೆ ಪರಿಮಳ" ಎಂದು ಗುರು ಬಸವಣ್ಣನವರು ಯಾರ ಬಗ್ಗೆ ಹೇಳಿದ್ದಾರೆ ?
4. "ಎನ್ನ ಗಂಡ ಬರಬೇಕೆಂದು ಎನ್ನಂತರಂಗದ ಮನೆಯ ತೆರಹುಗೊಳಿಸಿ, ಅಷ್ಟದಳವೆಂಬ ಓವರಿ ಯೊಳಗೆ........" ಇದು ಯಾರ ವಚನ?
5. ಶರಣ ಸ್ಥಲದ ಭಕ್ತನ ಪ್ರಮುಖ ಲಕ್ಷಣವೇನು?
6. ಪಂಚ ಕೋಶಗಳು ಯಾವುವು?
7. ಸಪ್ತಧಾತುಗಳು ಯಾವುವು?
8. ಭವಿಪಾಕವೆಂದರೇನು?
9. "ಪ್ರಸಾದ ನಯನ "ವೆಂದರೇನು?
10. ಪ್ರಮಥರು ಮತ್ತು ಪುರಾತರು ಈ ಪದಗಳ ಅರ್ಥವೇನು?
11. "ಕೃತಯುಗದಲ್ಲಿ ನೀನು ಸ್ಕಂದನೆಂಬ ಗಣೇಶ್ವರನಾಗಿರ್ದುದ ನಾ ಬಲ್ಲೆ, ತ್ರೇತಾಯುಗದಲ್ಲಿ ನೀನು ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ನಾ ಬಲ್ಲೆ ಎಂದು ಯಾರು ಯಾರಿಗೆ ಹೇಳಿದರು?
12. "ಗುಬ್ಬಿ ಹೆರವರ ಮನೆಯ ತನ್ನ ಮನೆ ಎಂಬಂತೆ ಧರೆ, ಧನ, ಕನಕ, ವನಿತೆಯರು ಎನ್ನವರು ತನ್ನವರು ಎಂದು ಹೋರಿ ಹೋರಿ ಸಾಯುತ್ತಿದೆ ಜೀವ" - ಇದು ಯಾರ ವಚನ ?
13. "ನಿಸ್ಸೀಮ ಸುಖಿ" ಎಂದರೆ ಯಾರು?
14. ಗುಂಡಣ್ಣಗಳ ಪುಣ್ಯ ಸ್ತ್ರೀ ಕೇತಲಾದೇವಿಯ ವಚನಾಂಕಿತವೇನು?
15. ಧರ್ಮೇಶ್ವರ ಲಿಂಗ ಇದು ಯಾರ ವಚನಾಂಕಿತ?

ವಚನ ದುಂದುಭಿ -18ರ ಸರಿ ಉತ್ತರಗಳು

1. ನೀಲಗಂಗಮ್ಮತಾಯಿ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮತ್ತು ಪೂಜ್ಯ ಅಪ್ಪಾಜಿ
2. ಗುರು ಚನ್ನಬಸವಣ್ಣನವರ
3. ಗುರು ಚನ್ನಬಸವಣ್ಣನವರ
4. ದಾನಮ್ಮದೇವಿ
5. ಹಿಂದಿನ ಅನೇಕ ಜನ್ಮಗಳ ಕರ್ಮ
6. ಗುರು, ಲಿಂಗ, ಜಂಗಮ, ಪ್ರಸಾದದ ಪೂರ್ವಾಶ್ರಯಗಳನ್ನು ಕಳೆಯುವುದು
7. ವೀರ ವಿರಾಗಿಣಿ ಅಕ್ಕಮಹಾದೇವಿ
8. ಸಮಾಜದ ಹಾಗೂ ಅಂತರಂಗದ ಶತ್ರುಗಳೊಡನೆ ಹೋರಾಡುತ್ತ ಅವುಗಳಲ್ಲಿ ನೆಲೆಸಿರುವ ಅನಿಷ್ಟವನ್ನು ಅಳಿಸುವುದು.
9. ದೇಹ, ಮನಸ್ಸು, ಆತ್ಮ
10. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು
11. ತನ್ನನ್ನು ಪರಮಾತ್ಮನ ರೂಪ ಎಂದು ಸಾಧನೆಯಿಂದ ಅರಿಯುವುದು
12. ಗುರು ಬಸವಣ್ಣನವರು ಅಲ್ಲಮ ಪ್ರಭುದೇವರಿಗೆ
13. ಆರಂಬ ಎಂದರೆ ವ್ಯವಸಾಯ
14. ಶಮೆ, ದಮೆ, ಶಾಂತಿ, ಸೈರಣೆ, ಸತ್ಯ, ನಿತ್ಯ
15. ಸಿದ್ದ ಸೋಮನಾಥ ಲಿಂಗ

ವಚನ ದುಂದುಭಿ -18ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ, ಬೆಂಗಳೂರು
2. ಮಹಾರುದ್ರ ಡಾಕುಳಗಿ, ಬೆಂ
3. ರತ್ನಮ್ಮ ಜಯಣ್ಣ, ಮೈಸೂರು.
4. ಮಂಜುಳಾ, ಭದ್ರಾವತಿ
5. ವಿಜಯಾರಾಜು, ಭದ್ರಾವತಿ
6. ಕಲ್ಯಾಣಮ್ಮ, ಬೆಂಗಳೂರು
7. ಶಾಂತಮ್ಮ , ಭದ್ರಾವತಿ
8. ಸುಧಾ, ಬೆಂಗಳೂರು

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2009 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ತೆರಡನೆ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2009ನೆಯ ಇಸವಿಯ ದಿ.11 ರಿಂದ 15ರವರೆಗೆ ನಡೆಯುವ 22 ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2009 ನೆಯ ಇಸವಿಯ 22 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು


ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2008	ಶರಣ (ಶನಿ)ವಾರ	ವಿಜಯಪುರ
2.	02-11-2008	ದೇವ(ಭಾನು)ವಾರ	ತುರುವೇಕೆರೆ
3.	03-11-2008	ಶಿವ (ಸೋಮ)ವಾರ	ರಾಮಡಿಹಳ್ಳಿ
4.	04-11-2008	ಬಸವ (ಮಂಗಳ)ವಾರ	ಗುಡಿಗೊಂಡನಹಳ್ಳಿ

5.	05-11-2008	ಚನ್ನ(ಬುಧ)ವಾರ	ನಾಗರಘಟ್ಟ
6.	06-11-2008	ಪ್ರಭು(ಗುರು)ವಾರ	ಚಿಕ್ಕಮಗಳೂರು
7.	07-11-2008	ಮಾತೃ(ಶುಕ್ರ)ವಾರ	ದಾಬದಳ
8.	08-11-2008	ಶರಣ(ಶನಿ)ವಾರ	''
9.	09-11-2008	ದೇವ(ರವಿ)ವಾರ	''
10.	10-11-2008	ಶಿವ(ಸೋಮ)ವಾರ	''
11.	11-11-2008	ಬಸವ(ಮಂಗಳ)ವಾರ	''
12.	12-11-2008	ಚನ್ನ(ಬುಧ)ವಾರ	ಶಿವಮೊಗ್ಗ
13.	13-11-2008	ಪ್ರಭು(ಗುರು)ವಾರ	ಕೊಮ್ಮನಾಳ
14.	14-11-2008	ಮಾತೃ(ಶುಕ್ರ)ವಾರ	ಭದ್ರಾವತಿ
15.	15-11-2008	ಶರಣ(ಶನಿ)ವಾರ	''
16.	16-11-2008	ದೇವ(ಭಾನು)ವಾರ	ದಾವಣಗೆರೆ
17.	17-11-2008	ಶಿವ(ಸೋಮ)ವಾರ	ಚಿತ್ರದುರ್ಗ
18.	18-11-2008	ಬಸವ(ಮಂಗಳ)ವಾರ	ಹಿರಿಯೂರು
19.	19-11-2008	ಚನ್ನ(ಬುಧ)ವಾರ	ದೊಡ್ಡಉಳಾರ್ತಿ
20.	20-11-2008	ಪ್ರಭು(ಗುರು)ವಾರ	ಚಿತ್ರನಾಯ್ಕನ ಹಳ್ಳಿ
21.	21-11-2008	ಮಾತೃ(ಶುಕ್ರ)ವಾರ	ಚಳ್ಳಕೆರೆ
22.	22-11-2008	ಶರಣ(ಶನಿ)ವಾರ	ಬಳ್ಳಾರಿ
23.	23-11-2008	ದೇವ(ಭಾನು)ವಾರ	''
24.	24-11-2008	ಶಿವ(ಸೋಮ)ವಾರ	ಶಿರಗುಪ್ಪ
25.	25-11-2008	ಬಸವ(ಮಂಗಳ)ವಾರ	ರಾಯಚೂರು
26.	26-11-2008	ಚನ್ನ(ಬುಧ)ವಾರ	ಶಕ್ತಿನಗರ
27.	27-11-2008	ಪ್ರಭು(ಗುರು)ವಾರ	ದೆಹಲಿ
28.	28-11-2008	ಮಾತೃ(ಶುಕ್ರ)ವಾರ	ಪ್ರವಾಸ
29.	29-11-2008	ಶರಣ(ಶನಿ)ವಾರ	''
30.	30-11-2008	ದೇವ(ರವಿ)ವಾರ	''
31.	01-12-2008	ಶಿವ(ಸೋಮ)ವಾರ	ಹುಬ್ಬಳ್ಳಿ
32.	02-12-2008	ಬಸವ(ಮಂಗಳ)ವಾರ	ಧಾರವಾಡ
33.	03-12-2008	ಚನ್ನ(ಬುಧ)ವಾರ	ಅವರಾದಿ
34.	04-12-2008	ಪ್ರಭು(ಗುರು)ವಾರ	ಸವದತ್ತಿ
35.	05-12-2008	ಮಾತೃ(ಶುಕ್ರ)ವಾರ	''
36.	06-12-2008	ಶರಣ(ಶನಿ)ವಾರ	ಬೈಲಹೊಂಗಲ
37.	07-12-2008	ದೇವ(ರವಿ)ವಾರ	ಬೆಳಗಾವಿ
38.	08-12-2008	ಶಿವ(ಸೋಮ)ವಾರ	ಬೆಳಗಾವಿ

39.	09-12-2008	ಬಸವ(ಮಂಗಳ)ವಾರ	''
40.	10-12-2008	ಚನ್ನ(ಬುಧ)ವಾರ	''
41.	11-12-2008	ಪ್ರಭು(ಗುರು)ವಾರ	ಸಂಕೇಶ್ವರ
42.	12-12-2008	ಮಾತೃ(ಶುಕ್ರ)ವಾರ	ಗಡಿಹಿಂಗ್ಲಾಜ್
43.	13-12-2008	ಶರಣ(ಶನಿ)ವಾರ	ಗೋಕಾಕ್
44.	14-12-2008	ದೇವ(ರವಿ)ವಾರ	''
45.	15-12-2008	ಶಿವ(ಸೋಮ)ವಾರ	''
46.	16-12-2008	ಬಸವ(ಮಂಗಳ)ವಾರ	''
47.	17-12-2008	ಚನ್ನ(ಬುಧ)ವಾರ	ತೇಗುಣಸಿ
48.	18-12-2008	ಪ್ರಭು(ಗುರು)ವಾರ	ಶಂಕರಹಟ್ಟಿ
49.	19-12-2008	ಮಾತೃ(ಶುಕ್ರ)ವಾರ	ಖವಟಕೊಪ್ಪ
50.	20-12-2008	ಶರಣ(ಶನಿ)ವಾರ	ತಾಂವಶಿ
51.	21-12-2008	ದೇವ(ರವಿ)ವಾರ	ಕನಮಡಿ
52.	22-12-2008	ಶಿವ(ಸೋಮ)ವಾರ	ಕಗ್ಗೋಡ
53.	23-12-2008	ಬಸವ(ಮಂಗಳ)ವಾರ	ಬಿಜಾಪುರ
54.	24-12-2008	ಚನ್ನ(ಬುಧ)ವಾರ (ಸಂಜೆ)	ಗುಲಬರ್ಗಾ, ಶಹಾಬಾದ್
54.ಅ	25-12-2008	ಬೆಳಿಗ್ಗೆ 11 ಗಂಟೆಗೆ	ಗುಲಬರ್ಗಾ ಬ.ಮಂಟಪ
55.	25-12-2008	ಪ್ರಭು(ಗುರು)ವಾರ (ಸಂಜೆ)	'' ಫರಹತಾಬಾದ್
56.	26-12-2008	ಮಾತೃ(ಶುಕ್ರ)ವಾರ	ಯಲಮಾಮಿಡಿ
57.	27-12-2008	ಶರಣ(ಶನಿ)ವಾರ	ಉದಗೀರ್
58.	28-12-2008	ದೇವ(ರವಿ)ವಾರ	ಬೀದರ್
59.	29-12-2008	ಶಿವ(ಸೋಮ)ವಾರ	''
60.	30-12-2008	ಬಸವ(ಮಂಗಳ)ವಾರ	ಜಹಿರಾಬಾದ್
61.	31-01-2008	ಚನ್ನ(ಬುಧ)ವಾರ	ಹೈದ್ರಾಬಾದ್
62.	01-01-2009	ಪ್ರಭು(ಗುರು)ವಾರ	ಹೈದ್ರಾಬಾದ್
63.	02-01-2009	ಮಾತೃ(ಶುಕ್ರ)ವಾರ	''
64.	03-01-2009	ಶರಣ(ಶನಿ)ವಾರ	''
65.	04-01-2009	ದೇವ(ರವಿ)ವಾರ	''
66.	05-01-2009	ಶಿವ(ಸೋಮ)ವಾರ	''
67.	06-01-2009	ಬಸವ(ಮಂಗಳ)ವಾರ	''
70.	07-01-2009	ಚನ್ನ(ಬುಧ)ವಾರ	''
71.	08-01-2009	ಪ್ರಭು(ಗುರು)ವಾರ	''
72.	09-01-2009	ಮಾತೃ(ಶುಕ್ರ)ವಾರ	''
73.	10-01-2009	ಶರಣ(ಶನಿ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ




ಬಸವ ಕುಮಾರ ಸ್ವಾಮಿಜಿಯವರಿಂದ ಗೋಷ್ಠಿಯ ಉದ್ಘಾಟನೆ









ಚಿಂತನಗೋಷ್ಠಿಯ ಉದ್ಘಾಟನೆ ಸುಭಾಷ್ ಅಸ್ತೂರೆ ಅವರಿಂದ



ಬೀದರ್ ದಲಿತ ನೇತಾರ ಪಾಂಡುರಂಗ ಸೂರ್ಯವಂಶಿ ಅವರಿಂದ ಮರಾಠಿ ಗೋಷ್ಠಿ ಉದ್ಘಾಟನೆ.







ಜಗದ್ಗುರು ಮಾತೆ ಗಂಗಾದೇವಿಯವರ ಅಧ್ಯಕ್ಷತೆಯಲ್ಲಿ ಮರಾಠಿ ಭಾಷಾ ಗೋಷ್ಠಿ




ಶರಣೆಯರಿಂದ ಶರಣ ವಂದನೆ







ಶರಣರಿಂದ ಧ್ವಜ ವಂದನೆ



ಮನಸೂರೆಗೊಂಡ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ನೃತ್ಯ ರೂಪಕ ತಂಡದವರು.










ಕು॥ ಸ್ವಾತಿ ಮದ್ದೂರ್,ಚೈತ್ರ ಇವರಿಂದ ವಚನಾಭಿನಯ




ಶರಣ ಭೂಮಿ ಬಸವಕಲ್ಯಾಣದ ರಾಜಬೀದಿಯಲ್ಲಿ ಮತ್ತೆ ಮರುಕಳಿಸಿದ ಗತವೈಭವ








 ಶರಣ ಶರಣೆಯರಿಂದ ಆಕರ್ಷಕ ಸಂಭ್ರಮದ ಪಥಸಂಚಲನ



ಕೈಲಾಸ ಪರ್ವತ ಶಿಖರದ [illegible]









[illegible] ಕಟ್ಟೆಯಲ್ಲಿ ಪೂಜೆ ಮಾಡುತ್ತಿರುವ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಹಾಗೂ ಶರಣ ಶರಣೆಯರು







ಬಸವ ಭೂಮಿಯು ಮತ್ತೆ ಬಸವಾದಿ ಪ್ರಮಥರಿಂದ ವೈಭವದಿ ಮೆರೆದ ಪಥಸಂಚಲನ
ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ.